ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಸಂಪುಟ 2 ಸಂಚಿಕೆ 29

ಜುಲೈ 20, 2008

ಕನ್ನಡ ವಾರಪತ್ರಿಕೆ

ರೂ. 5/-

www.janashakthi.org



ಅಮೆರಿಕಾ ಅಡಿಯಾಳಾಗಲು ಕಾತುರ
ಬೆಂಬಲ ಕಳಕೊಂಡ ಯುಪಿಎ ಸರ್ಕಾರ

ಗಂಗಾವತಿ : ಚೆಡ್ಡಿಪಡೆಗೆ ಗೋಮಾಂಸದ್ದೇ ನೆಪ



ಆಗಸ್ಟ್ 20 : ದುಡಿಯುವ ಜನರೇಕೆ ಮುಷ್ಕರ ಹೂಡಲಿದ್ದಾರೆ?



ವಿಜಯ ಕರ್ನಾಟಕದ ಸುಳ್ಳಿನ ಸರದಾರ

ಪಠ್ಯಪುಸ್ತಕ ಪರಿಷ್ಕರಣೆ : ಶವಪೆಟ್ಟಿಗೆಯ ಮೊದಲ ಮೊಳೆ


‘ಮಾರ್ಕ್ಸ್‌ವಾದಿ ಟೀಚರ್’ ಕಾಮ್ರೇಡ್ ಪಿ.ಆರ್.ಸಿ.

ಕಾಂ: ಪಿ.ರಾಮಚಂದ್ರನ್ ಇನ್ನಿಲ್ಲ. ಸಿಪಿಐ(ಎಂ)ನ ಪಕ್ಷದ ಮಾಜಿ ಪಾಲಿಟ್‌ಬ್ಯೂರೋ ಸದಸ್ಯರು, ಹಾಲಿ ಕೇಂದ್ರ ಸಮಿತಿಯ ಆಹ್ವಾನಿತ ಸದಸ್ಯರೂ ಆಗಿದ್ದ ಕಾಂ:ಪಿ.ರಾಮಚಂದ್ರನ್ ಜುಲೈ 8, 2008 ರ ಬೆಳಗಿನ ಜಾವ ನಿಧನರಾಗಿದ್ದಾರೆ.

ದೇಶದಾದ್ಯಂತ ಪಿ.ಆರ್.ಸಿ.ಎಂದೇ ಪರಿಚಿತರಾಗಿದ್ದ ಪಿ.ರಾಮಚಂದ್ರನ್, ಪಕ್ಷದ ಕೇಂದ್ರ ಸಮಿತಿಯ ಪರವಾಗಿ ಸಾಕಷ್ಟು ಕಾಲ ಸಿಪಿಐ(ಎಂ)ನ ಕರ್ನಾಟಕ ರಾಜ್ಯ ಸಮಿತಿಗೆ ಸಹ ಮಾರ್ಗದರ್ಶನದ ಜವಾಬ್ದಾರಿ ಹೊಂದಿದ್ದವರು. ಅವರು ಕಾರ್ಮಿಕ ಮುಖಂಡರೂ, ಸಿಪಿಐ(ಎಂ) ಮುಖಂಡರೂ, ಜೊತೆಗೆ ಮಾರ್ಕ್ಸ್‌ವಾದ ವನ್ನು ಕಲಿಸುವ ಉತ್ತಮ ಶಿಕ್ಷಕರೂ ಆಗಿದ್ದರು.

ಪಿಆರ್‌ಸಿಯವರು 1925 ರಲ್ಲಿ ಕೇರಳದ ತಲ್ಲಿಚೇರಿಯಲ್ಲಿ ಹುಟ್ಟಿದರು. ಅವರ ತಂದೆ ಶಂಕರ್ ಮೆನನ್ ಮಲಬಾರಿನ ಕಮ್ಯೂನಿಸ್ಟ್ ಸ್ವಾತಂತ್ರ್ಯ ಹೋರಾಟಗಾರರ ಪರವಾಗಿ ವಾದ ಮಾಡಿದ ವಕೀಲರಾಗಿದ್ದರು. ಅದೇ ಪ್ರಗತಿಪರ ಮಾರ್ಗದಲ್ಲೇ ಕಾಂ: ಪಿ.ಆರ್.ಸಿ. ಹೆಜ್ಜೆ ಇಟ್ಟರು. 1939ರಲ್ಲಿ ಪಿಆರ್‌ಸಿ ಅಂದಿನ ಅಖಿಲ ಭಾರತ ವಿದ್ಯಾರ್ಥಿ ಒಕ್ಕೂಟ (ಎಐಎಸ್‌ಎಫ್)ದ ಸದಸ್ಯರಾಗಿ ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿದರು. 83ನೇ ವಯಸ್ಸಿನಲ್ಲಿ ಅವರು ಕೊನೆಯುಸಿರೆಳೆಯು ವವರೆಗೂ ಅದೇ ಕ್ರಾಂತಿಕಾರಿ ದಾರಿಯಲ್ಲೇ ನಡೆದರು.

1941ರಲ್ಲಿ ಅಂದಿನ ಅವಿಭಜಿತ ಕಮ್ಯುನಿಸ್ಟ್ ಪಕ್ಷ ಸಿಪಿಐನ ಸದಸ್ಯ ರಾದರು. 1964ರಲ್ಲಿ ಪಕ್ಷ ವಿಭಜನೆಯಾದಾಗ ಸಿಪಿಐ(ಎಂ) ಸೇರಿದರು. ಅವರು ಮೂಲತಃ ಮಲೆಯಾಳಿಯಾದರೂ ಅವರ ಮುಖ್ಯ ಕಾರ್ಯಕ್ಷೇತ್ರ ನೆರೆಯ ತಮಿಳುನಾಡಾಯಿತು. ಇಂದಿನ ತಮಿಳುನಾಡಿನ ತಿರುಚಿನಾಪಲ್ಲಿ ಜಿಲ್ಲೆಯ ಸಿಪಿಐ(ಎಂ) ಸಮಿತಿಯ ಕಾರ್ಯದರ್ಶಿಯಾಗಿ 1964 ರಿಂದ 1977 ರವರೆಗೆ ಅವರು ದುಡಿದರು. 64 ರಿಂದ 89 ರವರೆಗೆ ಸಿಪಿಐ(ಎಂ) ತಮಿಳುನಾಡು ರಾಜ್ಯ ಸಮಿತಿ ಸದಸ್ಯರಾಗಿದ್ದರು. 1985 ರಿಂದ 2008 ರ ನಡುವಿನ ಅವಧಿಯಲ್ಲಿ ಅವರು ಪಕ್ಷದ ಕೇಂದ್ರ ಸಮಿತಿ ಸದಸ್ಯರಾಗಿದ್ದರು. 98 ರಲ್ಲಿ ಅವರು ಕೇಂದ್ರ ಕಾರ್ಯದರ್ಶಿ ಮಂಡಳಿಗೂ 1992 ರಿಂದ 2005ರ ಅವಧಿಗೆ ಪಾಲಿಟ್‌ಬ್ಯೂರೋಗೂ



ಆಯ್ಕೆಯಾಗಿದ್ದರು.

ಅವರು ತಿರುಚ್ಚಿಯ ಬಿಹೆಚ್‌ಇಎಲ್ ಕಾರ್ಮಿಕರ ಸಂಘದ ಅಧ್ಯಕ್ಷರಾಗಿದ್ದರು ಮತ್ತು ಸಿಐಟಿಯು ಜನರಲ್ ಕೌನ್ಸಿಲ್‌ನ ಸದಸ್ಯರೂ ಆಗಿದ್ದರು. ತಮ್ಮ ಸುದೀರ್ಘ ಹೋರಾಟದ ಜೀವನದಲ್ಲಿ ಪಿಆರ್‌ಸಿಯವರು 4 ವರ್ಷಗಳ ಕಾಲ ಜೈಲು ವಾಸ, ಮೂರು ವರ್ಷ ಭೂಗತವಾಸ ಅನುಭವಿಸದವರಾಗಿದ್ದಾರೆ.

‘ಒಬ್ಬ ಕಮ್ಯೂನಿಸ್ಟ್‌ನ ನೆನಪಿನ ಪುಸ್ತಕ’ ಎಂಬ ತಮ್ಮ ಜೀವನದ ಅನುಭವ, ನೆನಪುಗಳ ಆತ್ಮಕತೆಯನ್ನು ಅವರು ಬರೆದಿದ್ದಾರೆ. ಅವರು ಪತ್ನಿ ಜಾನಕಿ, ಮಕ್ಕಳಾದ ಗೋಪಿನಾಥ್, ವಿಜಯ ಶಂಕರ್(ಫ್ರಂಟ್‌ಲೈನ್ ನಿಯತಕಾಲಿಕದ ಸಹಾಯಕ ಸಂಪಾದಕರು) ಹಾಗೂ ಮಗಳು ಪದ್ಮಕುಮಾರಿಯನ್ನು ಅಗಲಿದ್ದಾರೆ.

ಅಂತಿಮ ಯಾತ್ರೆ: ಅವರು ಇತ್ತೀಚೆಗೆ ಮಂಡಿ ನೋವಿನ ನಿವಾರಣೆ ಸಲುವಾಗಿ ಚೆನ್ನೈನ ಖಾಸಗಿ ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರು. ಅವರಲ್ಲಿ ಚೇತರಿಕೆ ಕಂಡು ಬಂದಿತ್ತಾದರೂ ಜುಲೈ 8 ರ ಬೆಳಗಿನ ಜಾವ ಅವರ ದೇಹದ ಹಲವಾರು ಅಂಗಾಂಗಗಳು ವಿಫಲವಾಗಿ ಅವರು ಕೊನೆಯುಸಿರೆಳೆದರು.

ಪಿ.ಆರ್.ಸಿ.ಯವರ ಮೃತದೇಹವನ್ನು ಚೆನ್ನೈ ಜಿಲ್ಲಾ ಸಮಿತಿ ಕಛೇರಿಯ ಮುಂದೆ ಅಂತಿಮ ದರ್ಶನಕ್ಕೆ ಇಡಲಾಗಿತ್ತು. ಸಹಸ್ರಾರು ಜನರು ಸಿಪಿಐ(ಎಂ) ಕಾರ್ಯಕರ್ತರು, ಮುಖಂಡರಲ್ಲದೆ, ಸಿಪಿಐ, ಡಿಎಂಕೆ ಮುಂತಾದ ಪಕ್ಷಗಳ ಮುಖಂಡರು ಅಂತಿಮ ಗೌರವ ಸಲ್ಲಿಸಿದರು. ಸಿಪಿಐ(ಎಂ) ಪಕ್ಷದ ಪಾಲಿಟ್ ಬ್ಯೂರೋ ಸದಸ್ಯರಾದ ಎಸ್.ರಾಮಚಂದ್ರನ್ ಪಿಳ್ಳೈ, ಕೆ.ವರದರಾಜನ್, ಕೋಡಿಯೇರಿ ಬಾಲಕೃಷ್ಣನ್ ಅಂತ್ಯ ಸಂಸ್ಕಾರದಲ್ಲಿ ಪಾಲ್ಗೊಂಡಿದ್ದರು.

ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿಯ ಕಾರ್ಯದರ್ಶಿ ಹಾಗೂ ಕೇಂದ್ರ ಸಮಿತಿ ಸದಸ್ಯರಾದ ಕಾಂ: ವಿ.ಜೆ.ಕೆ.ನಾಯರ್‌ರವರು ಸಹ ಅಂತ್ಯ ಸಂಸ್ಕಾರದಲ್ಲಿ ಪಾಲ್ಗೊಂಡಿದ್ದರು. ಸಂಸ್ಕಾರದ ಸಂದರ್ಭದಲ್ಲಿ ನಡೆದ ಶ್ರದ್ಧಾಂಜಲಿ ಸಭೆಯಲ್ಲಿ ಕಾಂ: ವಿ.ಜೆ.ಕೆ.ನಾಯರ್ ಸಹ ಮಾತನಾಡಿದ್ದಾರೆ.

ಬೆಂಗಳೂರಿನಲ್ಲಿ ಶ್ರದ್ಧಾಂಜಲಿ ಸಭೆ: ಪಿ.ಆರ್.ಸಿ.ಯವರ ನಿಧನ ಸುದ್ದಿ ತಿಳಿದ ಮೇಲೆ ಪಕ್ಷದ ರಾಜ್ಯ ಸಮಿತಿ ಕಛೇರಿಯ ಕೆಂಬಾವುಟವನ್ನು ಅರ್ಧ ಮಟ್ಟಕ್ಕೆ ಇಳಿಸಲಾಯಿತು. ಪಕ್ಷದ ಮುಖಂಡರು, ಕಾರ್ಯಕರ್ತರು ಪಾಲ್ಗೊಂಡ ಶ್ರದ್ಧಾಂಜಲಿ ಸಭೆಯು ಮಧ್ಯಾಹ್ನ ನಡೆಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ: ಜಿ.ಎನ್.ನಾಗರಾಜ್, ಪಿ.ಆರ್.ಸಿ.ಯವರು ಕಾರ್ಮಿಕ ಮುಖಂಡರು, ಸಿಪಿಐ(ಎಂ) ನೇತಾರರಾಗಿ ಪಕ್ಷಕ್ಕೆ ಕೊಟ್ಟ ಕೊಡುಗೆಯನ್ನು ನೆನಪಿಸಿಕೊಂಡರು. ಸಮಾಜವಾದಿ ಸೋವಿಯತ್ ಒಕ್ಕೂಟದ ಪತನದ ನಂತರ ಅವಧಿಯಲ್ಲಿ ಸಮಾಜವಾದದ ವಿರುದ್ಧ ಜಾಗತಿಕವಾಗಿ ತೀವ್ರ ಧಾಳಿ ಎದ್ದು ಬಂದ ಅವಧಿಯಲ್ಲಿ ಸೋವಿಯತ್ ಒಕ್ಕೂಟದ ಪತನದ ಕುರಿತು ಕಾಂ: ಪಿ.ಆರ್.ಸಿ. ಯವರು ನಡೆಸಿದ ಅಧ್ಯಯನವನ್ನು ಅವರು ನೆನಪಿಸಿಕೊಂಡರು. ಮಾರ್ಕ್ಸ್‌ವಾದ, ಲೆನಿನ್‌ವಾದವನ್ನು ಎಲ್ಲರಿಗೂ ಅರ್ಥವಾಗುವಂತೆ ಅತ್ಯಂತ ಸರಳವಾಗಿ ವಿವರಿಸುವ ಅವರ ವಿಶೇಷತೆಯನ್ನು ಜಿ.ಎನ್.ನೆನಪಿಸಿಕೊಂಡರು.

ವಿ.ಜೆ.ಕೆ. ನೆನಪುಗಳು: ಕಾಂ: ವಿ.ಜೆ.ಕೆ.ಯವರು ಜನಶಕ್ತಿಯೊಂದಿಗೆ ಪಿ.ಆರ್.ಸಿ.ಕುರಿತು ಕೆಲವು ನೆನಪುಗಳನ್ನು ಹಂಚಿಕೊಂಡರು. ಅದು 1973ರ ಅವಧಿ. ಆಗ ಕಾಂ: ವಿ.ಜೆ.ಕೆ.ಯವರು ಸಾರ್ವಜನಿಕ ಕ್ಷೇತ್ರದ ಕೈಗಾರಿಕೆಗಳ ಕಾರ್ಯಕರ್ತರಾಗಿ ಮುಖಂಡರಾಗಿ ಬೆಳೆದು ಬರುತ್ತಿದ್ದ ಸಮಯ. ಆ ಹೊತ್ತಿನಲ್ಲೇ ತಿರುಚಿನಪಳ್ಳಿಯ ಬಿಹೆಚ್‌ಇಎಲ್ ಘಟಕದ ಮುಖಂಡರಾಗಿದ್ದ ಕಾಂ: ಪಿ.ಆರ್.ಸಿ.ಯವರನ್ನು ಭೇಟಿ ಮಾಡಿ ಹೋರಾಟಗಳ ಅನುಭವವನ್ನು ಪರಸ್ಪರ ಹಂಚಿಕೊಂಡರಂತೆ.

ಇಂಥದ್ದೇ ಮತ್ತೊಂದು ಸಂದರ್ಭ 78-79ರ ಸುಮಾರಿನಲ್ಲಿ ಕರ್ನಾಟಕದ ಸಿಪಿಐ(ಎಂ) ನೊಳಗೆ ವಿದೇಶಿ ಸಂಬಂಧಗಳಿದ್ದ ಎಡ ಕ್ರಿಶ್ಚಿಯನ್ ಮತ್ತು ಎನ್‌ಜಿಓ ಗಳು ನುಸುಳಿಕೊಂಡಿದ್ದ ಕಾಲ. ಪಕ್ಷ ಸಮಸ್ಯೆ ಎದುರಿಸುತ್ತಿತ್ತು. ಮಹಿಳಾ ಚಳುವಳಿಯಲ್ಲೂ ಇಂತಹ ಸಮಸ್ಯೆ ಇತ್ತು. ಪಕ್ಷದ ತಮಿಳುನಾಡಿನಲ್ಲಿ ಇಂಥದ್ದೇ ಸಮಸ್ಯೆ ಎದುರಿಸುತ್ತಿದ್ದರಿಂದ ಈ ಪರಿಸ್ಥಿತಿಯನ್ನು ಎದುರಿಸುವ ನಿಟ್ಟಿನಲ್ಲಿ ವಿಜೆಕೆಯವರು ಕಾಂ: ಪಿ.ಆರ್.ಸಿ.ಯವರೊಂದಿಗೆ ಚರ್ಚಿಸಿದ್ದರಿಂದ ಅಲ್ಲಿ ಮತ್ತು ಇಲ್ಲಿನ ಸಮಸ್ಯೆಗಳ ಕೆಲವು ಸಾಮಾನ್ಯ ಅಂಶಗಳನ್ನು ಕಂಡುಕೊಳ್ಳಲು ಸಾಧ್ಯವಾಯಿತು.

ಅವರದ್ದೇ ಆದ ಮಾರ್ಗದಲ್ಲಿ ಮಾರ್ಕ್ಸ್‌ವಾದವನ್ನು ಅಧ್ಯಯನ ಮಾಡಿ ಯುವಜನರನ್ನು ತರಬೇತುಗೊಳಿಸುವ, ಪಕ್ಷವನ್ನು ಬೆಳೆಸುವ ಮಾದರಿ ಅನುಸರಿಸುತ್ತಾ ಬಂದರು ಎಂದು ಕಾಂ:ವಿಜೆಕೆ, ಪಿಆರ್‌ಸಿಯವರ ಕೊಡುಗೆಯನ್ನು ನೆನಪಿಸಿಕೊಂಡರು.

ಇದ್ದದ್ದು ಇದ್ದಾಂಗ...

‘ಪಾದಕ್ಕೆ ಅರ್ಪಿಸಿದ್ದೇನೆ’

“ಐದು ವರ್ಷಗಳ ಕಾಲ ನಪುಂಸಕನಂತೆ ಕಾಂಗ್ರೆಸ್ ಶಾಸಕನಾಗಿ ಉಳಿಯುವ ಬದಲು ಬಿಜೆಪಿ ನೇತೃತ್ವದಲ್ಲಿ ನಾಡಿನ ಅಭ್ಯುದಯ ಆಗಲಿ ಎಂದು 40 ದಿನಗಳಲ್ಲೇ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿ ತುರುವೇಕೆರೆ ಕ್ಷೇತ್ರವನ್ನು ಯಡಿಯೂರಪ್ಪ ಅವರ ಪಾದಕ್ಕೆ ಅರ್ಪಿಸಿದ್ದೇವೆ. ಇನ್ನು ಕ್ಷೇತ್ರದ ಅಭಿವೃದ್ಧಿ ಚಿತ್ರಣ ಬದಲಾಗುವುದನ್ನು ಎಲ್ಲರೂ ಕಣ್ಣಾರೆ ನೋಡಲಿದ್ದಾರೆ.”

-ಜಗ್ಗೇಶ್, ಚಿತ್ರನಟ

ಸಾಧ್ಯವಿಲ್ಲ

“ಇರಾನ್, ವೆನೆಜುವೆಲಾ ಅಥವಾ ಇತರ ತೈಲೋತ್ಪಾದಕ ರಾಷ್ಟ್ರಗಳ ಮೇಲೆ ಹುಚ್ಚು ಹುಚ್ಚಾಗಿ ಬೆದರಿಕೆಯೊಡ್ಡುವುದನ್ನು ಅಮೇರಿಕಾ ಮತ್ತು ಇತರೆ ಬಲಿಷ್ಠ ದೇಶಗಳು ಮೊದಲು ನಿಲ್ಲಿಸಲಿ. ಇಲ್ಲದಿದ್ದಲ್ಲಿ ತೈಲ ಬೆಲೆ ಕಡಿಮೆಯಾಗಲು ಸಾಧ್ಯವೇ ಇಲ್ಲ. ಇರಾಕನ್ನು ಅತಿಕ್ರಮಿಸಿಕೊಂಡಿರುವ ಪಡೆಗಳು ಹಿಂದೆ ಬರಲಿ ಆಗಲೇ ತೈಲ ಬೆಲೆ ಇಳಿಯುವುದನ್ನು ನೀವು ನೋಡಬಹುದು”

-ಹ್ಯುಗೋ ಚಾವೇಜ್,
ವೆನೆಜುವೆಲಾ ಅಧ್ಯಕ್ಷರು

ಪ್ರತಿಭೆಯೋ ಪ್ರತಿಭೆ

“ಜಾಗರೀಕರಣದಿಂದಾಗಿ ಪ್ರತಿಭೆ ಹಾಗೂ ಯೋಗ್ಯತೆಗೆ ಪ್ರಾಶಸ್ತ್ಯ ಸಿಕ್ಕಿದ್ದು ಬ್ರಾಹ್ಮಣ ಯುವಕರು ಗಲಿಬಿಲಿಗೊಳ್ಳಬೇಕಾದ ಅಗತ್ಯವಿಲ್ಲ. ಹಿಂದೆಲ್ಲಾ ಸರ್ಕಾರಿ ನೌಕರಿ ಶಿಕ್ಷಣದಲ್ಲಿ ಶೇ.80 ರಷ್ಟು ಮೀಸಲಾತಿಯಿತ್ತು. ಸಂಘ (ಬ್ರಾಹ್ಮಣ) ದ ಹೋರಾಟದ ಫಲವಾಗಿ ಮೀಸಲಾತಿ ಶೇ.50ಕ್ಕೆ ಇಳಿದಿದೆ. ಇದನ್ನು ಬ್ರಾಹ್ಮಣದ ಯುವಕರು ಸಮರ್ಪಕವಾಗಿ ಬಳಸಿಕೊಳ್ಳಬೇಕು.”

-ಡಾ: ವಿ.ಎಸ್.ಆಚಾರ್ಯ
ರಾಜ್ಯ ಗೃಹ ಮಂತ್ರಿ

‘ಸಿಂಹ ಹಾಗೆಯೇ ಇದೆ’?!

“ಇತಿಹಾಸದ ಬಗೆಗೆ ಹೆಮ್ಮೆ ಗೌರವ ಇರಬೇಕು. ಆದರೆ ನಮಗೆಲ್ಲಾ ನಮ್ಮತನ ಮರೆಸುವ ಗುಲಾಮೀತನದ ಶಿಕ್ಷಣ ಸಿಕ್ಕಿದೆ. ಗುಲಾಮಿ ಶಿಕ್ಷಣ ಪಡೆದರೂ ನಮ್ಮೊಳಗಿನ ಸಿಂಹ ಹಾಗೆಯೇ ಇದೆ. ಸಿಂಹತ್ವ ಪ್ರಕಟವಾಗುವ ಗುಣ ಬರಬೇಕು. ಹಿಂದೂ ಸಮಾಜದ ಎಲ್ಲಾ ಕೊರತೆಗಳನ್ನು ನೀಗಿಸಿ, ಬಲಿಷ್ಠ ಹಿಂದೂ ಸಮಾಜ ಸ್ಥಾಪಿಸಿ, ದೇಶವನ್ನೂ ಅಭಿವೃದ್ಧಿಯತ್ತ ಮುನ್ನಡೆಸಲು ಇದು ಸಹಕಾರಿಯಾಗಲಿ”

-ವಿಶ್ವೇಶ್ವರ ಹೆಗಡೆ ಕಾಗೇರಿ,
ರಾಜ್ಯ ಪ್ರಾಥಮಿಕ ಶಿಕ್ಷಣ ಸಚಿವ

ಸಂಪಾದಕೀಯ-

ಮಹಾ ಸಂಗ್ರಾಮದತ್ತ

ಇದೊಂದು ಆಘಾತಕಾರಿ ಒಪ್ಪಂದ ದೇಶದ ಇತಿಹಾಸದಲ್ಲಿ ಒಂದು ಕರಾಳ ಅಧ್ಯಾಯವೂ. 2007ರ ನವೆಂಬರ್‌ನಲ್ಲಿ ಯಾವುದನ್ನೂ 'ನೆನಗುದಿಗೆ ಬಿದ್ದ' ವಿಷಯವೆಂದು ಯಾರು ಹೇಳಿದ್ದರೋ ಅವರೇ, ದಿಢೀರನೆ ದೇಶದ ಜನತೆಗೆ ಸರ್ಕಾರ ರಚನೆಗೆ ಊರುಗೋಲಾಗಿ ಬೆಂಬಲಿಸಿದ್ದ ಎಡಪಕ್ಷಗಳನ್ನು ವಂಚಿಸಿ ಭಾರತ ಅಮೇರಿಕಾ ಅಣು ಒಪ್ಪಂದವನ್ನು ಪೂರ್ಣಗೊಳಿಸುವ ನಿಟ್ಟಿನಲ್ಲಿ ಪ್ರಧಾನಿ ಮನಮೋಹನ್‌ಸಿಂಗರು ಪ್ರಮುಖ ಹೆಜ್ಜೆ ಇರಿಸಿದ್ದು ಆಘಾತಕಾರಿ ಬೆಳವಣಿಗೆ.

'ಸಂಸತ್‌ನಲ್ಲಿ ವಿಶ್ವಾಸಮತವನ್ನು ಪಡೆದ ನಂತರವೇ ಅಂತರರಾಷ್ಟ್ರೀಯ ಅಣುಶಕ್ತಿ ಸಂಸ್ಥೆ(ಐಎಇಎ)ಯ ಮುಂದೆ ಸುರಕ್ಷಾ ಒಪ್ಪಂದದ ಕರಡು ನೀಡುವುದೆಲ್ಲ' ಎಂದು ವಿದೇಶಾಂಗ ಸಚಿವ ಪ್ರಣವ್ ಮುಖರ್ಜಿ ದೇಶದ ಜನತೆಯ ಮುಂದೆ ವಚನ ನೀಡಿದ್ದರೋ ಅದಾದ ಎರಡು ದಿನಗಳಲ್ಲೇ ಬುಶ್‌ರೊಂದಿಗೆ ಮಾತನಾಡಿ ಎಐಇಎಗೆ ಸುರಕ್ಷಾ ಒಪ್ಪಂದ ಕರಡು ಪ್ರತಿ ನೀಡಿದ್ದು ಖಂಡನೀಯವಾಗಿದೆ. ಮಾತ್ರವಲ್ಲ ಅದರಲ್ಲಿನ ವಿಷಯಗಳನ್ನು ಎಡಪಕ್ಷಗಳಿಗೂ, ದೇಶದ ಜನತೆಗೂ ತಿಳಿಸುವುದಿಲ್ಲವೆಂದು ಬಚ್ಚಿಡಲು ಕಾಪಾಡಲು ಯತ್ನಿಸಿದ್ದು ಪ್ರಜಾಪ್ರಭುತ್ವದ ಮೌಲ್ಯಗಳಿಗೆ ಮಾಡಿದ ಅವಹೇಳನವಾಗಿದೆ. ಆ ಒಪ್ಪಂದಗಳನ್ನು ಐಎಇಎ ಮೊದಲು ಅಂತರ್ಜಾಲದಲ್ಲಿ ಪ್ರಕಟಿಸಿದ ಬಳಿಕ ಮುಖಭಂಗ ತಪ್ಪಿಸಿಕೊಳ್ಳಲು ಭಾರತ ಪ್ರಕಟಿಸಿದ್ದು ನಾಚಿಕೆಗೇಡಿನ ಸಂಗತಿ.

ದೇಶದ ಸ್ವಾತಂತ್ರ್ಯ, ಸಾರ್ವಭೌಮತೆ, ಅಲಿಪ್ತ ವಿದೇಶಾಂಗ ನೀತಿಗೆ ತಿಲಾಂಜಲಿ ನೀಡಿ, ಭಾರತ ದೇಶವನ್ನು ಅಮೇರಿಕಾ ಸಾಮ್ರಾಜ್ಯಶಾಹಿಗಳ ಅಡಿಯಾಳಾಗಿ ಮಾಡುವಲ್ಲಿ ಮತ್ತೊಂದು ಅತ್ಯಂತ ಪ್ರಮುಖ ನಿರ್ಧಾರವನ್ನು ಯು.ಪಿ.ಎ. ಸರ್ಕಾರ ಕೈಗೊಂಡಿದೆ. ಇದು ಸರ್ಕಾರ ರಚನೆಯಾಗುವಾಗ ಕಾಂಗ್ರೆಸ್ ನೇತೃತ್ವದ ಯುಪಿಎ ಮತ್ತು ಎಡಪಕ್ಷಗಳ ನಡುವೆ ಆಧಾರವಾದ 'ಸಾಮಾನ್ಯ ಕನಿಷ್ಟ ಕಾರ್ಯಕ್ರಮ' (ಸಿಎಂಪಿ)ಕ್ಕೆ ವಿರುದ್ಧವಾದುದು. ಈ ತಿಳುವಳಿಕೆಯನ್ನೇ ಉಲ್ಲಂಘಿಸಿರುವ ಕಾಂಗ್ರೆಸ್ ಪಕ್ಷ ವಿಶ್ವಾಸದ್ರೋಹವೆಸಗಿದೆ. ದೇಶದ ಹಿತಕ್ಕಿಂತ ದೇಶದ ದೊಡ್ಡ ಬಂಡವಾಳಗಾರರ, ಬಹುರಾಷ್ಟ್ರೀಯ ಕಂಪನಿಗಳು, ಭೂ ಮಾಲೀಕರ ಹಿತವೇ ಪರಮೋಚ್ಚ ಎಂದು ಕಾಂಗ್ರೆಸ್ ಮತ್ತೇ ತನ್ನ ವರ್ಗ ಗುಣವನ್ನು ತೋರಿಸಿದೆ. ಆದ್ದರಿಂದಲೇ ಆ ಒಪ್ಪಂದ ದೇಶದ ಹಿತ ರಕ್ಷಿಸುವುದೆಂದು ಸುಳ್ಳು ಹೇಳುತ್ತಿದೆ. ಇದೇ ಹೈಡ್ ಆಕ್ಟ್ ಪ್ರಕಾರ ಭಾರತ ತನ್ನ ಮಿತ್ರ ರಾಷ್ಟ್ರವಾದ ಇರಾನ್ ರಾಷ್ಟ್ರದ ಇರಾನ್ ಮೇಲೆಯೇ ಯುದ್ಧ ಮಾಡಲು ಅಮೇರಿಕಾ ಸೆಳೆಯುವುದಿಲ್ಲವೇ? ನಮ್ಮ ದೇಶದ ಅಣು ವಿಜ್ಞಾನದ ಸಂಶೋಧನೆಗಳು ನೆಲ ಕಚ್ಚಿ ಸೊರಗುವುದಿಲ್ಲವೇ? ವಿದ್ಯುತ್ ಉತ್ಪಾದನೆ ಹೆಸರಿನಲ್ಲಿ ಅತ್ಯಂತ ದುಬಾರಿ ದರ ವಿಧಿಸುವುದು ಮಾತ್ರವಲ್ಲ, ಹೊರಲಾಗದ ವಿಪರೀತ ಹಣಕಾಸಿನ ಹೊರೆಯಿಂದ ತತ್ತರಿಸುವುದಿಲ್ಲವೇ? ಉದ್ಯಮ, ಕೃಷಿ, ಶಿಕ್ಷಣ-ಸಂಸ್ಕೃತಿಗಳು ಮೇಲೆ ಈ ಒಪ್ಪಂದದಿಂದ ಆಗುವ ಅನಾಹುತಗಳ ಬಗ್ಗೆ ಆರ್ಥಿಕ ತಜ್ಞರೆಂದು ಹೇಳಿಕೊಳ್ಳುವ ಮನಮೋಹನಸಿಂಗ್‌ಗೆ ಅರಿವಿಲ್ಲವೇ? ಇದ್ದರೂ, ಇವೆಲ್ಲಾ ಮೀರಿ ಹೋಗುತ್ತಿರುವಲ್ಲಿ, ಸಾಮ್ರಾಜ್ಯ ಶಾಹಿಗಳ-ದೊಡ್ಡ ಬಂಡವಾಳಗಾರರ ಹಿತವಲ್ಲದೇ ಮತ್ತೇನಿದೆ? ಇದಕ್ಕೆ ಭಾರತವನ್ನು ಬಲಿಗೊಡಲು ಹೇಸದ ನೀತಿಗಳು ಕಾಂಗ್ರೆಸ್‌ನದು.


ಈ ಸರ್ಕಾರಕ್ಕೆ ಎಡಪಕ್ಷಗಳು ಬೆಂಬಲ ನೀಡಿದ್ದೇ ಕೋಮುವಾದಿ ಬಿಜೆಪಿಯನ್ನು ಅಧಿಕಾರದಿಂದ ಹೊರಗಿಡಲು ಆದರೆ ಯುಪಿಎ ಸರ್ಕಾರದ ನೀತಿಗಳು ಕೋಮುವಾದಿಗಳನ್ನು ದುರ್ಬಲಗೊಳಿಸು ವುದರತ್ತ ಸಾಗಲಿಲ್ಲ. ಬೆಲೆ ಏರಿಕೆ, ಹಣದುಬ್ಬರ, ಕೃಷಿ, ಕೈಗಾರಿಕೆಯ ಬಿಕ್ಕಟ್ಟು ಇತ್ಯಾದಿ ಬಗ್ಗೆ ಎಡಪಕ್ಷಗಳು ಹಲವಾರು ಪರ್ಯಾಯ ಕ್ರಮ ಸೂಚಿಸಿದರೆ ಅದರತ್ತ ಕಾಳಜಿಯನ್ನೇ ತೋರಲಿಲ್ಲ. ಯುಪಿಎ ಯ ಈ ಎಲ್ಲಾ ಕ್ರಮಗಳು ದೇಶವನ್ನು ಅಪಾಯದಂಚಿಗೆ ನೂಕಲಿವೆ.

ದೇಶದ ಹಿತವನ್ನು ಬಲಿಗೊಡಲು ಸಿದ್ಧವಿಲ್ಲದ ಎಡಪಕ್ಷಗಳು ಯುಪಿಎ ಸರ್ಕಾರಕ್ಕೆ ನೀಡಿದ್ದ ಬೆಂಬಲ ವಾಪಸ್ಸು ಪಡೆದದ್ದು ಅತ್ಯಂತ ಸಕಾಲಿಕ, ಸಮರ್ಥನೀಯ. ಈ ಮೂಲಕ ದೇಶದ ಜನರೆದುರು ಹಾದಿ ಸ್ಪಷ್ಟಗೊಂಡಿದೆ. ದೇಶವನ್ನು, ಜನತೆಯನ್ನು ಪ್ರೀತಿಸುವ ಎಲ್ಲರೂ ಇಂದು ಎಡಪಕ್ಷಗಳು ಸಾರಿರುವ ಸಮರದಲ್ಲಿ ಸಕ್ರಿಯವಾಗಿ ತೊಡಗಬೇಕು. ಇದು ಜನತೆಯ ಪ್ರಜಾಸತ್ತಾತ್ಮಕ ಸಂಘರ್ಷವಾಗಿದೆ.

ಸರ್ಕಾರ ರಚನೆಗೆ ಕಾರಣೀಭೂತರಾಗಿ, ನಾಲ್ಕು ವರುಷಗಳ ಕಾಲ ಸರ್ಕಾರಕ್ಕೆ ಬೆಂಬಲಿಸಿ ಅದು ಜನಪರವಾಗಿ ಕಾರ್ಯನಿರ್ವಹಿಸುವಂತೆ ಚಾಟಿ ಏಟು ಹಿಡಿದು ಜೊತೆಗೆ ನಡೆದಿದ್ದ ಎಡಪಕ್ಷಗಳನ್ನು ಕಾಂಗ್ರೆಸ್ ಪಕ್ಷವು ದಿಢೀರನೇ ದೂರ ನೂಕಿದೆ.ಸಮ್ಮಿಶ್ರ ಸರ್ಕಾರದ ಕನಿಷ್ಠ ನೀತಿ ನಿಯತ್ತು, ಮಿತಿ-ಹೊಣೆಗಾರಿಕೆಗಳನ್ನು ಕಾಲ ಕಸದಂತೆ ಕಂಡಿದೆ. ಕಾಂಗ್ರೆಸ್‌ಗೆ ನೈತಿಕತೆ ಇದ್ದಲ್ಲಿ ರಾಜೀನಾಮೆ ಸಲ್ಲಿಸಿ, ಹೊಸದಾಗಿ ಜನತೆಯ ತೀರ್ಪಿಗೆ ಒಳಗಾಗಬೇಕಾಗಿತ್ತು. ಅದು ಬಿಟ್ಟು ಕೆಲವು ಪಕ್ಷಗಳು-ಸಂಸದರೊಂದಿಗೆ ಒಳ ಒಪ್ಪಂದ ಮಾಡಿಕೊಂಡು ಸರ್ಕಾರವನ್ನು ಹೇಗಾದರೂ ಉಳಿಸಿಕೊಳ್ಳುವ ಸಂಖ್ಯಾ ಆಟದಲ್ಲಿ ತೊಡಗಿರುವುದು ನೀಚತನದವೆಂದೇ ಹೇಳಬೇಕಾಗುತ್ತದೆ.

ಇಂದು ಒಂದೆಡೆ ಕೋಮುವಾದದ ಅಪಾಯ, ಇನ್ನೊಂದೆಡೆ ಜನದ್ರೋಹಿ ಆರ್ಥಿಕ-ರಾಜಕೀಯ, ಅಣು ಒಪ್ಪಂದದಂತಹ ನೀತಿಗಳು, ಇವುಗಳನ್ನು ಸೋಲಿಸಲು ಜನತೆ ಸರ್ವ ಸನ್ನದ್ಧರಾಗಬೇಕಿದೆ. ಜನತೆಯ ಮಹಾನ್ ಹೋರಾಟಗಳೇ ನಿಜ ಪರ್ಯಾಯವನ್ನು ಬೆಳೆಸುತ್ತದೆ. ಬೆಂಬಲ ವಾಪಸ್ಸು ಪಡೆದ ಎಡಪಕ್ಷಗಳು ಈಗಾಗಲೇ ಜನರ ನಡುವೆ ಹೋಗಲು ನಿರ್ಧರಿಸಿವೆ. ಇನ್ನೊಂದೆಡೆ ಆಗಸ್ಟ್ 20 ರಂದು ದೇಶವ್ಯಾಪಿ ಸಾರ್ವತ್ರಿಕ ಮಹಾನ್ ಮುಷ್ಕರಕ್ಕೆ ಕಾರ್ಮಿಕ ವರ್ಗದ ನೇತೃತ್ವದಲ್ಲಿ ಸಿದ್ಧತೆಗಳು ನಡೆದಿವೆ. ರೈತ-ಕೂಲಿಕಾರ-ನೌಕರರು- ವಿದ್ಯಾರ್ಥಿ- ಯುವಜನರು, ಮಹಿಳೆಯರು ಇದರಲ್ಲಿ ಭಾಗವಹಿಸಿ ಇತಿಹಾಸ ಸೃಷ್ಟಿಸಲಿದ್ದಾರೆ. ಇದು ಭಾರತವನ್ನು, ಉಳಿಸುವ ಸಮರ. ಈ ಸಮರದಲ್ಲಿ ಎಲ್ಲಾ ದೇಶಪ್ರೇಮಿಗಳು ಕೈಜೋಡಿಸಬೇಕಾಗಿದೆ. ಭಾರತ ಬದಲಾಯಿಸಲು ಭಾರತವನ್ನು ಉಳಿಸಿಕೊಳ್ಳಬೇಕು.

ಬಾಬಾಬುಡನ್ ಗಿರಿ: ಗುಹೆ ಕುಸಿಯಿತು ಹೇಗೆ?



ಎಸ್.ವೈ.ಗುರುಶಾಂತ್

ಕೋಮು ಸೌಹಾರ್ದತೆಯ, ಭಾವೈಕ್ಯತಾ ಕೇಂದ್ರವಾಗಿರುವ ಬಾಬುಬುಡನ್ ಸ್ವಾಮಿ ದರ್ಗಾ ದತ್ತ ಪೀಠದ ಗುಹೆಯ ಮೇಲ್ಛಾವಣಿ ಕುಸಿದಿದೆ. ಇದು ನೈಸರ್ಗಿಕವಾಗಿ ನಿರ್ಮಾಣಗೊಂಡ, ಸಾವಿರಾರು ವರ್ಷಗಳಿಂದಲೂ ಇದ್ದ ಗುಹೆ. ಬಾಬಾಬುಡನ್-ಹಯಾತ್ ಕಲಂದರ್ ಒಳಗೊಂಡು ಹಲವಾರು ಸೂಫಿ ಸಂತರು ನೆಲೆ ಚಿಂತನ-ಮಂಥನದ ಕಾರ್ಯಕ್ಷೇತ್ರ ಈ ಗುಹೆ.

ಈ ಗುಹೆಗೆ ಈಗಿನ ಹಲವಾರು ವರುಷಗಳಿಂದಲೂ ಪೋಲೀಸರ ಸರ್ಪಗಾವಲು ಇದೆ. ಹಲವಾರು ಭದ್ರತಾ ವ್ಯವಸ್ಥೆ, ಹಾಗೆಯೇ ಸರ್ಕಾರಿಯೋಜಿತ ಅಭಿವೃದ್ಧಿ ಕಾರ್ಯಗಳು ಹಿಂದಿನ ಚಿತ್ರಣವನ್ನು ಬದಲಿಸುತ್ತಿವೆ. ದೇಶದಾದ್ಯಂತ ನೂರಾರು 'ಅಯೋಧ್ಯೆ'ಗಳನ್ನು ಸೃಷ್ಟಿಸುವ (ಬಾಬ್ರಿಮಸೀದಿ ಒಡೆದಂತೆ) ಸಂಘ ಪರಿವಾರದ ಯೋಜನೆಯಂತೆ ಕಾರ್ಯಾಚರಣೆಗೆ ಇಳಿದ ಮೇಲೆ ಹಂತಹಂತವಾಗಿ ಅಲ್ಲಿನ ಸೂಫಿ - ಪರಂಪರೆ, ಆಚರಣೆಗಳಿಗೆ ಹಲವಾರು ಅಡೆ-ತಡೆಗಳು- ವಿಕೃತಿಗಳು ಸಂಭವಿಸುತ್ತಾ ಬಂದಿವೆ. ಎಲ್ಲಾ ಜಾತಿ - ಧರ್ಮಗಳ ಜನರಿಗೆ ಮುಕ್ತ ಅವಕಾಶವಿದೆ. ಹಾಗೆಯೇ ಅಲ್ಲಿ ಸೂಫಿ - ಪರಂಪರೆ ಶ್ರದ್ಧಾಚರಣೆಗಳಿರುವುದನ್ನು ಬದಲಾಯಿಸಿ, ವೈದಿಕ ಶಾಹಿ ಆಚರಣೆ ತರಲು ಸತತ ಯತ್ನಗಳೂ ನಡೆದಿವೆ. 1975 ರ ಹಿಂದಿನ ಆಚರಣೆಗಳನ್ನಷ್ಟೇ ಕಟ್ಟು ನಿಟ್ಟಾಗಿ ಪಾಲಿಸಬೇಕೆಂಬ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ವಿಕೃತಗೊಳಿಸಲು ಹಲವಾರು ಯತ್ನಗಳು ನಡೆಯುತ್ತಾ ಬಂದಿವೆ. ಅಲ್ಲಿದ್ದ ಹಳೆಯ ಕಟ್ಟಡಗಳನ್ನು ಒಡೆದು ಹಾಕಲಾಗಿದೆಯಲ್ಲದೇ, ಉರುಸ್ ಆಚರಣೆಯನ್ನು ಭಂಗಗೊಳಿಸಲಾಗಿದೆ. ಶಾಖಾದ್ರಿ ನೇತೃತ್ವ, ದರ್ಗಾದ ಮೇಲೆ ಹಸಿರು ಬಟ್ಟೆಯ ಹೊದಿಕೆಯಂತಹ ಪ್ರಮುಖ ಅಂಶಗಳನ್ನು ಮೂಲೆಗುಂಪು ಮಾಡಲಾಗಿದೆ. ಶ್ರದ್ಧಾಕೇಂದ್ರದ ಬದಲು ಅದನ್ನೊಂದು ಪ್ರವಾಸಿಕೇಂದ್ರ ಮಾಡುವ ಯೋಜನೆಯೂ ಸರ್ಕಾರಕ್ಕೆ ಇದೆ. ಅಲ್ಲದೇ ಗಿರಿಯ ಮೇಲೆ ಇಲ್ಲದ ವಿವಾದವನ್ನು ಹುಟ್ಟುಹಾಕಿದ ಮೇಲೆ ಇನ್ನೂ ಅನೇಕ ಬದಲಾವಣೆಗಳು ಅಲ್ಲಿ ಸಂಭವಿಸಿವೆ.

ಈಗ ಗುಹೆಯ ಒಂದು ಭಾಗ ಕುಸಿದಿದೆ. ಅದು ನೈಸರ್ಗಿಕ ಎಂದು ಸರ್ಕಾರದ ಸಚಿವರು ಹೇಳುತ್ತಿದ್ದಾರೆ... ಅದು ಹಾಗಿಲ್ಲದಿರುವ ಬಗ್ಗೆಯೂ ಅಭಿಪ್ರಾಯಗಳು ಕೇಳಿಬಂದಿವೆ. ದರ್ಗಾ-ಪೀಠದ ಸುತ್ತಲೂ ಈಗಿರುವ ವಿದ್ಯಮಾನಗಳಿಂದಾಗಿ ಅಂತಹ ಅಭಿಪ್ರಾಯಗಳನ್ನು ತಳ್ಳಿಹಾಕುವುದು ಸರಿಯಲ್ಲ. ನಿಜ ಈ ಸಂಗತಿಗಳನ್ನು ಒಂದು ಕಡೆ ಪರಿಶೀಲಿಸುವಾಗಲೇ ಸರ್ಕಾರದ ಪ್ರತಿಕ್ರಿಯೆಯೂ ಮುಖ್ಯವಾಗುತ್ತದೆ. ಹಾಗೆಯೇ ಈ ಸಂದರ್ಭವನ್ನು ಹೇಗೆಲ್ಲಾ ಬಳಸಬಹುದು ಎಂಬ ಬಗ್ಗೆ ಎಚ್ಚರವೂ ಇರಬೇಕಾಗುತ್ತದೆ.

ಗುಹೆಯ ಕುಸಿತದ ವೀಕ್ಷಣೆ ಹಾಗೂ ಅದನ್ನು ಸರಿಪಡಿಸಲು ಕಾಮಗಾರಿ ಕೈಗೊತ್ತಿಕೊಳ್ಳುವ ಯೋಜನೆ ಪರಿಶೀಲನೆಗೆಂದು ಕರ್ನಾಟಕ ಸರ್ಕಾರ ಮುಜರಾಯಿ ಸಚಿವ ಕೃಷ್ಣಯ್ಯಶೆಟ್ಟಿ, ಗೃಹಸಚಿವ ವಿ.ಎಸ್. ಆಚಾರ್ಯ, ಪಂಚಾಯತ್ ಸಚಿವೆ ಶೋಭಾಕರಂದ್ಲಾಜೆ, ಇಂಧನ ಸಚಿವ ಕೆ.ಎಸ್. ಈಶ್ವರಪ್ಪ ಹಾಗೂ ಸಿ.ಟಿ. ರವಿ, ಜೀವರಾಜ್ ಮುಂತಾದ ಶಾಸಕರ ದಂಡೆ ಅಲ್ಲಿ ನೆರೆದಿದ್ದು ನೋಡಿದರೆ - ಸರ್ಕಾರದ ಆದ್ಯ ಗಮನ ಇದಕ್ಕೆ ಎಷ್ಟಿದೆ. ಎಂಬುದು ತಿಳಿಯುತ್ತದೆ. ಅದರಲ್ಲೂ ಈ ಎಲ್ಲರೂ ನ್ಯಾಯಾಲಯದ ನಿರ್ದೇಶನ. ಜನರ ವಾದ ಪರಂಪರಾನುಗತ ಜನರ ಆಚರಣೆಗಳ ಬಗ್ಗೆ ಕವಡೆಯ ಕಿಮ್ಮತ್ತು ನೀಡದೇ ಬಾಬಾಬುಡನ್ ಗಿರಿಯ 'ದರ್ಗಾಪೀಠ'ವನ್ನು ದಕ್ಷಿಣ ಭಾರತದ ಅಯೋಧ್ಯೆಯನ್ನಾಗಿಸಲು, ಕರ್ನಾಟಕವನ್ನು ಗುಜರಾತ್ ಮಾಡುವ ಗುಟುರನ್ನು ಕಾಲಕಾಲಕ್ಕೂ ಹಾಕುತ್ತಾ ಬಂದವರೇ! ಇವರೇ ಈಗ ಇದರ ಬಗ್ಗೆ ಎಲ್ಲಾ ನಿರ್ಧಾರವನ್ನೂ ಮುಖ್ಯಮಂತ್ರಿಗಳೇ ಕೈಗೊಳ್ಳುವರು ಎಂಬುದಾಗಿ ಮಾತ್ರ ಹೇಳಿದ್ದಾರೆ.

ಆದ್ದರಿಂದ ವಿವಾದಗ್ರಸ್ತವಾಗಿರುವ ಈ ಎಲ್ಲಾ ವಿಷಯಗಳ ಬಗ್ಗೆ ಪಾರದರ್ಶಕವಾಗಿ ಸರ್ಕಾರವು ವ್ಯವಹರಿಸಬೇಕು. ನ್ಯಾಯಾಲಯದ ತೀರ್ಪು, ಪರಂಪರೆಗೆ ಅಪಚಾರವಾಗದಂತೆ ಕ್ರಮ ವಹಿಸಬೇಕಾಗಿದೆ. ಯಾಕೆಂದರೆ ಪ್ರತಿಯೊಂದು ಬಾರಿಯೂ ಅಭಿವೃದ್ಧಿ ಎಂದು ಈ ಹಿಂದಿನ ಸರ್ಕಾರಗಳು ಹೇಳಿದಾಗ ಆಗಿರುವುದು ಬಹಳಷ್ಟು ವಿಕೃತಿಗಳೇ.



ಶಾಸಕರ ಖರೀದಿ ವ್ಯವಹಾರ

ಪುಟ 10 ಕ್ಕೆ

ಜನಶಕ್ತಿ ಕನ್ನಡ ವಾರಪತ್ರಿಕೆ

ಜುಲೈ 20, 2008

ಗಂಗಾವತಿ :ಚೆಡ್ಡಿಪಡೆಗೆ ಗೋಮಾಂಸದ್ದೇ ನೆಪ

ಪ್ರಸ್ತುತ ಕರ್ನಾಟಕದಲ್ಲಿ ಅಧಿಕಾರಕ್ಕೆ ಬಂದ ಅಲ್ಪ ಬಹುಮತದ ಬಿ.ಜೆ.ಪಿ. ಸರಕಾರ ತನ್ನ ಬಚ್ಚಿಟ್ಟ ಕೋಮುವಾದಿ ಅಜೆಂಡಾವನ್ನು ಈಗ ಗಂಗಾವತಿ ತಾಲೂಕಿನಲ್ಲಿ ಸಂಘ ಪರಿವಾರದ ಮುಖಾಂತರ ಜಾರಿಗೊಳಿಸಲು ಪ್ರಯತ್ನಿಸುತ್ತಿದೆ. ಗಂಗಾವತಿಯಲ್ಲಿ ಈ ಹಿಂದೆ ಗಂಗಾವತಿಯಲ್ಲಿ ಅಯ್ಯಪ್ಪಸ್ವಾಮಿ ದೇವಸ್ಥಾನದ ಬಗ್ಗೆ ಗಣೇಶ ವಿಸರ್ಜನೆಯ ಸಂದರ್ಭದಲ್ಲಿ ಗಲಭೆಗಳನ್ನು ಹುಟ್ಟು ಹಾಕಿದ್ದು, ಇನ್ನೂ ಸಾಮಾನ್ಯ ಜನರ ಮನಸ್ಸಿನಲ್ಲಿ ಮರೆತು ಹೋಗುವ ಮುನ್ನವೇ ಗಂಗಾವತಿಯಲ್ಲಿ ಒಂದು ಕೋಮಿನವರ ಮೇಲೆ ದಾಳಿ, ದಬ್ಬಾಳಿಕೆಗಳು ನಡೆಯುತ್ತಲಿವೆ. ಅದೇ ಪ್ರಕಾರ ಪ್ರಗತಿನಗರ (ಮರಳಿ ಷುಗರ್ ಫ್ಯಾಕ್ಟರಿ) ದಲ್ಲಿ ಸುಮಾರು 20-30 ವರ್ಷದಿಂದ ದನದ ಮಾಂಸವನ್ನು ಮಾರಾಟ ಮಾಡಲಾಗುತ್ತಿತ್ತು. ಇದೇನು ಕಾನೂನು ಬಾಹಿರವಾದ ಅಕ್ರಮ ಮಾಂಸದ ಅಂಗಡಿಯಲ್ಲ. ಪಂಚಾಯ್ತಿಯ ಅನುಮತಿಯೊಂದಿಗೆ, ಅಗತ್ಯ ಶುಲ್ಕ, ತೆರಿಗೆ ಕಟ್ಟಿಯೇ ಈ ವೃತ್ತಿ ನಡೆಸಲಾಗುತ್ತಿದೆ. ಇತ್ತೀಚಿಗೆ ಹೊಸಕೇರಾದ ಆರ್.ಎಸ್.ಎಸ್. ಸಂಘಟನೆಯು ಈ ದನದ ಮಾಂಸವನ್ನು ಮಾರಾಟ ಮಾಡುವ ಗುಂಪಿನ ಮೇಲೆ ದೈಹಿಕವಾಗಿ ಹಲ್ಲೆ ನಡೆಸಿದೆ. ಆರ್‌ಎಸ್‌ಎಸ್ ಹುರಿಯಾಳು ಮಂಜುನಾಥ ಮತ್ತು 4-5 ಜನ ಆರ್‌ಎಸ್‌ಎಸ್ ಗೂಂಡಾಗಳನ್ನು ಸೇರಿಸಿಕೊಂಡು ಬಂದು ಜೂನ್ 22 ರಂದು ಮಧ್ಯಾಹ್ನ ಮಾಂಸ ಮಾರಾಟ ಮಾಡಲಾಗುವ ಜಾಗಕ್ಕೆ ನುಗ್ಗಿ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದ ಅಬ್ಬಾಸ್ ಅಲಿಯನ್ನು ಮುಖ ಮೂತಿ ನೋಡದೆ ಥಳಿಸಿದ್ದಾರೆ. ಹೊಡೆತ ತಿಂದಾತ ಪೋಲೀಸ್ ಠಾಣೆಗೆ ಹೋಗಿ ದೂರು ಕೊಟ್ಟಿದ್ದಾನೆ. ಆದರೆ ಹಲ್ಲೆ ಮಾಡಿದವರ್‍ಯಾರನ್ನು ಬಂಧಿಸಿಲ್ಲ. ಆದರೆ ಪೋಲೀಸರು ಈ ಬಗೆಗೆ ವಹಿಸಿದ ಕ್ರಮ ಏನು ಗೊತ್ತೆ. ಮಾಂಸದಂಗಡಿಯ ದನವನ್ನು ವಶಕ್ಕೆ ತೆಗೆದುಕೊಂಡು ಶವ ಪರೀಕ್ಷೆ(ಪೋಸ್ಟ್ ಮಾರ್ಟಂ) ನಡೆಸಿದ್ದಾರೆ. ಆರ್‌ಎಸ್‌ಸ್ಸಿಗರೂ 'ಗೋಹತ್ಯೆ' ಅಂತ ದೂರುಕೊಟ್ಟಿದ್ದಾರೆ. ಆ ದೂರಿನ ಮೇಲೆ ಮಾತ್ರ ದಿಢೀರ್ ಕ್ರಮ. ಮಹಮದ್ ಅಬ್ಬಾಸ್‌ರನ್ನು ಬಂಧಿಸಿ ಕರೆದೊಯ್ದಿದ್ದಾರೆ. ಈಗ ಅಬ್ಬಾಸ್ ಜಾಮೀನಿನ ಮೇಲೆ ಹೊರಬಂದಿದ್ದಾರೆ. ಹೇಗಿದೆ ಜಾತ್ಯಾತೀತ ಭಾರತದ ಪೋಲೀಸ್ ದರ್ಬಾರು.

ಆದಿ ಅನದಿ ಕಾಲದಿಂದಲೂ ಕೆಲವೊಂದು ಜನರು ದನದ ಮಾಂಸವನ್ನೇ ತಮ್ಮ ಆಹಾರವನ್ನಾಗಿಸಿಕೊಂಡಿರುವದು ಸರ್ವ ವಿಧಿತವಾಗಿದೆ. ಈಗ ಇಂತಹ ಆಹಾರ ಪದ್ಧತಿಯ ಮೇಲೆ ಸಂಘ ಪರಿವಾರದವರು ದಾಳಿ ನಡೆಸುತ್ತಿರುವದು ಖಂಡನೀಯವಾಗಿದೆ. ಸಾಮಾನ್ಯ ಜನತೆಯ ಮೇಲೆ ಆಹಾರದ ನಿರ್ಭಂದವನ್ನು ಹೇರಲು ಸಂಘ ಪರಿವಾರ ಹುನ್ನಾರ ನಡೆಸಿದೆ. ಇದಕ್ಕೆ ಬೆಂಬಲಿಸಿ ಸಂಘ ಪರಿವಾರದ ಮೂಲದಿಂದ ಬಂದವರಾದ ಕನಕಗಿರಿ ಶಾಸಕರು ಪ್ರಸ್ತುತ ಸಕ್ಕರೆ ಮತ್ತು ಕೃಷಿ ಮಾರುಕಟ್ಟೆ ಸಚಿವರಾದ ಶಿವರಾಜ್ ತಂಗಡಗಿಯವರ ಪೂರ್ಣ ಸಹಕಾರದೊಂದಿಗೆ ಇಂತಹ ಪ್ರಕರಣಗಳು ತಾಲೂಕಿನಾದ್ಯಂತ ನಡೆಯುತ್ತಲಿವೆ.

ಈಗ ಚೆಡ್ಡಿಗಳು ತಾಲ್ಲೂಕಿನಲ್ಲಿ ಭೀತಿಯ ವಾತಾವರಣ ಸೃಷ್ಟಿಸುತ್ತಿದ್ದಾರೆ. ದನದ ಮಾಂಸ ಮಾರಬಾರದು. ದನ ಕಡಿಯಬಾರದು ಅಂತ ತಾಕೀತು ಮಾಡುತ್ತಿದ್ದಾರೆ. ಅವರು ಮತ್ತೂ ಒಂದು ಹೇಳುತ್ತಾರೆ. 'ಆಕಳ ಕಡಿಬ್ಯಾಡ್ರಿ, ಬೇಕಾದ್ರೆ ಎಮ್ಮಿ ಕಡೀರ್ರಿ' ಅಂತ. ಎಮ್ಮೆ ದನ ಅಲ್ಲವೇ? ಆಕಳು ಮಾತ್ರ ಪವಿತ್ರ! ಯಾಕೆ? ಕುರಿ, ಕೋಳಿ, ಎಮ್ಮೆ, ಮೀನು ಯಾಕೆ ಪವಿತ್ರ ಅಲ್ಲ. ಇವೆಲ್ಲಾ ಮತಾಂಧರಿಗೆ ಅರ್ಥವಾಗುವುದಾದರೂ ಹೇಗೆ? ಚಡ್ಡಿ ಪುಂಡರಿಂದಾಗಿ ಒಂದು ಕೋಮಿನ ಜನರು ತಮ್ಮ ಜೀವವನ್ನು ಕೈಯಲ್ಲಿ ಹಿಡಿದುಕೊಂಡು ಜೀವನ ನಡೆಸಬೇಕಾಗಿದೆ. ಜನತೆಯ ಪ್ರಾಣಕ್ಕೆ ಬೆಲೆಯೇ ಇಲ್ಲದಾಗಿದೆ. (ದನಗಳಿಗೆ ಇರುವ ಬೆಲೆಯೂ ಇಲ್ಲವಾಗಿದೆ.) ರೈತರ, ಕೂಲಿಕಾರರ ಜೀವನದೊಂದಿಗೆ ಚಲ್ಲಾಟ ಮಾಡುತ್ತಿದ್ದಾರೆ. ಹಳ್ಳಿಯೊಂದರ ಗಾದೆ ಮಾತಿನಂತೆ ಕಾಗೆಗೆ ಹಿರಿತನ ಕೊಟ್ಟರೆ ಕಚೇರಿ ಎಲ್ಲಾ ಹೊಲಸು ಮಾಡಿತು ಎನ್ನುವ ಹಾಗಾಗಿದೆ. ಮಂಗನ ಕೈಯಲ್ಲಿ ಮಾಣಿಕ್ಯ ಕೊಟ್ಟರೆ ಏನಾಗುವದೋ ಅಂಥಹ ಪರಿಸ್ಥಿತಿ ಸಚಿವ ಶಿವರಾಜ್ ತಂಗಡಿಯವರಿಗೆ ಅಧಿಕಾರ ಸಿಕ್ಕಿದ್ದರಿಂದ ಸೃಷ್ಟಿಯಾಗಿದೆ. ಜನತೆಯು ಇಂತಹ ಪ್ರಕರಣಗಳಿಗೆ ಬೆಂಬಲ ನೀಡದೆ, ಸುಳ್ಳು ವದಂತಿಗಳಿಗೆ ಕಿವಿಗೊಡದೆ ಶಾಂತಿ-ಸೌಹಾರ್ದತೆಯಿಂದ ಇರಬೇಕೆಂದು ಭಾರತ ಕಮ್ಯುನಿಷ್ಟ ಪಕ್ಷ (ಮಾರ್ಕ್ಸ್‌ವಾದಿ) ಕೊಪ್ಪಳ ಜಿಲ್ಲಾ ಸಮಿತಿಯು ಜನತೆಯಲ್ಲಿ ಮನವಿ ಮಾಡಿಕೊಂಡಿದೆ. ಪ್ರಕರಣಗಳನ್ನು ತನಿಖೆಗೆ ಒಳಪಡಿಸಿ ದುಷ್ಟ ಶಕ್ತಿಗಳಿಗೆ ಕಾನೂನಿನ ಪ್ರಕಾರ ಶಿಕ್ಷೆಗೊಳಪಡಿಸಬೇಕೆಂದು ಸರಕಾರಕ್ಕೆ ಒತ್ತಾಯಿಸಿದೆ.

ವರದಿ: ಗಂಗಾಧರಯ್ಯಸ್ವಾಮಿ.

ಷಡ್ಯಂತ್ರಗಳಿವೆ

"ಭಾರತ-ಅಮೇರಿಕಾದ ಅಣು ಒಪ್ಪಂದ ಕೇವಲ ತಾಂತ್ರಿಕ ಒಪ್ಪಂದವಾಗಿ ಉಳಿದಿಲ್ಲ. ಅದರ ಹಿಂದೆ ಸಾಕಷ್ಟು ರಾಜಕೀಯ ಷಡ್ಯಂತ್ರಗಳು ಅಡಗಿವೆ. ಒಪ್ಪಂದದ ಒಂದು ಅಂಶವಾಗಿರುವ ಇರಾನ್‌ನೊಂದಿಗೆ ಯಾವುದೇ ರೀತಿಯ ಸಂಪರ್ಕ ಹೊಂದಬಾರದು ಎಂಬ ಷರತ್ತೇ ಒಪ್ಪಂದದ ಹಿಂದಿನ ರಾಜಕೀಯ ಉದ್ದೇಶ ವ್ಯಕ್ತವಾಗುತ್ತದೆ. ಇದು ಸ್ವಾತಂತ್ರ್ಯ ಪೂರ್ವದಿಂದಲೂ ಭಾರತೀಯರು ಅನುಸರಿಸಿಕೊಂಡು ಬಂದ ಅಲಿಪ್ತ ನೀತಿಗೆ ವಿರುದ್ಧವಾದ ಒಪ್ಪಂದವಾಗಿದೆ.

ಅಮೇರಿಕಾ ಚೀನಾದೊಂದಿಗೆ ಮಾಡಿಕೊಂಡಿರುವ ಅಣು ಒಪ್ಪಂದಕ್ಕೂ, ಭಾರತದೊಂದಿಗೆ ಮಾಡಿಕೊಂಡಿರುವ ಒಪ್ಪಂದಕ್ಕೂ ಸಾಕಷ್ಟು ವ್ಯತ್ಯಾಸವಿದೆ. ಚೀನಾದೊಂದಿಗೆ ಮಾಡಿಕೊಂಡಿರುವ ಒಡಂಬಡಿಕೆಯಲ್ಲಿ ಒಪ್ಪಂದ ಕುರಿತ ಎಲ್ಲ ನಿರ್ಣಯಗಳನ್ನು ಕೈಗೊಳ್ಳುವ ಸಂಪೂರ್ಣ ಅಧಿಕಾರವನ್ನು ಚೀನಾಕ್ಕೆ ನೀಡಲಾಗಿದೆ. ಆದರೆ, ಭಾರತದೊಂದಿಗೆ ಒಪ್ಪಂದ ಮಾಡಿಕೊಳ್ಳುವಾಗ ಈ ರೀತಿಯ ಸ್ವಾತಂತ್ರ್ಯವನ್ನು ಭಾರತಕ್ಕೆ ನೀಡಿಲ್ಲ. ಆದರೆ ಯುಪಿಎ ಸರ್ಕಾರ ಇದನ್ನು ಮರೆಮಾಚಿ ರಾಜಕೀಯ ವಿಚಾರವಾಗಿ ಬಳಸಿಕೊಂಡು ಹೆಚ್ಚಿನ ಪ್ರಚಾರ ಪಡೆಯುತ್ತಿದೆ"

– ಡಾ. ಎಸ್. ಚಟರ್ಜಿ, ವಿಜ್ಞಾನಿಗಳು,
ಭಾರತೀಯ ಖಗೋಳ ವಿಜ್ಞಾನ ಮಂದಿರ

ಪ್ರತಿಭಟನಾಂದೋಲನ

ಭಾರತ-ಅಮೆರಿಕಾ ಅಣು ಒಪ್ಪಂದ ವಿರೋಧಿಸಿ ದೇಶದಾದ್ಯಂತ ಜುಲೈ 14 ರಿಂದ 21 ರವರೆಗೆ ಎಡಪಕ್ಷಗಳಿಂದ ಪ್ರತಿಭಟನಾಂದೋಲನ

ಹುಚ್ಚನ ಮದುವೇಲಿ ಉಂಡೋನೆ ಜಾಣ


ದೆಹಲಿಗೆ ಕಾಂಗ್ರೆಸ್ ನಿಯೋಗ - ಗಣಿಗಳ ರಾಷ್ಟ್ರೀಕರಣ ಮಾಡಲು ಒತ್ತಾಯ. - ಪರಿಶಿಲಿಸುವುದಾಗಿ ಪ್ರಧಾನಿ ಭರವಸೆ.

- ● -

-'ಆಹಾ! ಶತಮಾನದ ಜೋಕ್ ಅಂದ್ರೆ ಇದು ಕಣ್ರೀ. ಜೋಭದ್ರ ಕಾಂಗ್ರೆಸಿಗರಿಗೆ ಇಂಥ ಹಾಸ್ಯ ಪ್ರಜ್ಞೆ ಇರುವುದು ಗೊತ್ತೇ ಇರಲಿಲ್ಲ ನಮಗೆ. ದೇಶದ ಬೇಲಿ, ಗೋಡೆಗಳನೆಲ್ಲ ಕೆಡವಿ, ಲೂಟಿ ಮಾಡಿ ಬನ್ನಿ ಅಂತ ಕರೆದವರು ನೀವೇ ಅಲ್ಲವೇ!? ಕುಡಿಯುವ ನೀರೂ ಬಿಡದೆ ದೇಶದ ಸಂಪತ್ತನ್ನೆಲ್ಲ ಖಾಸಗೀಕರಣ ಅಂತ ಮೂರು ಕಾಸಿಗೆ ಹರಾಜು ಹಾಕಿದವರು ನೀವೇ ಅಲ್ಲವೇ!? ಈಗ ನಿಮ್ಮ ಶಾಸಕರು ಪುಡಿಕಾಸಿಗೆ ಬಿಕರಿಯಾಗುತ್ತಿರುವುದನ್ನ ಕಂಡು, ರಾಜಕೀಯವೂ 'ಖಾಸಗೀಕರಣ' ವಾಗುತ್ತಿದೆ ಎಂದು ಭಯಪಡುತ್ತಿರುವವರೂ ನೀವೇ ಅಲ್ಲವೇ?! ನಗೆಯು ಬರುತಿದೆ ನಮಗೆ ನಗೆಯು ಬರುತಿದೆ!.

'ತರ್ಲೆ ನನ್ಮಗ' ಜಗ್ಗೇಶ್ ಬಿಜೇಪಿಗೆ

-"ಹುಚ್ಚನ ಮದುವೇಲಿ ಉಂಡೋನೆ ಜಾಣ", "ಯಾರ್ದೋ ದುಡ್ಡು ಎಲ್ಲಮ್ಮನ ಜಾತ್ರೆ", "ಕಾಸು ಇದ್ದೋನೆ ಬಾಸು" "ಭಂಡ ನನ್ನ ಗಂಡ" ಇವೆಲ್ಲ ಅವರದೇ ಚಿತ್ರಗಳು. ಅವುಗಳ 'ಅರ್ಥ' ಜಗ್ಗೇಶ್ ಗೆ ಈಗ 'ಅರ್ಥ' ಆಗಿರಬೇಕು.



ಕ್ಷೇತ್ರದ 'ಅಭಿವೃದ್ಧಿ' ಗೋಸ್ಕರ ಪಕ್ಷಾಂತರ ಮಾಡ್ತಿದೀವಿ ಅಂತ ಪಕ್ಷಾಂತರಿಗಳು ಹೇಳುತ್ತಿದ್ದಾರೆ. ಪಕ್ಷದ 'ತತ್ವ' 'ಸಿದ್ಧಾಂತ' ವನ್ನು ಒಪ್ಪಿ ಅವರೆಲ್ಲ ನಮ್ಮ ಪಕ್ಷ ಸೇರುತ್ತಿದ್ದಾರೆ ಅಂತ ಬಿಜೇಪಿ ಅದ್ಯಕ್ಷರು ಹೇಳಿದ್ದಾರೆ.

● 'ಅಭಿವೃದ್ಧಿ', 'ತತ್ವ, ಸಿದ್ಧಾಂತ' ಇವುಗಳ ಹೊಸ 'ಅರ್ಥ' ವನ್ನು ನಿಘಂಟಿನಲ್ಲಿ ಸೇರಿಸಬೇಕು.

ನಮಗೆ 115 ಸೀಟು ಕೊಟ್ಟಿದ್ದರೆ ಇಂಥ ಪರಿಸ್ಥಿತಿ ಬರುತ್ತಿರಲ್ಲಿಲ್ಲ ಅಂತ ಸನ್ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ.

● ಹೌದು ಬಿಡ್ರೀ, ಜನಗಳದೇ ತಪ್ಪು!

ಬಿಜೆಪಿಯವರಿಗೆ ಮೇಲೆ ತೋರಿಕೆಗೆ ಹಸಿರು ಶಾಲು, ಒಳಗೆ ಕೇಸರಿ.

● ಪಕ್ಷಾಂತರಿಗಳಿಗೆ ಮೇಲೆ 'ಕ್ಷೇತ್ರದ ಅಭಿವೃದ್ಧಿ', ಒಳಗೆ ಗಣಿ ಸಗಣಿ. ಸರಿಯೇನ್ರೀ ಈಶ್ವರಪ್ಪ?

ಮಕ್ಕಳಿಗೂ ವಿಷ ತಿನ್ನಿಸಿ ತಂದೆ ತಾಯಿಗಳು ಆತ್ಮಹತ್ಯೆ ಮಾಡಿಕೊಳ್ಳುವ ಹಾಗೆ, ಪ್ರಧಾನ ಮಂತ್ರಿ ಸರ್ದಾರ್ಜಿ ಮನಮೋಹನ ಸಿಂಗ್ ಜೀ ದೇಶಕ್ಕೆ 'ಅಣು' ತಿನ್ನಿಸಿ ಅಮೆರಿಕದ ಉರುಲಿಗೆ ಹಾಕಿ, ತಮ್ಮ ಸರ್ಕಾರ, ತಮ್ಮ ಪಕ್ಷ ಎಲ್ಲವನ್ನೂ ಕೊನೆಗಾಣಿಸುವ ನಿರ್ಧಾರಕ್ಕೆ ಬಂದಿದ್ದಾರೆ.

"ಬಿ.ಜೆ.ಪಿ ಯವರು ರಾಜಕೀಯದ ಷಂಡರಲ್ಲ. ನಾವು ಸುಮ್ಮನೆ ಕೂರುವವರಲ್ಲ". ಎಂದು ಬಿಜೆಪಿ ಅದ್ಯಕ್ಷರಾದ ಸದಾನಂದ ಗೌಡರು ಗುಡುಗಿದ್ದಾರೆ.

● ಛೇ, ಇಲ್ಲ ಬಿಡ್ರೀ ಗೌಡ್ರೇ, ಯಾರೋ ದಡ್ಡರು ಗೊತ್ತಿಲ್ಲದೆ ಮಾಡನಾಡಿದ್ದಾರೆ ಕಣ್ರೀ. ಮೊದಲಿನಿಂದ ಪಕ್ಷ ಕಟ್ಟಿ, ಈಗ ಕೈ ಕಟ್ಟಿಕೊಂಡು ಕುಳಿತಿರುವ ಪ್ರಾಮಾಣಿಕ ಗಂಡಸರು, ಎಷ್ಟೋ ವರ್ಷಗಳಿಂದ ಪಕ್ಷದಲ್ಲಿ ದುಡಿದರೂ ಟಿಕೆಟ್ ಸಿಕ್ಕಿಸಿಕೊಳ್ಳಲಾಗದ ನಿಷ್ಠಾವಂತ ಗಂಡಸರು, ಪಕ್ಷಾರಂಭದಿಂದಲೂ ಪಕ್ಷದಲ್ಲಿದ್ದರೂ ಮಂತ್ರಿಯಾಗುವ ಯೋಗವಿಲ್ಲದೆ, ಪಕ್ಷೇತರರೂ, ಪಕ್ಷಾಂತರಿಗಳೂ ಮಂತ್ರಿಗಳಾಗುತ್ತಿರುವುದನ್ನು ನೋಡುತ್ತಾ, ಮೈ ಪರಚಿಕೊಳ್ಳುತ್ತಿರುವ ಅತೃಪ್ತ ಗಂಡಸರೂ ಇರುವ ಪಕ್ಷವೆಂದರೆ ಅದು ನಿಮ್ಮ ಪಕ್ಷವೇ ಕಣ್ರೀ. ಮೊದಲೇ ವೀರಾಧಿ ವೀರರ ಪಕ್ಷ ನಿಮ್ಮದು. ಅದರಲ್ಲೂ ಈಗ (ಸ)ಗಣಿ 'ವಯಾಗ್ರ' ತಿಂದ ಮೇಲಂತೂ, ನಿಮ್ಮ ಪೌರುಷಕ್ಕೆ ಸಾಟಿಯೇ ಇಲ್ಲ ಬಿಡಿ!.

ದೇಶದ ಜನತೆಯ ಬದುಕನ್ನು ದುರ್ಬರಗೊಳಿಸಿದ ಸ್ಥಿತಿಯ ವಿರುದ್ಧ ರಾಷ್ಟ್ರಮಟ್ಟದ ಮುಷ್ಕರಕ್ಕೆ ದುಡಿಯುವ ಜನ ಸಜ್ಜಾಗುತ್ತಿದ್ದಾರೆ


ಆಗಸ್ಟ್ 20 : ದುಡಿಯುವ ಜನರೇಕೆ ಮುಷ್ಕರ ಹೂಡಲಿದ್ದಾರೆ?

ವಿ.ಜೆ.ಕೆ.ನಾಯರ್

ಕಾರ್ಮಿಕ ಸಂಘಟನೆಗಳ ಪ್ರಾಯೋಜಕ ಸಮಿತಿ ಮತ್ತೊಮ್ಮೆ ಕರೆ ನೀಡಿರುವ ಅಖಿಲ ಭಾರತ ಮುಷ್ಕರ ಮುಂಬರುವ ಆಗಸ್ಟ್ 20ರಂದು ನಡೆಯಲಿದೆ. ಕರ್ನಾಟಕದ ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ (ಜೆಸಿಟಿಯ) ಭಾಗವಾಗಿ ಸಿಐಟಿಯು ಮುಷ್ಕರದಲ್ಲಿ ಭಾಗವಹಿಸುತ್ತಿದೆ. ಕಾರ್ಮಿಕ ಸಂಘಟನೆ ಗಳು ಮಾತ್ರವಲ್ಲದೆ ಕರ್ನಾಟಕ ಪ್ರಾಂತ ರೈತ ಸಂಘ (ಕೆಪಿಆರ್‌ಎಸ್) ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ ಮುಷ್ಕರದಲ್ಲಿ ಪಾಲ್ಗೊಳ್ಳಲು ನಿರ್ಧರಿಸಿವೆ.

ಹೊಸ ಆರ್ಥಿಕ ನೀತಿಗಳು, ಖಾಸಗೀಕರಣ ಮತ್ತು ಜಾಗತೀಕರಣದಿಂದಾಗಿ ಇಂದು ಗಂಭೀರ ಪರಿಸ್ಥಿತಿ ನಿರ್ಮಾಣವಾಗಿದೆ. ತಯಾರಿಕಾ ಮತ್ತು ಸೇವಾ ವಲಯಗಳಲ್ಲಿ ಉದ್ಯಮಗಳನ್ನು ಪುನರ್ ರಚಿಸುವುದು ಸ್ಪಷ್ಟವಾಗಿ ಕಾರ್ಮಿಕರ ವಿರೋಧಿಯಾಗಿದೆ. ಈ ಪ್ರಕ್ರಿಯೆ ಸಂಘಟಿತ ಅಥವಾ ಅಸಂಘಟಿತ ಯಾವುದೇ ಕ್ಷೇತ್ರದಲ್ಲಾದರೂ ಕಾರ್ಮಿಕ ವಿರೋಧಿಯಾಗಿದೆ.

ಅಸುರಕ್ಷಿತ ಕಾರ್ಮಿಕರ ಸಂಖ್ಯೆ ಹೆಚ್ಚುತ್ತಿದೆ



ಕೈಗಾರಿಕೆಗಳ ವಾರ್ಷಿಕ ಸಮೀಕ್ಷೆ ಪ್ರಕಾರ ಕಾರ್ಮಿಕರ ಶ್ರಮದಿಂದ ಉತ್ಪನ್ನಗಳಿಗೆ ಹೆಚ್ಚಾಗುವ ಮೌಲ್ಯದಲ್ಲಿ ಜಾಗತೀಕರಣಕ್ಕೆ ಮೊದಲು ಕಾರ್ಮಿಕರ ಪಾಲು ಶೇ.33ರಷ್ಟು ಇದ್ದದ್ದು ಈಗ ಶೇ.17ಕ್ಕೆ ಇಳಿಸಿದಿದೆ. ಹದಿನೈದು ವರ್ಷಗಳ ಜಾಗತಿಕ ದಶಾ ಅವಧಿಗೆ ಮೊದಲು ಕಾರ್ಮಿಕರ ಶ್ರಮದಿಂದ ಉತ್ಪನ್ನಗಳಿಗೆ ಹೆಚ್ಚುವ ಮೌಲ್ಯದಲ್ಲಿ ಮಾಲೀಕರ ಪಾಲು ಶೇ.12ರಷ್ಟು ಇತ್ತು. ಆದರೆ ಈಗ ಈ ಪಾಲು ಶೇ.45ಕ್ಕೆ ತಲುಪಿದೆ ಎಂಬುದನ್ನು ಈ ಸಮೀಕ್ಷೆ ತಿಳಿಸಿದೆ. ಕಾರ್ಮಿಕರು ಮತ್ತು ಸಾಮಾನ್ಯ ಜನತೆಯ ಹಿತದೃಷ್ಟಿಗೆ ವಿರುದ್ಧವಾದ ಉದಾರೀಕರಣ ನೀತಿಗಳನ್ನು ಕೈಗೊಂಡಿದ್ದರಿಂದಾಗಿ ಈ 'ಸಾಧನೆ' ಮಾಡಲಾಗಿದೆ. ಸಂಘಟಿತ ವಲಯದಲ್ಲಿ ಕಾರ್ಮಿಕರ ಸಂಖ್ಯೆಯನ್ನು ಕಡಿಮೆಗೊಳಿಸುತ್ತಾ, ಅದೇ ಸಂದರ್ಭದಲ್ಲಿ ಅಸುರಕ್ಷಿತ ಕಾರ್ಮಿಕರ ಸಂಖ್ಯೆ ಹೆಚ್ಚಿಸುತ್ತಾ ಉದ್ಯಮಿಗಳು ತಮ್ಮ ಲಾಭ ಹೆಚ್ಚಿಸಿಕೊಂಡರು. ಗುತ್ತಿಗೆ ಆಧಾರಿತ, ಸಂದರ್ಭಿಕ ಕಾರ್ಮಿಕರನ್ನು ನೇಮಿಸಿಕೊಳ್ಳುವ ಹಾಗೂ ಹಲವಾರು ವರ್ಷ ಕಾಲ ತರಬೇತಿ ಅವಧಿ ಎಂತಲೇ ಮುಂದುವರೆಸಿಕೊಂಡು ಹೋಗುವ ತಂತ್ರಗಳನ್ನು ಉದ್ಯಮಗಳು ಅಳವಡಿಸಿಕೊಂಡಿವೆ. ದೇಶದೊಳಗಿನ ಕಾರ್ಮಿಕ ನೀತಿ ನಿಯಮಗಳಿಗೆ ವಿರುದ್ಧವಾಗಿಯೇ ಇಂತಹ ಕೃತ್ಯಗಳಲ್ಲಿ ತೊಡಗಿದ್ದಾರೆ.

ಇಂತಹ ಆರ್ಥಿಕ ಉದಾರೀಕರಣ ನೀತಿಗಳು ಜಗತ್ತಿನ ಜನಸಂಖ್ಯೆಯ ಶೇ.50ರಷ್ಟು ಜನಸಂಖ್ಯೆಯನ್ನು ಸಂಕಷ್ಟಕ್ಕೀಡು ಮಾಡಿದೆ. ಭಾರತದ ಶೇ.70ರಷ್ಟು ಜನಸಂಖ್ಯೆಯ ಪ್ರತಿದಿನದ ಆದಾಯ ರೂ.20ಗಳಿಗಿಂತಲೂ ಕಡಿಮೆ ಎಂದು ಸರ್ಕಾರ ನೇಮಿಸಿದ್ದ ಸಮಿತಿ ನೀಡಿರುವ ಎನ್‌ಸಿಇಯುಎಸ್‌ನಲ್ಲಿ ವಿವರಿಸಿದೆ. ಇದಕ್ಕೆ ವ್ಯತಿರಿಕ್ತವಾಗಿ ಭಾರತದಲ್ಲಿ ಕೋಟ್ಯಾಧಿಪತಿಗಳ ಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತಿದ್ದು ಜಗತ್ತಿನ 10 ಮಂದಿಯಲ್ಲಿ 4 ಮಂದಿ ಭಾರತೀಯರಾಗಿದ್ದಾರೆ.

ಉದಾರೀಕರಣದ ಫಲ

ಕರ್ನಾಟಕ ರಾಜ್ಯದಲ್ಲಿ ಇತ್ತೀಚೆಗಷ್ಟೇ ಮುಕ್ತಾಯವಾದ ವಿಧಾನಸಭೆ ಚುನಾವಣೆಯಲ್ಲಿ ಹೊಸ ಶ್ರೀಮಂತರ ಹಣಬಲ ಪ್ರದರ್ಶನವಾಗಿದೆ. ಹಲವಾರು ಮಂದಿ ಅಭ್ಯರ್ಥಿಗಳು ನೂರಾರು ಕೋಟಿ ರೂ.ಸಂಪತ್ತು ಹೊಂದಿರುವುದನ್ನು ಚುನಾವಣೆ ಆಯೋಗಕ್ಕೆ ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿ ಘೋಷಿಸಿದ್ದಾರೆ. ಈ ಎಲ್ಲಾ ಸಂಪತ್ತು ಹೊಸ ಆರ್ಥಿಕ ಉದಾರೀಕರಣ ನೀತಿಗಳ ಫಲವಾಗಿಯೇ ಕ್ರೋಢೀಕರಣವಾಗಿದೆ.

ಜಾಗತೀಕರಣ ಆರ್ಥಿಕತೆಯ ಮೇಲೆ ಭಯಾನಕ ದುಷ್ಪರಿಣಾಮ ಬೀರಿದೆ. ಜಾಗತೀಕರಣ ನೀತಿಗಳಿಗೆ ಮುನ್ನ 30 ಡಾಲರ್‌ನಷ್ಟದ ಪ್ರತಿ ಬ್ಯಾರಲ್ ಕಚ್ಚಾ ತೈಲದಲ್ಲಿ ಪ್ರಸ್ತುತ 140 ಡಾಲರ್‌ಗೆ ತಲುಪಿದೆ. ವಿದ್ಯುತ್ ದರಗಳನ್ನು ಹೆಚ್ಚಿಸುವ ದುರುದ್ದೇಶದಿಂದ ಅಮೆರಿಕಾ ದೊಂದಿಗೆ ಅಣು ಒಪ್ಪಂದದ ಮಾಡಿಕೊಳ್ಳಬೇಕೆಂದು ಒತ್ತಾಯಿಸುತ್ತಿರುವ ಬಂಡವಾಳಶಾಹಿಗಳ ಪರವಾಗಿ ಕೇಂದ್ರ ಸರ್ಕಾರ ಕಾರ್ಯನಿರ್ವಹಿಸುತ್ತಿದೆ. ಇದರೊಂದಿಗೆ ಇರಾನ್-ಪಾಕಿಸ್ತಾನ ಪೈಪ್‌ಲೇನ್ ಮೂಲಕ ತೈಲ ಸಂಗ್ರಹಿಸುವ ಮಹತ್ವಕಾಂಕ್ಷಿ ಯೋಜನೆ ಈಡೇರುವ ಸಾಧ್ಯತೆಗಳನ್ನು ಬುಡಮೇಲು ಮಾಡುತ್ತಿದೆ.

ಕೇಂದ್ರದಲ್ಲಿ ಆಡಳಿತ ನಡೆಸಿದ ಎನ್‌ಡಿಎ ಸರ್ಕಾರ ಸಹ ಯುಪಿಎ ಅನುಸರಿಸುತ್ತಿರುವ ಖಾಸಗೀಕರಣ ನೀತಿಗಳನ್ನೇ ಅನುಸರಿಸುತ್ತಾ ಬಂದು ವಿದ್ಯುತ್ ವಲಯದ ಮೇಲೆ ಖಾಸಗಿ ಏಕಸ್ವಾಮ್ಯಕ್ಕೆ ಉತ್ತೇಜನ ನೀಡಿತ್ತು. ತೈಲ ವಲಯುವನ್ನು ಖಾಸಗೀಕರಣಗೊಳಿಸಿದ್ದರ ಪರಿಣಾಮವಾಗಿ ಖಾಸಗಿ ಏಕಸ್ವಾಮ್ಯ ಕಂಪನಿಗಳಾದ ರಿಲಯೆನ್ಸ್ ಪೆಟ್ರೋಲಿಯಂ ನಮ್ಮ ಭೂಮಿಯಲ್ಲಿ ಪ್ರತಿ ಬ್ಯಾರಲನ್ನು ಅತಿ ಕಡಿಮೆ ವೆಚ್ಚದಲ್ಲಿ ಅಂದರೆ 30 ಡಾಲರ್‌ಗೆ ಉತ್ಪಾದಿಸಿ ನಮಗೇ ಜಾಗತಿಕ ಮಾರುಕಟ್ಟೆ ದರ 140 ಡಾಲರ್‌ನಂತೆ ಮಾರಾಟ ಮಾಡುತ್ತಿದೆ. ಕಳೆದ ವರ್ಷ ರಿಲಯನ್ಸ್ ಕಂಪನಿಯೊಂದೇ ತೈಲ ಉತ್ಪಾದನೆಯಿಂದ 6500 ಕೋಟಿ ರೂ. ಲಾಭ ಗಳಿಸಿದೆ. ಯುಪಿಎ ಸರ್ಕಾರವಾಗಲಿ ಅಥವಾ ಮುಂದೆ ಆಡಳಿತ ನಡೆಸಲು ತುದಿಗಾಲಲ್ಲಿ ನಿಂತಿರುವ ಬಿಜೆಪಿಗಳು ಈ ಭಾರೀ ಲಾಭದ ಮೇಲೆ ತೆರಿಗೆ ಹೇರಬೇಕೆಂಬ ಎಡ ಪಕ್ಷಗಳ ಒತ್ತಾಯಕ್ಕೆ ಸಮ್ಮತಿ ಸೂಚಿಸುತ್ತಿಲ್ಲ. ಇಂತಹ ಲಾಭದ ಮೇಲೆ ಅಮೆರಿಕ ಸರ್ಕಾರ ಸಹ ತೆರಿಗೆ ವಿಧಿಸಿದೆ ಎಂಬುದನ್ನು ತಿಳಿದುಕೊಳ್ಳುವಲ್ಲಿ ಅವರು ವಿಫಲರಾಗಿದ್ದಾರೆ. ಭಾರತದಲ್ಲಿನ ಆಡಳಿತ ವರ್ಗಗಳ ಮೈತ್ರಿ ದೇಶದ ಜನತೆಯನ್ನು ಲೂಟಿ ಮಾಡುತ್ತಿರುವ ಬೃಹತ್ ಕಂಪನಿಗಳ ಮೇಲೆ ತೆರಿಗೆ ವಿಧಿಸುವುದರ ವಿರುದ್ಧವಾಗಿವೆ.

ತತ್ತರಗೊಳಿಸಿರುವ ಬೆಲೆ ಏರಿಕೆ

ಬೆಲೆ ಏರಿಕೆಯಿಂದ ಜನತೆ ತತ್ತರಿಸುತ್ತಿದ್ದಾರೆ, ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾತೈಲ ದರಗಳು, ಏರಿಕೆಯಾಗಿವೆ ಎಂದು ಹೇಳಿ ಕೇಂದ್ರ ಸರ್ಕಾರ ದರಗಳನ್ನು ಹೆಚ್ಚಿಸಿದೆ. ಸಾಮಾನ್ಯ ಜನ ಪಾವತಿಸುವ ಪೆಟ್ರೋಲ್ ಡೀಸೆಲ್ ದರದಲ್ಲಿ ಶೇ.50ಕ್ಕೂ ಹೆಚ್ಚು ಹಣವನ್ನು ಸರ್ಕಾರ ತೆರಿಗೆ ರೂಪದಲ್ಲಿ ಸಂಗ್ರಹಿಸುತ್ತಿದೆ. ತೆರಿಗೆ ಪದ್ಧತಿಯನ್ನು ಪುನರ್ ರೂಪಿಸಲು ಅಥವಾ ಖಾಸಗಿ ಕಂಪನಿಗಳು ಗಳಿಸುವ ಲಾಭದ ಮೇಲೆ ತೆರಿಗೆ ವಿಧಿಸುವ ಸರ್ಕಾರ ತಿರಸ್ಕರಿಸಿದೆ. ಇಂಧನ ದರಗಳನ್ನು ಹೆಚ್ಚಿಸಿದ್ದು ಹಣದುಬ್ಬರ ಏರಿಕೆಗೆ ಕಾರಣವಾಗಿದ್ದು ಮೇ 17ಕ್ಕೆ ಕೊನೆಗೊಂಡ ವಾರದಲ್ಲಿ ಶೇ.13.05ಕ್ಕೆ ತಲುಪಿದೆ.

ಕೇಂದ್ರ ಸರ್ಕಾರ ಇರಾನ್‌ನೊಂದಿಗಿನ ಅನಿಲ ಕೊಳವೆ ಒಪ್ಪಂದ ತಿರಸ್ಕರಿಸಿದ್ದು ಭಾರತ ದೀರ್ಘಕಾಲೀನದಲ್ಲಿ ತೈಲ ಕ್ಷೇತ್ರದಲ್ಲಿ ಸ್ವಾವಲಂಬನೆ ಗಳಿಸುವಲ್ಲಿ ಭಾರಿ ಅಡ್ಡಿಯಾಗಲಿದೆ. ಅಮೆರಿಕಾ ಒತ್ತಡದಿಂದಾಗಿ ಇರಾನ್ ನೊಂದಿಗೆ ಅನಿಲಕೊಳವೆ ಒಪ್ಪಂದ ಮಾಡಿಕೊಳ್ಳದಿರುವುದು ದೇಶದ ವಿದ್ಯುತ್ ವಲಯಕ್ಕೆ ಮಾತ್ರ ಧಕ್ಕೆಯಾಗುವುದಿಲ್ಲ. ರಸಗೊಬ್ಬರ ತಯಾರಿಕೆ ಮೇಲೂ ಗಂಭೀರ ಪರಿಣಾಮ ಬೀರಲಿದೆ. ಪೆಟ್ರೋಲಿಯಂ ಉತ್ಪನ್ನಗಳಲ್ಲಿ ಒಂದಾದ ನಾಪ್ತಾವನ್ನು ರಸಗೊಬ್ಬರ ತಯಾರಿಕೆಯಲ್ಲಿ ಕಚ್ಚಾ ಉತ್ಪನ್ನವಾಗಿ ಬಳಕೆ ಮಾಡಲಾಗುತ್ತದೆ.

ಹೊಸ ಜಾಗತೀಕರಣ ನೀತಿಗಳು ರಸಗೊಬ್ಬರ ವಲಯ ಮೇಲೆ ಗಂಭೀರ ಪರಿಣಾಮ ಬೀರಿದೆ. ಇಷ್ಟು ಮಾತ್ರವಲ್ಲದೆ ರಸಗೊಬ್ಬರ ಉತ್ಪಾದನೆ ಮತ್ತು ಸರಬರಾಜಿಗೆ ನೀಡುತ್ತಿದ್ದ ಸಹಾಯಧನ ಕಡಿತಗೊಳಿಸಿದ್ದರಿಂದ ಹಲವಾರು ರಾಸಾಯನಿಕ ಗೊಬ್ಬರ ತಯಾರಿಕೆ ಕಾರ್ಖಾನೆಗಳು ರೋಗಗ್ರಸ್ತವಾಗಿವೆ. ರಾಜ್ಯದಲ್ಲಿ ರಸಗೊಬ್ಬರ ಸಮರ್ಪಕವಾಗಿ ದೊರೆಯದಿರಲು ಕಾರಣ ಯಾರು ಎಂಬುದರ ಕುರಿತು ಆಡಳಿತ ಮತ್ತು ವಿರೋಧ ಪಕ್ಷಗಳ ನಡುವಿನ ಕಿತ್ತಾಟಕ್ಕೆ ರಾಜ್ಯ ವಿಧಾನಸಭೆ ವೇದಿಕೆಯಾಯಿತು. ಯುಪಿಎ ಮತ್ತು ಎನ್‌ಡಿಎ ಎರಡೂ ಸರ್ಕಾರಗಳು ಈ ಬಿಕ್ಕಟ್ಟಿಗೆ ಕಾರಣವಾಗಿದ್ದು ಸಾಮಾನ್ಯ ಜನ ಮತ್ತು ರೈತರು ಬಲಿಪಶುಗಳಾಗಿದ್ದಾರೆ.

ರೈತರು ಮತ್ತು ಕಾರ್ಮಿಕರು

ಪೊಲೀಸರು ನಡೆಸಿದ ಗೋಲಿಬಾರ್‌ನಲ್ಲಿ ಮೃತರಾದ ಮತ್ತು ಪ್ರತ್ಯೇಕವಾಗಿ ಬಿಜೆಪಿ ಅಧಿಕಾರಕ್ಕೆ ಬಂದ ನಂತರ ಆತ್ಮಹತ್ಯೆ ಮಾಡಿಕೊಂಡ ರೈತರ ಪರವಾಗಿ ನಾವು ಹೆಚ್ಚು ಆತಂಕಿತರಾಗಿದ್ದೇವೆ. ಈ ಸಾವುಗಳಿಗೆ ಪ್ರಮುಖ ಕಾರಣ ಎಂದರೆ ಹೊಸ ಆರ್ಥಿಕ ನೀತಿಗಳು, ಕೃಷಿಗೆ ಅಗತ್ಯವಾದ, ಕಚ್ಚಾ ಉತ್ಪನ್ನಗಳ ದರಗಳನ್ನು ಇಚ್ಛಾನುಸಾರ ನಿಗದಿಪಡಿಸುವುದುದಾಗಿದೆ. ರೈತರು ತಾವು ಮಾಡುತ್ತಿರುವ ವೆಚ್ಚ ಎಷ್ಟೆಂಬುದನ್ನು ಅರಿಯಲು ಸಹ ವಿಫಲರಾಗಿದ್ದಾರೆ. ಇದರಿಂದಾಗಿ ರೈತರು ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ.

ಇಂತಹದೇ ಶಕ್ತಿಗಳು ಕಾರ್ಮಿಕರ ವೇತನ ಕುಂಟಿತವಾಗಲು ಕಾರಣವಾಗಿವೆ. ಕಾರ್ಮಿಕ ಕಾಯ್ದೆಗಳನ್ನು ಸಮರ್ಪಕವಾಗಿ ಜಾರಿಗೊಳಿಸದಿರುವುದರಿಂದ ಕಾರ್ಮಿಕರ ಬದುಕು ದುಸ್ತರವಾಗುತ್ತಿದೆ. ಕಾರ್ಮಿಕ ಸಂಘಟನೆಗಳನ್ನು ಹೊಸಕಿ ಹಾಕುವುದು ಮತ್ತು ಕೃಷಿ ವಲಯವನ್ನು ತನ್ನ ಕಪಿಮುಷ್ಟಿಯಲ್ಲಿ ಇಟ್ಟುಕೊಳ್ಳುವ ಮೂಲಕ ಆಳುವ ವರ್ಗಗಳು ಬಂಡವಾಳಶಾಹಿಗಳಿಗೆ ಅನುಕೂಲ ಕಲ್ಪಿಸುವಂತೆ ಕಾರ್ಯ ಮಗ್ನವಾಗಿವೆ.

ಕಾರ್ಮಿಕ ವರ್ಗ ಇಂತಹ ಏಕಸ್ವಾಮ್ಯ ಶಕ್ತಿಗಳು ಮತ್ತು ಎಲ್‌ಪಿಜಿ ನೀತಿಗಳನ್ನು ಅನುಸರಿಸುವುದರ ವಿರುದ್ಧ ಹೋರಾಟ ನಡೆಸಲು ಮುಂದಾಗಬೇಕು. ಕಾರ್ಮಿಕರು, ರೈತರು, ವಿದ್ಯಾರ್ಥಿ, ಯುವಜನರು, ಮಹಿಳೆಯರು ಸೇರಿದಂತೆ ಎಲ್ಲಾ ವರ್ಗಗಳು ಐಕ್ಯ ಕಾರ್ಯಾಚರಣೆ ನಡೆಸಬೇಕೆಂದು ಕರೆ ನೀಡಲಾಗುತ್ತಿದೆ.

ಕೇಂದ್ರ ಸಾರ್ವಜನಿಕ ಉದ್ದಿಮೆಗಳು ಸೇರಿದಂತೆ ವಿಮಾ ಮತ್ತು ಬ್ಯಾಂಕಿಂಗ್ ವಲಯದ ಸಿಬ್ಬಂದಿ ವೇತನ ಹೆಚ್ಚಿಸುವಲ್ಲಿ ವಿಳಂಬಗೊಳಿಸಲಾಗುತ್ತಿದೆ. ಇದರಿಂದಾಗಿ ಕೇವಲ ಈ ವೇತನವನ್ನೇ ಅವಲಂಬಿಸಿರುವ ಕಾರ್ಮಿಕರು ಜೀವನ ಸಾಗಿಸಲು ಹೆಣಗಾಡು ವಂತಾಗಿದೆ.

ಆರನೇ ವೇತನ ಆಯೋಗ ಅಪಾರ ಪ್ರಮಾಣದ ಕೇಂದ್ರ ಸರ್ಕಾರಿ ನೌಕರರಿಗೆ ನ್ಯಾಯ ಕಲ್ಪಿಸುವಲ್ಲಿ ವಿಫಲವಾಗಿದೆ. ಈ ಅನ್ಯಾಯವನ್ನು ಸರಿಪಡಿಸಬೇಕೆಂದು ಒತ್ತಾಯಿಸಲಾಗುತ್ತಿದೆ. ಪಿಂಚಣಿ ಪಡೆಯುತ್ತಿರುವ ಸರ್ಕಾರಿ ನೌಕರರನ್ನು ಕೊಡುಗೆ ಮಾದರಿಯ ಪಿಂಚಣಿ ಯೋಜನೆಗೆ ಒಳಗಾಗುವಂತೆ ಒತ್ತಡ ಹೇರಲಾಗುತ್ತಿದೆ.

5ನೇ ವೇತನ ಆಯೋಗದ ಸಂದರ್ಭ ದಲ್ಲೂ ರಾಜ್ಯ ಸರ್ಕಾರಿ ನೌಕರರು ಸಮರ್ಪಕವಾದ ಸೌಲಭ್ಯಗಳನ್ನು ಪಡೆದಿರಲಿಲ್ಲ. ಸರ್ಕಾರಿ ನೌಕರರನ್ನು ದಿನೇ ದಿನೇ ಕಡಿಮೆಗೊಳಿಸುತ್ತಿರುವುದು ಯುವಜನತೆಯಲ್ಲಿ ಅಮೂಲ್ಯ ಮಾನವ ಸಂಪನ್ಮೂಲವನ್ನು ವ್ಯರ್ಥ ಮಾಡುತ್ತಿದೆ ಮತ್ತು ಗ್ರಾಮೀಣ ಪ್ರದೇಶದ ಯುವಜನತೆ ಮೇಲೆ ಇದು ಮಾರಕ ಪರಿಣಾಮ ಬೀರಿದೆ. ಎಲ್‌ಪಿಜಿ ನೀತಿಗಳಿಂದಾಗಿ ಸರ್ಕಾರಗಳು ಸ್ವಯಂಸೇವೆ ಮಾದರಿಯ ನೇಮಕಾತಿ ಮತ್ತು ಗುತ್ತಿಗೆ ಆಧಾರಿತ ನೇಮಕಾತಿಯನ್ನು ಮಾಡಿಕೊಳ್ಳುತ್ತಿವೆ. ಗುತ್ತಿಗೆ ಪದ್ಧತಿ, ಪೌರಕಾರ್ಮಿಕರು, ಆರೋಗ್ಯವಲಯ ಮತ್ತು ಇತರ ಸೇವಾ ವಲಯದ ಸಿಬ್ಬಂದಿ ಮೇಲೆ ಗಂಭೀರ ಪರಿಣಾಮ ಬೀರಿದೆ. ಅಂಗನ ವಾಡಿ, ಅಕ್ಷರದಾಸೋಹ ಮತ್ತಿತರ ಸರ್ಕಾರಿ ಯೋಜನೆಗಳಿಗೆ 'ಸ್ವಯಂಸೇವೆ' ಆಧಾರಿತ ವಾಗಿ ನೇಮಕಾತಿ ಮಾಡಿಕೊಳ್ಳ ಲಾಗುತ್ತಿದೆ. ಈ ಪದ್ಧತಿ ಸಂವಿಧಾನದ ಮೂಲ ಆಶಯವಾದ ಸಮಾನತೆ ಮತ್ತು ಸಾಮಾಜಿಕ ನ್ಯಾಯ ಸಿದ್ಧಾಂತಕ್ಕೆ ವಿರುದ್ಧವಾಗಿದೆ.

ಮೇಲೆ ಪ್ರಸ್ತಾಪಿಸಿರುವ ಹಲವಾರು ಬೇಡಿಕೆಗಳೊಂದಿಗೆ ಬೆಲೆ ಏರಿಕೆ ನಿಯಂತ್ರಣ, ಕಾರ್ಮಿಕ ಕಾನೂನುಗಳ ರಕ್ಷಣೆ, ಅಸಂಘಟಿತ ವಲಯದ ಕಾರ್ಮಿಕರ ವೇತನ ಕಾಯ್ದೆ ಅಳವಡಿಸಬೇಕು. ಕಡಿಮೆ ಬಡ್ಡಿ ದರದಲ್ಲಿ ರೈತರಿಗೆ ಸಲೀಸಾಗಿ ಸಾಲ ದೊರೆಯುವಂತೆ, ರಸಗೊಬ್ಬರ, ಬಿತ್ತನೆ ಬೀಜ

ಪುಟ 14ಕ್ಕೆ

ಹಾವೇರಿ ಗೋಲಿಬಾರ್ : ಬಿಜೆಪಿ ಸರ್ಕಾರದ ಬಣ್ಣ ಬಯಲು

ಹಾವೇರಿ ರಸಗೊಬ್ಬರದ ಹೋರಾಟದಲ್ಲಿ ಬಿಜೆಪಿ ಸರ್ಕಾರದ ಗುಂಡೇಟು ತಿಂದು ಬೆಂಗಳೂರಿನ ಆಸ್ಪತ್ರೆಯಲ್ಲಿ ಸಾವು ಬದುಕಿನ ನಡುವೆ ಹೋರಾಡುತ್ತಿದ್ದ ಮತ್ತೊಬ್ಬ ರೈತ ತೀರಿಕೊಂಡಿದ್ದಾರೆ. ಬಿಜೆಪಿ ಸರ್ಕಾರ ತೆಗೆದುಕೊಂಡ ಬಲಿಯ ಸಂಖ್ಯೆ ಹೆಚ್ಚಾಗಿದೆ. ಹಾವೇರಿ ಇದರ ವಿರುದ್ಧ ಇತ್ತೀಚೆಗೆ ತೀವ್ರ ಪ್ರತಿಭಟನೆಯೂ ನಡೆದಿದೆ.

ಮಾನ್ಯ ಬಿ.ಎಸ್.ಯಡ್ಯೂರಪ್ಪ ಸರ್ಕಾರ ಅಧಿಕಾರ ವಹಿಸಿಕೊಂಡ ಹತ್ತು ದಿನಗಳಲ್ಲಿ ರೈತರ ಮೇಲೆ ಗುಂಡು ಹಾರಿಸಿದೆ. ತನ್ನ ರೈತ ವಿರೋಧಿ ನೀತಿಯನ್ನು ಜನತೆಗೆ ತೋರಿಸಿದೆ. ಗುಂಡುಗಳಿಗೆ ಎದೆ ತೋರಿಸಿದ ಈ ರೈತರ ತಪ್ಪಾದರೂ ಏನು? ಕೇವಲ ರಸಗೊಬ್ಬರ ಕೇಳಿದ್ದು, ರೈತರು ರಸಗೊಬ್ಬರಕ್ಕಾಗಿ ಹಾತೊರೆಯಲು ಪ್ರಬಲ ಕಾರಣವಿದೆ. ಮಾರ್ಚ್ ತಿಂಗಳಲ್ಲಿ ಸುರಿದ ಅಕಾಲಿಕ ಮಳೆಯಿಂದಾಗಿ ರೈತರು ಬೆಳೆ ನಷ್ಟ ಅನುಭವಿಸಿದ್ದಾರೆ. ದನಕರುಗಳಿಗೆ ಮೇವು ಕೂಡ ಸಿಗದಂತಾಯಿತು. ಇಂಥ ಸ್ಥಿತಿಯಲ್ಲಿ ಈ ವರ್ಷ ಮುಂಗಾರು ಮಳೆ ಸಕಾಲಕ್ಕೆ ಪ್ರಾರಂಭವಾದದ್ದು, ರೈತರಿಗೆ ಸಂತಸವನ್ನುಂಟು ಮಾಡಿದ್ದು ಸಹಜ ಕಳೆದ ವರ್ಷ ಕಳೆದುಕೊಂಡದ್ದನ್ನು ಪಡೆಯಲು ಈಗ ಬಿತ್ತನೆ ಮಾಡಲು ಮುಂದಾದರು. ಅದಕ್ಕಾಗಿ ರಸಗೊಬ್ಬರ ಅನಿವಾರ್ಯ ಅಗತ್ಯ. ಆದರೆ ಮಾರುಕಟ್ಟೆಯಲ್ಲಿ ರಸಗೊಬ್ಬರದ ಅಭಾವ, ಒಂದಿಷ್ಟು ಕೃತಕ, ಒಂದಿಷ್ಟು ಸ್ವಾಭಾವಿಕ. ಒಟ್ಟಾರೆ ಗೊಬ್ಬರ ಉತ್ಪಾದನೆ ಕುಂಠಿತವಾಗಿರುವುದು ಸಹಜ. ಆದರೆ



ಇದ್ದ ಗೊಬ್ಬರವನ್ನಾದರೂ ಸರಿಯಾಗಿ ವಿತರಣೆ ಮಾಡಲಾಗಲಿಲ್ಲ. ಹೀಗಾಗಿ ರೈತರು ಸಾಲುಗಟ್ಟಿ ಗೊಬ್ಬರ ವಿತರಣಾ ಕೇಂದ್ರಗಳ, ಅಂಗಡಿಗಳ ಮುಂದೆ ದಿನಗಟ್ಟಲೆ ನಿಂತರು, ಗೊಬ್ಬರ ಸಿಗದೆ ಇದ್ದಾಗ ಆಕ್ರೋಶಗೊಂಡರು. ಅಂಗಡಿಗಳ ಮೇಲೆ ಕಲ್ಲು ತೂರಿದರು, ಸಾರಿಗೆ ಬಸ್ಸುಗಳನ್ನು ಸುಟ್ಟರು. ಇದನ್ನು ತಡೆಯಲು ಬಂದ ಪೋಲೀಸರ ಮೇಲೂ ಕಲ್ಲುಗಳು ಬಿದ್ದವು. ಧಾರವಾಡ, ಹುಬ್ಬಳ್ಳಿ, ಹಾವೇರಿ, ಬಂಕಾಪುರ, ಸಿಗ್ಗಾಂವ್, ದಾವಣಗೆರೆ ಮತ್ತು ಇತರೆ ಕಡೆಗಳಲ್ಲಿ ಆದದ್ದು ಇದೆ. ಆದರೆ ಹಾವೇರಿಯಲ್ಲೂ ಗೋಲಿಬಾರ್ ನಡೆದು ಹೋಯಿತು. ಸಿದ್ದಲಿಂಗಪ್ಪ ಚೂರಿ ಎಂಬ ರೈತ, ಇತರ 10 ರೈತರು, ಕೃಷಿ ಕೂಲಿಕಾರರು ತೀವ್ರ ಗಾಯಗೊಂಡರು.

ಆದರೆ ಈ ಗೋಲಿಬಾರ್ ನಡೆದದ್ದು ಯಾವುದೇ ಅಧಿಕಾರಿಯ ಆಜ್ಞೆ ಇಲ್ಲದೆ, ಆತ್ಮರಕ್ಷಣೆಗೆ ಎಂದು ಪೋಲಿಸರು ಸಮರ್ಥಿಸಿಕೊಂಡಿದ್ದಾರೆ. ರಾಜ್ಯ ಗೃಹ ಮಂತ್ರಿ ಈ ಗೋಲಿಬಾರ್ ತಪ್ಪಿಸಬಹುದಿತ್ತು ಎಂದು ಹೇಳಿಕೆ ನೀಡಿದ್ದಾರೆ. 'ಗೊಬ್ಬರ ಗಲಾಟೆ ಹಿಂದೆ ರಾಜಕೀಯ ಪಿತೂರಿ ಇದೆ' ಎಂದು ಮುಖ್ಯಮಂತ್ರಿ ಅವಲತ್ತುಕೊಂಡಿದ್ದಾರೆ. ಏನೇ ಆದರೂ ಹಾವೇರಿ ಮಟ್ಟಿಗೆ ಜೂನ್ 10 ಒಂದು ಕರಾಳ ದಿನವಾಗಿ ಪರಿಣಮಿಸಿತು.

ಈ ಗೋಲಿಬಾರ್ ಖಂಡಿಸಿ ಕರ್ನಾಟಕ ಪ್ರಾಂತ ರೈತ ಸಂಘವು ಇತರ ಸಾಮೂಹಿಕ ಸಂಘಟನೆಗಳ ನೆರವಿನಿಂದ 30.06.2008 ಸೋಮವಾರ ದಂದು ಬೃಹತ್ ಪ್ರತಿಭಟನಾ ಮೆರವಣಿಗೆ ಏರ್ಪಡಿಸಿತ್ತು. ವಿದ್ಯಾರ್ಥಿಗಳು, ಕೃಷಿ ಕೂಲಿಕಾರರು, ರೈತರು, ಹಮಾಲಿ ಕಾರ್ಮಿಕರು, ಜೈಲಿಗೆ ತಳ್ಳಲ್ಪಟ್ಟವರ ಸಂಬಂಧಿಗಳು ಈ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು. ಗೋಲಿಬಾರ್‌ನಲ್ಲಿ ಮೃತನಾದ ರೈತ ಸಿದ್ದಲಿಂಗಪ್ಪ ಚೂರಿ ಸಮಾಧಿಯಿಂದ ಹೊರಟ ಮೆರವಣಿಗೆ ಹೊಸಮನಿ ಸಿದ್ದಪ್ಪ ವೃತ್ತದಲ್ಲಿ ಒಂದು ನಿಮಿಷ ಮೌನ ಆಚರಿಸಿ, ಮುಂದೆ ಸಾಗಿ ಮೈಲಾರ ಮಹದೇವಪ್ಪ ವೃತ್ತದಲ್ಲಿ ಸಭೆಯಾಗಿ ಮಾರ್ಪಟ್ಟಿತು. ಪ್ರಾಂತ ರೈತ ಸಂಘದ ಜಿಲ್ಲಾ ಮುಖಂಡರಾದ ಬಿ.ಎಸ್.ಸೊಪ್ಪಿನ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘಟನೆಯ ರಾಜ್ಯಾಧ್ಯಕ್ಷರಾದ ನಿತ್ಯಾನಂದಸ್ವಾಮಿ ಅವರು ಮಾತನಾಡಿ, 'ಹಾವೇರಿ ಗೋಲಿಬಾರ್ ಒಂದು ಅಮಾನುಷ ಕೃತ್ಯ ಗೋಲಿಬಾರ್ ಮಾಡುವ ಯಾವ ಸನ್ನಿವೇಶ ಅಲ್ಲಿರಲಿಲ್ಲ' ಎಂದು ಗೋಲಿಬಾರ್ ಕ್ರಮವನ್ನು ಖಂಡಿಸಿದರು. ನಂತರ ಮಾತನಾಡಿದ ಮಾಜಿ ಶಾಸಕರಾದ ಜಿ.ವಿ.ಶ್ರೀರಾಮರೆಡ್ಡಿ 'ರಸಗೊಬ್ಬರದ ಕೊರತೆಗೆ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳೇ ಕಾರಣ. ರಸಗೊಬ್ಬರ ಮೇಲಿನ ಸಬ್ಸಿಡಿ ಕಡಿತದಿಂದಾಗಿ ರಸಗೊಬ್ಬರ ತಯಾರಿಕೆ ಕುಂಠಿತಗೊಂಡಿದೆ. ಈ ಸಬ್ಸಿಡಿ ಕಡಿತವು ಎ.ಬಿ.ವಾಜಪೇಯಿ ಸರ್ಕಾರದಿಂದ ಪ್ರಾರಂಭವಾಗಿ ಸದ್ಯದ ಯುಪಿಎ ಸರ್ಕಾರದಲ್ಲಿ ಮುಂದುವರೆದಿದೆ. ಇದು ಸಮಸ್ಯೆ ಮೂಲ. ರಸಗೊಬ್ಬರ ಕೊರತೆ ಕುರಿತು ಮುಖ್ಯಮಂತ್ರಿಗಳಾದ ಯಡಿಯೂರಪ್ಪನವರು ರೈತರೊಂದಿಗೆ ಮಾತನಾಡಬಹುದಿತ್ತು. ಗೋಲಿಬಾರ್ ಮಾಡಿ ರೈತರನ್ನು ಹೆದರಿಸಿದರೆ ಸಮಸ್ಯೆ ಪರಿಹಾರವಾಗದು. ಈಗ ಯಡಿಯೂರಪ್ಪನವರು ಸಮಸ್ಯೆಯನ್ನು ಕೇಂದ್ರದ ಹೆಗಲಿಗೆ ಏರಿಸಲು ಹೊರಟ್ಟಿದ್ದಾರೆ ಎಂದರು. ನಂತರ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯಾಧ್ಯಕ್ಷರಾದ ಮಾರುತಿ ಮಾನ್ಪಡೆ ಮಾತನಾಡಿ, ರಾಜ್ಯದಲ್ಲಿ ರೈತರ ಸರಣಿ ಆತ್ಮಹತ್ಯೆ ನಡೆಯುತ್ತಿದ್ದರೂ ಅದನ್ನು ತಡೆಯಲು ಪ್ರಾಮಾಣಿಕ ಪ್ರಯತ್ನ ಸರ್ಕಾರದಿಂದ ನಡೆಯುತ್ತಿಲ್ಲ. ರಸಗೊಬ್ಬರ ಬೀಜಗಳ ಸಮರ್ಪಕ ವಿತರಣೆ ಆಗದೆ ಇದ್ದಲ್ಲಿ ಆಹಾರ ಬೆಳೆ ಕುಂಠಿತವಾಗಿ, ಆಹಾರ ಅಭಾವ ಉಂಟಾಗುವ ಸಾಧ್ಯತೆ ಇದೆ ಎಂದರು. ಬಿ.ಎಸ್.ಸೊಪ್ಪಿ ಬೇಡಿಕೆಗಳ ಪಟ್ಟಿಯನ್ನು ಪ್ರಕಟಪಡಿಸಿ, ಮಾ ಜಿಲ್ಲಾಧಿಕಾರಿಗಳ ಪರವಾಗಿ ಸಹಾಯಕ ಆಯುಕ್ತರಿ ಸಲ್ಲಿಸಿದರು. ಗೋಲಿಬಾರ್‌ನಲ್ಲಿ ಮೃತಪಟ್ಟ ರೈತ ಕುಟುಂಬಕ್ಕೆ 10 ಲಕ್ಷ ಗಾಯಾಳುಗಳಿಗೆ 5 ಲಕ್ಷ ರು



ಪರಿಹಾರ, ಬಂಧಿತರೆಲ್ಲರ ಬೇಷರತ್ ಬಿಡುಗಡ ಬೀಜಗಳ ಮೇಲೆ ಶೇ.75 ರಷ್ಟು ಸಬ್ಸಿಡಿ, ಕೆ.ಸಿ. ಬ್ಯಾಂಕ್ ಪುನಶ್ಚೇತನ ಮುಂತಾದ ಬೇಡಿಕೆಗಳ ಸರ್ಕಾರಕ್ಕೆ ಸಲ್ಲಿಸಿ ಪರಿಹಾರಕ್ಕೆ ಆಗ್ರಹಿಸಲಾಯಿತು

ಮೆರವಣಿಗೆಯ ನೇತೃತ್ವವನ್ನು ಹಕ್ಕಲಗೌ ಪಾಟೀಲ, ಸಹದೇವಪ್ಪ ಕರುಣ್ಣವರ, ಎಸ್‌ಎಫ್‌ಐ ಬಸವರಾಜ ಪೂಜಾರ, ಬಸವರಾಜ ಬಾಕಿ ಮಂಜುಳಾ ಹೆಡೆಗೊಂಡ, ತಳ್ಳೆಪ್ಪ ಕಟಗಿ, ಭೀರಪ್ಪ ನೂರಣಿಗಿ, ಮಾರುತಿ ಅಂಬಿಗೇರ, ಡಿವೈಎಫ್‌ಐ ರಾಮು ವರ್ದಿ, ರವಿ ತಿಮ್ಮನಗೌಡರ, ವಿಕಾ ಹಿರೇಮಠ ...... ಮುಂತಾದವರು ವಹಿಸಿದ್ದರು

ಎಸ್‌ಎಫ್‌ಐ ಮುಖಂಡ ನಾರಾಯಣ ಕಾ ಎಲ್ಲರನ್ನು ಸ್ವಾಗತಿಸಿ ನಂತರ ವಂದಿಸಿದರು ಎಂ.ಎಸ್.ಹಡಪದ, ಬಸವರಾಜ ಮಂತೂ ಸಂಕಪ್ಪ ಕುರಹಟ್ಟಿ, ವಿಜಯಕುಮಾರ್ ದೊಡ್ಡಮನಿ ರುದ್ರಪ್ಪ ಜಾಬಿನ, ಅಣ್ಣಪ್ಪ ಚಿಕ್ಕಣ್ಣವರ ವೇದಿಕೆ ಮೇ ಉಪಸ್ಥಿತರಿದ್ದರು.

● ಬಿ.ಎಸ್.ಸೊ

ಜೈ ವಾಸ್ತು ಪುರುಷ... ಜೈ ರೆಡ್ಡಿ 'ಪೌರುಷ'

ತ್ರಿಪುರಾ ಅನ್ನೋ ರಾಜ್ಯದಲ್ಲಿ ಒಬ್ಬ ಮುಖ್ಯಮಂತ್ರಿ ಇದ್ದರು. 10 ವರ್ಷ ಅವರು ಮುಖ್ಯಮಂತ್ರಿಯಾಗಿ ಆಡಳಿತ ನಡೆಸಿದ ನಂತರ ಅವಿವಾಹಿತ ಮುಖ್ಯಮಂತ್ರಿಗಳು ಅಧಿಕೃತ ನಿವಾಸವನ್ನು ಖಾಲಿ ಮಾಡೋವಾಗ ಅವರ ಅವರ ಬಳಿ ಇದ್ದದ್ದು ಬಟ್ಟೆ ಬರೆಗಳಿದ್ದ ಒಂದು ಸೂಟ್‌ಕೇಸ್ ತಮ್ಮ ಪುಸ್ತಕಗಳ ಒಂದು ಕಂತೆ. ಇಷ್ಟೆ ಅವರ ಆಸ್ತಿ. ಅಷ್ಟು ಸರಳ ಬದುಕು ಅವರದ್ದು.

ಅವರ ಹೆಸರು ನೃಪೇಂದ್ರ ಚಕ್ರವರ್ತಿ ಅಂತ. ಸಿಪಿಐ(ಎಂ) ಮುಖಂಡರು ಅವರು. ತ್ರಿಪುರಾದ ಈಗಿನ ಮುಖ್ಯಮಂತ್ರಿ ಮಾಣಿಕ್ ಸರ್ಕಾರ ಅವರು ಕೂಡ ಸರಳತೆಯ ಪ್ರತೀಕವೇ.

ಇದು ಬರೀ ತ್ರಿಪುರಕ್ಕೆ ಮಾತ್ರ ಸಂಬಂಧೀಸಿದ ವಿಷಯ ಅಲ್ಲ. ದೇಶಾದ್ಯಂತ ಕಮ್ಯುನಿಸ್ಟ್ ಮುಖಂಡರು, ಶಾಸಕ, ಸಂಸದರು ಇಂತಹ ಆದರ್ಶಗಳನ್ನು ಮೈಗೂಡಿಸಿಕೊಂಡವರು ವ್ಯಾಪಕವಾಗಿದ್ದಾರೆ. ನಮ್ಮ ರಾಜ್ಯದ ಕಂದಾಯ ಮಂತ್ರಿ ಬಿ.ಕರುಣಾಕರರೆಡ್ಡಿಯವರನ್ನು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವ ನರೇಂದ್ರ ಸ್ವಾಮಿರನ್ನು ನೋಡಿದರೆ ಇವರೆಲ್ಲಾ ನೆನಪಾಗುತ್ತಾರೆ. ಯಾಕೆ ನೆನಪಾಗುತ್ತಾರೆ ಅಂತೀರಾ?

ನೋಡಿ, ಹೊಸ ಸರ್ಕಾರ ಬಂತು. ಇವರೆಲ್ಲಾ ಹೊಸ ಮಂತ್ರಿಗಳು. ಇವರಿಗೆ ವಾಸಿಸೋದಕ್ಕೆ ಹೊಸ ಬಂಗಲೆಗಳು ಬೇಡವೇ? ಯಾವುದೋ 'ಅಂದಕಾಲತ್ತಿಲ್' ಕಟ್ಟಿದ ಮನೆಗಳನ್ನು ಕೊಟ್ಟು ಬಿಟ್ಟರೆ ಅವರ ಒಪ್ಪುತ್ತಾರೆಯೇ? ಕರ್ನಾಟಕ ರಾಜ್ಯದ ಚಿತ್ರವನ್ನೇ ಬದಲಿಸುತ್ತೇವೆ. ಅಂಥ ಅಭಿವೃದ್ಧಿ ಮಾಡುತ್ತೇವೆ ಅಂತ ಬಿಜೆಪಿ ಸರ್ಕಾರ ಶಪಥ ಮಾಡಿದೆ. ಅಂತಹ ಅಭಿವೃದ್ಧಿ ಸಚಿವರು ಬಂಗಲೆಗಳಿಂದಲೇ ಆರಂಭವಾಗಿದೆ.

ಬೆಂಗಳೂರಿನ ರೇಸ್‌ಕೋರ್ಸ್ ಎದುರಿಗೆ ಇರುವ ಬಿ.ಕರುಣಾಕರರೆಡ್ಡಿ ಯವರಿಗೆ ನೀಡಲಾಗಿರುವ ಒಂದೂವರೆ ಎಕರೆಯುಳ್ಳಿರುವ ಬಂಗಲೆಯ ನವೀಕರಣ ಕೆಲಸ ನಡೆಯುತ್ತಿದ್ದು, ಇಷ್ಟು ದೊಡ್ಡ ಬಂಗಲೆಯ ನವೀಕರಣಕ್ಕೆ ರೆಡ್ಡಿಯವರು ಖರ್ಚು ಮಾಡುತ್ತಿರುವುದು ಕೇವಲ 70 ಲಕ್ಷ.

ಜನ ಕಟ್ಟಿದ ತೆರಿಗೆ ಹಣ ತಾನೇ ಅದು. ಹಾಗಾಗಿ ಅಷ್ಟೇ ಅವರು ಖರ್ಚು ಮಾಡುತ್ತಿರುವುದು. ರೆಡ್ಡಿಯವರು ಸಿಂಗಾಪುರಕ್ಕೆ ಹೋದಾಗ ಅಲ್ಲಿ ಒಂದು ಮನೆಯ ವಿನ್ಯಾಸ ಅವರಿಗೆ ತುಂಬಾ ಇಷ್ಟವಾಯಿತಂತೆ. ಇನ್ನೊಂದು ಆಂಧ್ರ ಪ್ರದೇಶದ ಒಬ್ಬ ಖಳನಾಯಕ ಯಾರೋ ಒಂದು ಮಜಬೂತಾದ ಮನೆ ಕಟ್ಟಿಸಿದ್ದಾನಂತೆ. ಇವರೆಡರಲ್ಲಿ ಒಂದು ಮಾದರಿ ಆಧಾರದಲ್ಲಿ ಮನೆ ನವೀಕರಣಗೊಳ್ಳುತ್ತಿದೆ. ನಾಲ್ಕು ತಿಂಗಳೊಳಗಾಗಿ ಮನೆ ನವೀಕರಣಗೊಳ್ಳಬೇಕಂತೆ. ಎರಡರಲ್ಲಿ ಯಾವ ಮಾದರಿ ಅನ್ನೋದು ಸದ್ಯಕ್ಕೆ ಗುಟ್ಟು.

ಅದನ್ನ ನೋಡೋಣ ಅಂತ ಹೋದರೆ ಅಲ್ಲಿ ಪೋಲೀಸರ ಬಿಗಿ ಕಾವಲು. ಯಾರನ್ನೂ ಒಳಗೆ ಬಿಡೋದಿಲ್ಲ. ಹಾಗಂತ ಆದೇಶ ಇದೆ ಅಂತಾರೆ. ಈ ಮನೆಯ ಪಕ್ಕಕ್ಕೆ ಇರುವುದು ಬಿ.ಎಸ್. ಯಡಿಯೂರಪ್ಪನವರ ಮನೆ. (ಯಡಿಯೂರಪ್ಪನ ಮನೆ ಕಾಯುವ ಪೋಲೀಸ್ ಅಧಿಕಾರಿಗಳ ವಿಚಾರಿಸಿದರೆ ಪಕ್ಕದಲ್ಲೇ ಇರುವ ಕರುಣಾಕ ರೆಡ್ಡಿಯವರ ಮನೆ ಎಲ್ಲಿದೆಯೋ ಗೊತ್ತಿಲ್ಲ ಅಂತಾ ಯಡಿಯೂರಪ್ಪ ಅವರು ವಿರೋಧ ಪಕ್ಷ ನಾಯಕರಾಗಿದ್ದಾಗ ಇದ್ದ ಮನೆಗೆ ಬಂದ ಮೇ ಅವರಿಗೆ ಶುಭವಾಗಿ ರುವುದರಿಂದ ಅದೀ ಶೋಭಕ್ಕನವರಿಗೆ ದಕ್ಕಿದೆ. ಯಡಿಯೂರಪ್ಪನವ ಈ ಮೊದಲು ವಾಸ್ತ ಪ್ರಕಾರ ಅದರ ಬದಲಾವ ಮಾಡಿರುವುದರಿಂದ ಈಗ ಶೋಭಕ್ಕನಿಗೆ ಸಲೀಸ ಆದರೆ ಪಾಪ ಪಕ್ಷೇತರರಾಗಿ ಗೆದ್ದು ಬಂದ ಸಚಿವರಾಗಿರುವ ನರೇಂದ್ರ ಸ್ವಾಮಿಯವ ಮನೆಯನ್ನು ಮೊದಲು ವಾಸ್ತು ಪ್ರಕಾರ ಯಾರಾದರು ಬದಲಾಯಿಸಿದ್ದಾರೋ ಇಲ್ಲವೋ ಗೊತ್ತಿಲ ಆದ್ದರಿಂದ ಅವರ ಬಂಗಲೆಗೆ 5 ಲಕ್ಷ ನೀಡಲಾಗುತ್ತಿ ನವೀಕರಣದ ಹೆಸರಿನಲ್ಲಿ. ಶುಭ ಕಾರ್ಯ ನಡೆಸಲ ಹೆಸರು ಯಾವುದಾದರೇನು ಅಲ್ಲವೇ? ಒಟ್ಟಿನ ಒಳ್ಳೆಯದಾಗಬೇಕು(ಮಂತ್ರಿಗಳಿಗೆ)ಅಷ್ಟೇ.

ಜೈ ವಾಸ್ತು ಪುರುಷ, ಜೈ ಸಿಂಗಾಪುರ, ರೆಡ್ಡಿಗಾರು.

ಕೇರಳ

ಕೇರಳದ ಶಾಲಾ ಪಠ್ಯವೊಂದರ ಕುರಿತು ಅನಗತ್ಯವಾಗಿ ವಿವಾದ ಎಬ್ಬಿಸಲಾಗಿದೆ. ಏನಿದರ ಸಮಾಚಾರ?

ಪಠ್ಯಪುಸ್ತಕ ವಿವಾದವೇನು?

ಈ ವರ್ಷ ಕೇರಳದಲ್ಲಿ ಏಳನೇ ತರಗತಿಗೆ ಅಳವಡಿಸಲಾದ ಸಮಾಜವಿಜ್ಞಾನ ಪಠ್ಯ ಪುಸ್ತಕವೂ ಅಲ್ಲಿನ ಯುಡಿಎಫ್, ಮುಸ್ಲಿಂ, ಕ್ರಿಶ್ಚಿಯನ್ ಹಾಗೂ ನಾಯರ್ ಸಮಾಜದ ಸಂಕುಚಿತವಾದಿಗಳ ಕಣ್ಣನ್ನು ಕೆಂಪಾಗಿಸಿದೆ.

ಕೇರಳದ ಎಲ್‌ಡಿಎಫ್ ಸರ್ಕಾರವು, ಕೇರಳ ಪಠ್ಯ ಪುಸ್ತಕ ಸಮಿತಿಯು ರಾಷ್ಟ್ರೀಯ ಪಠ್ಯ ಪುಸ್ತಕ ನೆಟ್‌ವರ್ಕ್‌ನ ನೀತಿಯ ಅನ್ವಯ ಸಿದ್ಧಪಡಿಸಲಾದ ಪಠ್ಯವನ್ನು ಏಳನೇ ತರಗತಿಗೆ ಪರಿಚಯಿಸುವ, ಇದೀಗ ಈ ಪಠ್ಯದಲ್ಲಿರುವ ಒಂದು ಅಧ್ಯಾಯವನ್ನೇ ಅಲ್ಲಿನ ಎಡರಂಗ ವಿರೋಧಿಗಳು ತಮ್ಮದಾಳವನ್ನಾಗಿಸಿ ಕೊಂಡು ರಾಜ್ಯದಲ್ಲಿ ಅನಗತ್ಯ ವಿವಾದ ಎಬ್ಬಿಸಿ ಹಿಂಸಾಚಾರವನ್ನು ಹರಿಯಬಿಟ್ಟಿದ್ದಾರೆ.

ಆದರೆ ವಾಸ್ತವವಾಗಿ ವಿವಾದವೆಂದು ಹೇಳಲಾಗುತ್ತಿರುವ ಏಳನೇ ತರಗತಿಯ ಸಮಾಜವಿಜ್ಞಾನದ ಅಧ್ಯಾಯ "ಜೀವನ್‌ಗೆ ಯಾವುದೇ ಧರ್ಮವಿಲ್ಲ" (Jeevan who has no Religion) ಮಕ್ಕಳಿಗೆ ಮತ್ತು ಸಮಾಜಕ್ಕೆ ಯಾವ ಸಂದೇಶ ನೀಡುತ್ತದೆ?

ಅಂತರಧರ್ಮೀಯ ವಿವಾಹವಾದ ದಂಪತಿಗಳು ತಮ್ಮ ಮಗನನ್ನು ಶಾಲೆಗೆ ಸೇರಿಸಲು ತಮ್ಮ ಮಗುವಿನೊಂದಿಗೆ ಬರುತ್ತಾರೆ.

ಆ ಸಂದರ್ಭದಲ್ಲಿ ಶಾಲೆಯ ಮುಖ್ಯೋಪಧ್ಯಾಯ - ಮಗು ಹಾಗೂ ಅವನ ಪೋಷಕರ ಮಧ್ಯ ನಡೆಯುವ ಸಂಭಾಷಣೆ ಹೀಗಿದೆ.

ಶಿಕ್ಷಕ- ಮಗೂ ನಿನ್ನ ಹೆಸರೇನು?
ಮಗು- ಜೀವನ್ ಎಂದುತ್ತರಿಸುತ್ತದೆ.
ಶಿಕ್ಷಕ- ಒಳ್ಳೆಯ ಹೆಸರು ನಿನ್ನ ತಂದೆಯ ಹೆಸರೇನು?
ಮಗು- ರಶೀದ್,
ಶಿಕ್ಷಕ- ತಾಯಿಯ ಹೆಸರು?
ಮಗು- ಲಕ್ಷ್ಮೀದೇವಿ

ಮಗುವಿನ ಉತ್ತರದ ನಂತರ ಮುಖ್ಯೋಪಧ್ಯಾಯರು ಆ ವಿದ್ಯಾರ್ಥಿ ಪೋಷಕರತ್ತ ದಿಟ್ಟಿಸಿ...

'ನೀವು ನಿಮ್ಮ ಮಗುವನ್ನು ಯಾವ ಧರ್ಮದ ಹೆಸರಿನಲ್ಲಿ ಸೇರಿಸಬಯಸುತ್ತೀರಿ' ಎಂದು ಪ್ರಶ್ನಿಸುತ್ತಾರೆ. ಆಗ ಪೋಷಕರು 'ಇಲ್ಲ. ಬೇಕಾದರೆ ನೀವು ಯಾವ ಧರ್ಮವೂ ಇಲ್ಲ ಎಂದು ಬರೆಯಬಹುದು' ಎನ್ನುತ್ತಾರೆ.

ಶಿಕ್ಷಕ- ಜಾತಿ?
ಪೋಷಕರು-ಅದರ ಅವಶ್ಯಕತೆಯಿಲ್ಲ.

ಈ ಉತ್ತರದ ನಂತರ ಮುಖ್ಯೋಪಾಧ್ಯಾಯರು ತನ್ನ ಕುರ್ಚಿಗೆ ಒರಗಿಕೊಳ್ಳುತ್ತಾ ಮತ್ತೊಂದು ಪ್ರಶ್ನೆಯನ್ನು ಪೋಷಕರ ಎದುರು ಇಡುತ್ತಾರೆ. ಒಂದು ವೇಳೆ ದೊಡ್ಡವನಾದ ಮೇಲೆ ಅವನಿಗೆ ಮಾತ್ರ ಧರ್ಮದ ಅನಿವಾರ್ಯತೆ ಕಂಡು ಬಂದರೆ....

ಆಗ ಅವನಿಗೆ ಬೇಕಾದ ಧರ್ಮವನ್ನು ಅವನು ಆಯ್ಕೆ ಮಾಡಿಕೊಳ್ಳಬಹುದು ಎಂಬ ಉತ್ತರ ಪೋಷಕರಿಂದ ಬರುತ್ತದೆ. ಇದೇ ಏಳನೇ ತರಗತಿಯ ಆ ಪಠ್ಯಪುಸ್ತಕದಲ್ಲಿ ಬರುವ ಅಧ್ಯಾಯದ ಕಥಾವಸ್ತು. ವಿಶಾಲವಾಗಿ ಯೋಚಿಸುವ ಯಾರಿಗಾದರೂ ಸರಿಯೇ ಅಲ್ಲೊಂದು ಕ್ರಾಂತಿಕಾರಿ ಹೆಜ್ಜೆ ಗುರುತು ಕಾಣುತ್ತದೆ. ಇನ್ನು ಕೇರಳದಲ್ಲಿ ಅಂತರಧರ್ಮೀಯ ಮದುವೆಗಳೇನೂ ಹೊಸತಲ್ಲ. ಅಂತಹ ಮದುವೆಗಳು ನಡೆದಾಗ ಅಲ್ಲಿನ ಜನ ದೇಶದ ಇತರೆಡೆಗಳಂತೆ ಹುಬ್ಬೇರಿಸುವುದಿಲ್ಲ. ಅಲ್ಲದೆ ಇಂತಹ ಮದುವೆಗಳಿಂದಾಗಿ ಜನಿಸುವ ಮಕ್ಕಳ ವಿಚಾರದಲ್ಲೂ ಇಲ್ಲಿನ ಸಾಮಾಜಿಕ ಕಟ್ಟಳೆ ಮತ್ತು ಧಾರ್ಮಿಕ ಕಟ್ಟುಪಾಡುಗಳು ಸದಾ ತಟಸ್ಥ ಧೋರಣೆ ಹೊಂದುತ್ತವೆ. ಇದರಿಂದಾಗಿ ಕೇರಳ ಸಮಾಜದಲ್ಲಿ ಈ ರೀತಿಯ ಮಕ್ಕಳಿಗೆ ಎಲ್ಲಾ ಸಾಮಾಜಿಕ ಸ್ಥಾನಮಾನಗಳು ಯಾರ ಅಡೆತಡೆಯಿಲ್ಲದೆ ಸಿಗುತ್ತವೆ. ಅಲ್ಲದೆ ಭಾರತದ ಜಾತ್ಯಾತೀತ ಸಂವಿಧಾನವೂ ಯಾವುದೇ ವ್ಯಕ್ತಿಯು ತನಗೆ ನಂಬಿಕೆಯಿರುವ ಮತವನ್ನು ಒಪ್ಪುವ ಅಥವಾ ಬಿಡುವ ಅವಕಾಶವನ್ನು ನೀಡಿದೆ.

ಅಲ್ಲದೇ ಅಳವಡಿಸಲಾದ ಪಠ್ಯ ಪುಸ್ತಕದ ಅಧ್ಯಾಯವು ಮಗುವು ಅಧರ್ಮಿಧ್ಯಾಯನಾಗಿ ಬೆಳೆಯಲಿ ಎಂದೇನೂ ಬೋಧಿಸುತ್ತಿಲ್ಲ. ಬದಲಾಗಿ ಮಗು ಬೆಳೆಯುತ್ತಾ ತನಗೆ ಧರ್ಮದ ಅವಶ್ಯಕತೆ ಕಂಡು ಬಂದರೆ ಯಾವುದೇ ಧರ್ಮವನ್ನು ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯವನ್ನು ಮುಕ್ತವಾಗಿರಿಸಿದೆ. ಇದು ಅಂತರ ಧರ್ಮಿಯ ಮದುವೆಗಳಿಂದಾಗಿ ಜನಿಸುವ ಮಕ್ಕಳ ಮುಂದಿರುವ ಪ್ರಾಯೋಗಿಕ ಪರಿಹಾರ. ಇದನ್ನೇ ಭಾರತದ ಸರ್ಕಾರ ಪ್ರತಿಪಾದಿಸದೇ ಮಾತ್ರವಲ್ಲ ಬಹುಸಂಖ್ಯಾತ ಕೇರಳ ಸಮಾಜ ಕೂಡ ಅಂಗೀಕರಿಸಿದೆ. ಹಾಗಿದ್ದು ಕೇರಳದಲ್ಲಿ ಈ ಪಠ್ಯಪುಸ್ತಕ ಈಗ ಕಾಂಗ್ರೆಸ್- ಬಿಜೆಪಿ-ಮುಸ್ಲಿಂ-ಕ್ರಿಶ್ಚಿಯನ್ ಮತ್ತು ನಾಯರ್ ಸೇವಾ ಸಮಾಜದ ಸಂಕುಚಿತವಾದಿಗಳಿಂದಾಗಿ ವಿವಾದ ವಾಗಿದೆ. ಈ ವಿಚಾರವಾಗಿ ಈ ಎಲ್ಲಾ ಶಕ್ತಿಗಳು ಎಡರಂಗ ಸರ್ಕಾರದ ವಿರುದ್ಧ ಒಂದಾಗಿವೆ. ಮಾತ್ರವಲ್ಲ ಅಂತಹ ಪಠ್ಯವನ್ನು ಅಳವಡಿಸುವ ಮೂಲಕ ಸರ್ಕಾರ ನಾಸ್ತಿಕವಾದವನ್ನು- ಮಾರ್ಕ್ಸ್‌ವಾದವನ್ನು ಮಕ್ಕಳಿಗೆ ಬೋಧಿಸಲು ಹೊರಟಿದೆ, ಸ್ಥಳೀಯ ಇತಿಹಾಸಗಳನ್ನು ವೈಭವೀಕರಿಸಿ, ರಾಷ್ಟ್ರೀಯ ಇತಿಹಾಸದ ಬಗ್ಗೆ ಕೀಳಭಿರುಚಿ ಬೆಳೆಸುವಂತಿದೆ ಎಂಬಿತ್ಯಾದಿ ಆರೋಪಗಳನ್ನು ಅವರು ಹೊರಿಸಿ ರಾಜ್ಯದಲ್ಲಿ ಹಿಂಸಾಚಾರವನ್ನು ಹರಿಬಿಟ್ಟಿದ್ದಾರೆ. ಅಲ್ಲದೆ ಆ ಪಠ್ಯ ಪುಸ್ತಕವನ್ನು ಹಿಂಪಡೆಯುವವರೆಗೂ ಹೋರಾಟ ನಡೆಸುವ ಶಪಥ ಗೈಯ್ದಿದ್ದಾರೆ.

ರಾಜ್ಯದ ಎಡರಂಗ ಸರ್ಕಾರ ಈ ವಿಚಾರವಾಗಿ ತಜ್ಞರ ಸಮಿತಿಯೊಂದನ್ನು ರಚಿಸಿ ಪರಿಶೀಲಿಸುವ ಭರವಸೆ ನೀಡಿದೆ. ಹಾಗಿದ್ದೂ ಈ ಕುರಿತಾದ ಚಳುವಳಿಯನ್ನು ನಿಲ್ಲಿಸಲು ವಿರೋಧಿಗಳು ತಯಾರಿಲ್ಲ. ಬದಲಾಗಿ ತಮ್ಮದೇ ವಿತಂಡವಾದಗಳನ್ನು ಮುಂದು ಮಾಡಿ ಹಿಂಸೆ-ಹರತಾಳ, ಪಠ್ಯಪುಸ್ತಕ ಸುಡುವ ಕೃತ್ಯದಲ್ಲಿ ನಿರತವಾಗಿದೆ. ಇದರಿಂದ ಸ್ಪಷ್ಟವಾಗುವ ಅಂಶವೆಂದರೆ '1959ರಲ್ಲಿ ಕಾಂ: ಇ.ಎಂ.ಎಸ್. ಸರ್ಕಾರವನ್ನು ಉರುಳಿಸಿ ರಾಷ್ಟ್ರಪತಿ ಆಳ್ವಿಕೆ ಹೇರಲು ಆಗ ರೂಪಿಸಿದ್ದ 'ವಿಮೋಚನಾ ಚಳುವಳಿ' ಆಟವನ್ನೇ ಅವು ಈಗಲೂ ಆಡಲು ಶುರು ಮಾಡಿವೆ.

ಯಾವಾಗೆಲ್ಲಾ ಎಲ್‌ಡಿಎಫ್ ಶಿಕ್ಷಣ ಸುಧಾರಣೆ ತರಲು ಯತ್ನಿಸುತ್ತದೋ ಆಗೆಲ್ಲಾ ವಿರೋಧಿಗಳು ಶಿಕ್ಷಣ- ಜಾತಿ- ಲಾಬಿಗಳೊಂದಿಗೆ ಸೇರಿ ಇಂತಹ ಷಡ್ಯಂತ್ರ ರೂಪಿಸುವುದು ನಡೆದೇ ಇದೆ. ಎಲ್‌ಡಿಎಫ್ ಅಧಿಕಾರಕ್ಕೆ ಬಂದ ಆರಂಭದಲ್ಲೇ ತಿರುವನಂತಪುರಂ ಜಿಲ್ಲೆಯಲ್ಲಿ ಪಿಯುಸಿ ಪ್ರವೇಶಕ್ಕೆ ಸಂಬಂಧಿಸಿ 'ಏಕಗವಾಕ್ಷಿ ಪದ್ಧತಿ' ಅಳವಡಿಸಲು ಮುಂದಾಯಿತು. ಈ ವ್ಯವಸ್ಥೆಯಿಂದ ವಿದ್ಯಾರ್ಥಿಗಳ ಹಣ-ಸಮಯ ಮತ್ತು ಆಡಳಿತ ಚುರುಕು ಮಾಡುವುದು ಮತ್ತು ಬಹುಮುಖ್ಯವಾಗಿ ಭ್ರಷ್ಟಾಚಾರವನ್ನು ನಿಯಂತ್ರಿಸಲು ಇದು ತೀರಾ ಅವಶ್ಯಕವಾಗಿತ್ತು. ಆದರೆ ಇದರ ವಿರುದ್ಧ ಕಾಂಗ್ರೆಸ್ ಪಕ್ಷ ಅನಾವಶ್ಯಕ ವಿವಾದ ಸೃಷ್ಟಿಸಿ ಹೋರಾಟಕ್ಕಿಳಿದಿತ್ತು. ಕೇರಳ ಹೈಕೋರ್ಟ್ ಸರ್ಕಾರದ ಕ್ರಮವನ್ನು ಬೆಂಬಲಿಸಿದ್ದರಿಂದ ವಿರೋಧಿಗಳಿಗೆ ಮುಖಭಂಗವಾಗಿ ಸುಮ್ಮನಾದವು.

> **ಮುಖ್ಯೋಪಧ್ಯಾಯರು ಆ ವಿದ್ಯಾರ್ಥಿ ಪೋಷಕರತ್ತ ದಿಟ್ಟಿಸಿ... 'ನೀವು ನಿಮ್ಮ ಮಗುವನ್ನು ಯಾವ ಧರ್ಮದ ಹೆಸರಿನಲ್ಲಿ ಸೇರಿಸಬಯಸುತ್ತೀರಿ' ಎಂದು ಪ್ರಶ್ನಿಸುತ್ತಾರೆ. ಆಗ ಪೋಷಕರು 'ಇಲ್ಲ. ಬೇಕಾದರೆ ನೀವು ಯಾವ ಧರ್ಮವೂ ಇಲ್ಲ ಎಂದು ಬರೆಯಬಹುದು' ಎನ್ನುತ್ತಾರೆ.**

ಕೇಂದ್ರದಲ್ಲಿರುವ ಕಾಂಗ್ರೆಸ್ ಸರ್ಕಾರ ವಿಪರೀತ ಬೆಲೆ ಏರಿಕೆ ಹಾಗೂ ಅಣು ಒಪ್ಪಂದಿಂದಾಗಿ ಜನರ ಕೆಂಗಣ್ಣಿಗೆ ಗುರಿಯಾಗಿದೆ. ಜನರಿಗೆ ಮುಖ ತೋರಿಸಲು ಅವರಿಗೆ ಸಾಧ್ಯವಾಗುತ್ತಿಲ್ಲ. ಇದನ್ನು ಜನರಿಂದ ಮರೆ ಮಾಡಲು ಕೇರಳದಲ್ಲಿ ಕಾಂಗ್ರೆಸ್ ವಿರೋಧಿಗಳೊಂದಿಗೆ ಕೈ ಜೋಡಿಸಿ ಬಲಪಂಥೀಯ ಬಿಜೆಪಿ ಮತ್ತು ಎಡಪಂಥೀಯ ತೀವ್ರಗಾಮಿಗಳ ಚಟುವಟಿಕೆಗಳಿಗೆ ಪ್ರಚೋದನೆ ನೀಡುತ್ತಿದೆ.

ಯಾವ ಪಠ್ಯಪುಸ್ತಕವನ್ನು ನಿಷೇಧಿಸಬೇಕೆಂದು ಯುಡಿಎಫ್ ಮತ್ತು ವಿರೋಧಿಗಳು ಆಗ್ರಹಪಡಿಸುತ್ತಿದ್ದಾರೋ, ಆ ಪುಸ್ತಕ ಈಗಾಗಲೇ ಓದುಗರಿಂದ ಉತ್ತಮ ಪ್ರತಿಕ್ರಿಯೆಗಳಿಸಿದೆ. ಈ ಬಗ್ಗೆ ಜನರು ಹಿಂದೆಂದಿಗಿಂತಲೂ ಆ ಪುಸ್ತಕವನ್ನು ಚರ್ಚೆಗೊಳಪಡಿಸಿದ್ದಾರೆ. ಹಾಗಿದ್ದೂ ಈ ಪಠ್ಯ ಪುಸ್ತಕವನ್ನು ಹೇಗಾದರೂ ರಾಷ್ಟ್ರೀಯ ಪಠ್ಯ ಪುಸ್ತಕ ಸಮಿತಿಗೆ ಕಳುಹಿಸಿ ಕೇಂದ್ರ ಸರ್ಕಾರದ ಅಧಿಕಾರ ಬಳಸಿ ಅದನ್ನು ನಿಷೇಧಿಸಬಹುದು ಎಂಬ ಸಂಚನ್ನು ಸರ್ಕಾರದ ಪಾಲುದಾರನಾಗಿರುವ ಮುಸ್ಲಿಂ ಲೀಗ್ ಮತ್ತು ಕಾಂಗ್ರೆಸ್‌ಗಳು ಯತ್ನಿಸುತ್ತಿವೆ.

ಆದರೆ ರಾಷ್ಟ್ರೀಯ ಪಠ್ಯ ಪುಸ್ತಕ ಸಮಿತಿಯ ಮಾರ್ಗದರ್ಶನವನ್ನು ಪಡೆದೇ ಕೇರಳ ಪಠ್ಯ ಪುಸ್ತಕ ಸಮಿತಿ ಈ ಪಠ್ಯಪುಸ್ತಕವನ್ನು ತಯಾರಿಸಿದೆ. ಅಲ್ಲದೆ ಈ ಪ್ರಕ್ರಿಯೆಯಲ್ಲಿ ಅತ್ಯಂತ ಹೆಚ್ಚಿನ ಜನರನ್ನು, ಶಿಕ್ಷಣ ತಜ್ಞರನ್ನು ಒಳಗೊಳ್ಳಿಸಿದ ಕೀರ್ತಿಗೆ ಕೇರಳ ಪಠ್ಯ ಪುಸ್ತಕ ಸಮಿತಿ ಪಾತ್ರವಾಗಿದೆ. ವಿಶೇಷವೆಂದರೆ ಈ ಪಠ್ಯಪುಸ್ತಕವನ್ನು ತಯಾರಿಸುವ ಪ್ರಕ್ರಿಯೆಯಲ್ಲಿ ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್‌ನ ಶಿಕ್ಷಕರ ಸಂಘದ ಪ್ರತಿನಿಧಿಗಳೂ ಪಾಲ್ಗೊಂಡಿದ್ದಾರೆ. ಇದೇ ಏಳನೇ ತರಗತಿಯ ಸಮಾಜ ವಿಜ್ಞಾನ ಭಾಗ-2 ರ ಪಠ್ಯ ಪುಸ್ತಕಕ್ಕೆ ಕೆಲವು ಮಾರ್ಪಾಡುಗಳ ಸಲಹೆಯನ್ನು ಅವರು ನೀಡಿದ್ದರು.

ಇನ್ನೂ ವಿಶೇಷವೆಂದರೆ ಈ ಎಲ್ಲಾ ಪಠ್ಯ ಪುಸ್ತಕ ತಯಾರಿಕೆಯ ಪ್ರಕ್ರಿಯೆಗಳು ನಡೆದಿದ್ದೂ ಎಲ್‌ಡಿಎಫ್ ಅಧಿಕಾರದಲ್ಲಿದ್ದ ಅವಧಿಯಲ್ಲೇ. ಅದೂ ರಾಷ್ಟ್ರೀಯ ಪಠ್ಯಪುಸ್ತಕ ಸಮಿತಿ ನೀತಿಗೆ ಅನುಗುಣವಾಗಿ ಮತ್ತು ವಿದ್ಯಾರ್ಥಿ-ಶಿಕ್ಷಕರ ಸಹಭಾಗಿತ್ವದಿಂದಲೇ.

ಕೇರಳದಲ್ಲಿ ರಚನೆಯಾಗಿರುವ ಈ ಪಠ್ಯಪುಸ್ತಕದ ಮತ್ತೊಂದುಮಹತ್ವದ ಅಂಶವೆಂದರೆ -ಸಮಾಜದಲ್ಲಿ ಅತ್ಯಂತ ನಿರ್ಲಕ್ಷತೆಗೊಳಪಟ್ಟ ಜನ ಸಮುದಾಯಗಳು ಮತ್ತು ಅವುಗಳ ಸಮಸ್ಯೆಗಳ ಬಗ್ಗೆ ವಿಶೇಷ ಆದ್ಯತೆ ನೀಡಿರುವುದು.

ವಸ್ತು ಸ್ಥಿತಿ ಹೀಗಿದ್ದರೂ ಯುಡಿಎಫ್ ಇತರೆ ಎಡರಂಗ ವಿರೋಧಿಗಳೊಂದಿಗೆ ಕೂಟ ಕಟ್ಟಿಕೊಂಡು ರಾಜ್ಯದಲ್ಲಿ ಹಿಂಸಾಚಾರದ ಹೋರಾಟಕ್ಕಿಳಿದಿದೆ. ಈ ಹೋರಾಟದ ಹಿಂದಿರುವ ರಾಜಕೀಯ ಕಾರಣ ಅತ್ಯಂತ ಸ್ಪಷ್ಟವಾಗಿ ಗೋಚರಿಸುತ್ತದೆ. ಪ್ರಗತಿಪರ ಚಳುವಳಿಯ ಇತಿಹಾಸ ಹೊಂದಿರುವ ಕೇರಳದಲ್ಲಿ ವಿರೋಧಿಗಳು ಪಠ್ಯಪುಸ್ತಕವಾಗಿ ಹುಟ್ಟು ಹಾಕಿರುವ ಈ ಉನ್ಮಾದದ ಬಗ್ಗೆ ರಾಷ್ಟ್ರೀಯ ಪಠ್ಯಪುಸ್ತಕ ಸಮಿತಿಯು ಸಹಾ ಆತಂಕ ವ್ಯಕ್ತಪಡಿಸಿದೆ.

ಆದರೆ ಕೇರಳದ ಪ್ರಜ್ಞಾವಂತ ಜನರು ಮತ್ತು ಕೇರಳದ ಪ್ರಗತಿಪರ ಸಮಾಜದ ಎಡರಂಗ ವಿರೋಧಿಗಳ ಆಟಕ್ಕೆ ಹಿಂದೆಯೂ ಅವಕಾಶ ನೀಡಿಲ್ಲ, ಈಗಲೂ ನೀಡುವುದಿಲ್ಲ.

■ ಎಂ.ಎ. ಬೇಬಿ,
ಶಿಕ್ಷಣ ಸಚಿವರು, ಕೇರಳ

ಬುಶ್ ಆಡಳಿತಕ್ಕೆ ನೀಡಿದ ವಚನವನ್ನು ಈಡೇರಿಸುವುದೇ ಮುಖ್ಯವೇ ಹೊರತು ಭಾರತದ ಜನತೆಗೆ ನೀಡಿದ ವಚನವನ್ನು ಈಡೇರಿಸುವುದಲ್ಲ ಎಂದು ತೋರಿಸಿಕೊಟ್ಟ ಯುಪಿಎ ಸರಕಾರಕ್ಕೆ ಬೆಂಬಲ ಸಾಧ್ಯವಿಲ್ಲ ಎಂದಿರುವ ಎಡಪಕ್ಷಗಳು ತಮ್ಮ ಬೆಂಬಲವನ್ನು ಹಿಂತೆಗೆದುಕೊಂಡಿವೆ. ಕಾಂಗ್ರೆಸ್ ವಿದೇಶಾಂಗ ನೀತಿಗಳಲ್ಲೂ, ಆಂತರಿಕ ನೀತಿಗಳಲ್ಲೂ ಇನ್ನಷ್ಟು ಬಲಪಂಥೀಯ ಮಾರ್ಗದತ್ತ ತಿರುಗುವ ದೃಢ ನಿರ್ಧಾರ ಮಾಡಿದಂತಿದೆ. ಉದ್ದೇಶಪೂರ್ವಕವಾಗಿ ಸಾಮಾನ್ಯ ಕನಿಷ್ಟ ಕಾರ್ಯಕ್ರಮವನ್ನು ಕಡೆಗಣಿಸುತ್ತಿರುವುದ ರಿಂದ ಇಂತಹ ಒಂದು ಜನ-ವಿರೋಧಿ ಸರಕಾರಕ್ಕೆ ನೀಡಿರುವ ಬೆಂಬಲವನ್ನು ಹಿಂತೆಗೆದುಕೊಳ್ಳಲು ನಿರ್ಧರಿಸಲಾಗಿದೆ ಎಂದು ಎಡಪಕ್ಷಗಳು ಸ್ಪಷ್ಟಪಡಿಸಿವೆ. ಹಾಗೆಯೇ ಅಪಪ್ರಚಾರಗಳಿಗೆ ಉತ್ತರವೂ ಇಲ್ಲಿ.

ಅಮೆರಿಕಾದ ಅಡಿಯಾಳಾಗಲು ಕಾತರ ಬೆಂಬಲ ಕಳಕೊಂಡ ಸರ್ಕಾರ

ಎಡಪಕ್ಷಗಳು ಯುಪಿಎ ಸರಕಾರಕ್ಕೆ ನೀಡಿರುವ ಬೆಂಬಲವನ್ನು ಹಿಂತೆಗೆದು ಕೊಂಡಿವೆ. ಯುಪಿಎ ಸರಕಾರ 2004 ರಲ್ಲಿ ಒಂದು ಸಾಮಾನ್ಯ ಕನಿಷ್ಟ ಕಾರ್ಯಕ್ರಮದ ಆಧಾರದಲ್ಲಿ ಎಡಪಕ್ಷಗಳ ಬೆಂಬಲ ದೊಂದಿಗೆ ಅಸ್ತಿತ್ವಕ್ಕೆ ಬಂತು. ಅದರ ಉದ್ದೇಶ ಕೋಮುವಾದಿ ಶಕ್ತಿಗಳ ವಿರುದ್ಧ ಹೋರಾಡುವುದು ಮತ್ತು ಅವರು ಅಧಿಕಾರದಲ್ಲಿದ್ದಾಗ ದೇಶದ ಜಾತ್ಯಾತೀತ ರಾಜಕೀಯ ವ್ಯವಸ್ಥೆಗೆ ಉಂಟು ಮಾಡಿದ ಹಾನಿಯನ್ನು ಸರಿಪಡಿಸುವುದು. ಇದಕ್ಕೆ ಜನಗಳಿಗೆ ಪರಿಹಾರ ಒದಗಿಸುವ, ಭಾರತದ ಸಮಗ್ರತೆಯನ್ನು ರಕ್ಷಿಸುವ ಮತ್ತು ಸ್ವತಂತ್ರ ವಿದೇಶಾಂಗ ನೀತಿಯನ್ನು ಅನುಸರಿಸುವ ಒಂದು ಪರಸ್ಪರ ಹೆಣೆದುಕೊಂಡ ಸಮಗ್ರ ನೀತಿಗಳ ಆವಶ್ಯಕತೆಯಿತ್ತು. ನಾಗಾಲೋಟ ಹೂಡಿರುವ ಹಣದುಬ್ಬರ ಮತ್ತು ಕಿತ್ತು ತಿನ್ನುವ ಬೆಲೆಯೇರಿಕೆಯ ಹೊರೆಯಿರುವಾಗ ಮನಮೋಹನ ಸಿಂಗ್ ಸರಕಾರ ಈ ಪರಮಾಣು ವ್ಯವಹಾರದಲ್ಲಿ ಮುಂದುವರೆದು ತಮಗೆ ಬುಶ್ ಆಡಳಿತಕ್ಕೆ ನೀಡಿದ ವಚನವನ್ನು ಈಡೇರಿಸುವುದೇ ಮುಖ್ಯವೇ ಹೊರತು ಭಾರತದ ಜನತೆಗೆ ನೀಡಿದ ವಚನವನ್ನು ಈಡೇರಿಸುವುದಲ್ಲ ಎಂದು ಸ್ಪಷ್ಟವಾಗಿ ತೋರಿಸಿಕೊಟ್ಟಿದೆ. ಈ ಹಿನ್ನೆಲೆಯಲ್ಲಿ ಎಡಪಕ್ಷಗಳು ಈ ಸರಕಾರಕ್ಕೆ ನಾಲ್ಕು ವರ್ಷಗಳ ಹಿಂದೆ ನೀಡಿರುವ ಬೆಂಬಲವನ್ನು ಹಿಂತೆಗೆದುಕೊಂಡಿವೆ.


ಸಾಮಾನ್ಯ ಕನಿಷ್ಟ ಕಾರ್ಯಕ್ರಮದಲ್ಲಿ ಅಮೆರಿಕಾದೊಂದಿಗೆ ಸಾಮರಿಕ ಮೈತ್ರಿಯ ಅಂಶವೇ ಇಲ್ಲ. ಆದ್ದರಿಂದ ಮನಮೋಹನ್ ಸಿಂಗ್ ಸರಕಾರ ಸಾಮಾನ್ಯ ಕನಿಷ್ಟ ಕಾರ್ಯಕ್ರಮವನ್ನು ಸಂಪೂರ್ಣವಾಗಿ ಉಲ್ಲಂಘಿಸುವ ತಪ್ಪು ಮಾಡಿದೆ ಎಂದಿರುವ ಎಡಪಕ್ಷಗಳು ಜನಗಳಿಗೆ ಮತ್ತು ದೇಶದ ಸಾರ್ವಭೌಮತೆಗೆ ಹಾನಿಕಾರಕವಾದ ಇಂತಹ ಒಂದು ದಾರಿಯನ್ನು ಬೆಂಬಲಿಸುವುದು ಎಡಪಕ್ಷಗಳಿಗೆ ಸಾಧ್ಯವಿಲ್ಲ ಎಂದಿವೆ.

ವಿಶ್ವಾಸ ದ್ರೋಹಗಳ ಸರಣಿ

ಮೊದಲನೆಯದಾಗಿ, ಕಾಂಗ್ರೆಸ್ ಸರಕಾರ ನವಂಬರ್ 2007ರಲ್ಲಿ ಎಡಪಕ್ಷಗಳೊಂದಿಗೆ ಒಂದು ತಿಳುವಳಿಕೆಗೆ ಬಂದಿತ್ತು. ಕಾಂಗ್ರೆಸ್ ಮುಖಂಡತ್ವ ಐಎಇಎ ಯ ಕಾರ್ಯದರ್ಶಿ ಮಂಡಳಿಯೊಂದಿಗೆ ಮಾತುಕತೆಯ ಫಲಿತಾಂಶವನ್ನು ಪರಮಾಣು ವ್ಯವಹಾರ ಕುರಿತಾದ ಯುಪಿಎ-ಎಡಪಕ್ಷಗಳ ಸಮಿತಿಯ ಮುಂದೆ ಮಂಡಿಸಲಾಗುವುದು ಎಂದು ಮಾತು ಕೊಟ್ಟಿತ್ತು. ಅದನ್ನು ಮುರಿಯಿತು.

ಎರಡನೆಯದಾಗಿ, ಈ ಒಪ್ಪಂದದಲ್ಲಿ ಮುಂದಿನ ಕ್ರಮ ಕೈಗೊಳ್ಳುವ ಮೊದಲು ಸರಕಾರ ಈ ಸಮಿತಿಯ ಅಭಿಪ್ರಾಯವನ್ನು ಗಮನಕ್ಕೆ ತೆಗೆದುಕೊಳ್ಳುತ್ತದೆ ಎಂಬ ವಚನವನ್ನೂ ನೀಡಲಾಗಿತ್ತು. ಅದನ್ನೂ ಪಾಲಿಸಲಿಲ್ಲ. ಯುಪಿಎ-ಎಡಪಕ್ಷಗಳ ಸಮಿತಿಯನ್ನು ರಚಿಸಿದ ಉದ್ದೇಶ ಆರಂಭದಲ್ಲಿ ಸರಕಾರ ಮುಂದಿನ ಕ್ರಮ ಕೈಗೊಳ್ಳುವ ಮೊದಲು 123 ಒಪ್ಪಂದ, ವಿದೇಶಾಂಗ ನೀತಿ ಮತ್ತು ದೇಶದ ಭದ್ರತೆಗೆ ಸಂಬಂಧಪಟ್ಟ ವಿಷಯಗಳ ಮೇಲೆ ಹೈಡ್ ಆಕ್ಟ್‌ನ ಪ್ರಭಾವಗಳೇನು ಎಂದು ಕಂಡುಕೊಳ್ಳುವುದು. ನಂತರ ನವಂಬರ್ 2007 ರಲ್ಲಿ ಐಎಇಎ ಸುರಕ್ಷಣಾ ಒಪ್ಪಂದದ ಪರೀಕ್ಷಣೆಯೂ ಸಮಿತಿಯ ಕೆಲಸವಾಗಿ ಸೇರಿಸಲ್ಪಟ್ಟಿತು.

ಸಮಿತಿ ಸುರಕ್ಷಣಾ ಒಪ್ಪಂದದ ಪಠ್ಯವನ್ನು ಗಂಭೀರವಾಗಿ ಅಧ್ಯಯನ ಮಾಡಲು, ಒಟ್ಟು ಅಭಿಪ್ರಾಯಕ್ಕೆ ಬರಲು ಸಮಯ ಬೇಕಾಗುತ್ತಿತ್ತು. ಆದರೆ ಪ್ರಧಾನ ಮಂತ್ರಿಗಳು ಐಎಇಎ ಆಡಳಿತ ಮಂಡಳಿಯ ಮಂಜೂರಾತಿಯನ್ನು ಆದಷ್ಟು ಬೇಗನೇ ಪಡೆಯುವ ತರಾತುರಿಯಲ್ಲಿದ್ದರು. ಏಕೆಂದರೆ ಅದರ ನಂತರವೇ ಅಮೆರಿಕಾ ಪರಮಾಣು ಪೂರೈಕೆದಾರರ ಗುಂಪಿಗೆ(ಎನ್‌ಎಸ್‌ಜಿ) ಅದನ್ನು ಒಯ್ಯಲು ಸಾಧ್ಯ. ಇದು ಅವರ ಪ್ರಕಾರ ಅಲ್ಲಿ ಅಧ್ಯಕ್ಷೀಯ ಚುನಾವಣೆಗಳು ನಡೆಯುವ ಮೊದಲೇ ಅಂದರೆ ನವಂಬರ್ ಮೊದಲೇ ಆಗಬೇಕಿತ್ತು. ಆದ್ದರಿಂದಲೇ ಒಪ್ಪಂದದ ಪಠ್ಯವನ್ನು ಸಮಿತಿಗೆ ಕೊಡದೆ ಅದರ ಕಲಾಪಗಳನ್ನು ಮುಗಿಸುವ ಹುನ್ನಾರ ನಡೆಸಲಾಯಿತು.



ಸುರಕ್ಷಣಾ ಒಪ್ಪಂದದ ಪಠ್ಯವನ್ನು ಸಮಿತಿಯ ಅಧ್ಯಯನಕ್ಕೆ ಕೊಡಲಿಲ್ಲ. ಆದ್ದರಿಂದ ಸಮಿತಿ ಏನನ್ನೂ ಹೇಳಲಾರದಾಯಿತು, ಹೀಗೆ ಸರಕಾರ ಮುಂದುವರೆಯಲು ಆಧಾರವೇ ಇರಲಿಲ್ಲ. ಆದರೂ ಜಿ-8 ಶೃಂಗಸಭೆಗೆ ಹೊರಟಿದ್ದ ಪ್ರಧಾನ ಮಂತ್ರಿಗಳು ಜಪಾನಿನಲ್ಲಿ ಅಧ್ಯಕ್ಷ ಬುಶ್‌ರವರನ್ನು ಭೇಟಿಯಾಗುವ ಮೊದಲು ಸರಕಾರ ಬೇಗನೇ ಐಎಇಎ ಆಡಳಿತಗಾರರ ಮಂಡಳಿಗೆ ಹೋಗುತ್ತದೆ ಎಂದು ಹೇಳಿದರು. ಆದರೆ ಈ ಬಗ್ಗೆ ಎಡಪಕ್ಷಗಳಿಗೆ ಮತ್ತು ಜನತೆಗೆ ಏನನ್ನೂ ತಿಳಿಸಲಿಲ್ಲ. ಅಧ್ಯಕ್ಷ ಬುಶ್‌ರವರಿಗೆ ನೀಡಿದ ವಚನವನ್ನು ಪಾಲಿಸುವುದಕ್ಕಷ್ಟೇ ಆದ್ಯತೆ ನೀಡುವವರು ನಮ್ಮ ಪ್ರಧಾನ ಮಂತ್ರಿಗಳು ಎಂದು ಇಡೀ ದೇಶಕ್ಕೆ ಸ್ಪಷ್ಟವಾಯಿತು. ಜನಗಳು ಮತ್ತು ದೇಶ ಎದುರಿಸುತ್ತಿರುವ ಸಮಸ್ಯೆಗಳನ್ನು ಆಮೇಲೆ ನೋಡಿದರಾಯಿತು ಎಂಬ ಮನೋಭಾವ.

ಎಡಪಕ್ಷಗಳು ಕಾಂಗ್ರೆಸ್ ನೇತೃತ್ವದ ಸರಕಾರಕ್ಕೆ ಬೆಂಬಲ ನೀಡಿದ್ದು ಬಿಜೆಪಿ ನೇತೃತ್ವದ ಸರಕಾರದ ಅಮೆರಿಕಾ-ಪರ ನಿಲುವಿಗೆ ತದ್ವಿರುದ್ಧವಾಗಿ ಒಂದು ಸ್ವತಂತ್ರ ವಿದೇಶಾಂಗ ನೀತಿಯನ್ನು ಅನುಸರಿಸುತ್ತದೆ ಎಂಬ ವಚನದ ಆಧಾರದಲ್ಲಿ. ಈ ವಚನವನ್ನು ಈಗ ಭಂಗ ಮಾಡಲಾಗಿದೆ. ಆದ್ದರಿಂದ ಸರಕಾರದಿಂದ ಎಡಪಕ್ಷಗಳು ದೂರ ಸರಿಯಲೇಬೇಕಾಗಿದೆ

'ಆಮ್ ಆದ್ಮಿ'ಯ ನೆನಪಿಲ್ಲ

ಕಾಂಗ್ರೆಸ್ ಮುಖಂಡತ್ವ 'ಆಮ್ ಆದ್ಮಿ'ಯ ಅಂದರೆ ಜನಸಮಾನ್ಯರ ಪರಿಸ್ಥಿತಿಗಳನ್ನು ಉತ್ತಮ ಪಡಿಸುವ ಭರವಸೆ ನೀಡಿತ್ತು. ಆದರೆ ಯುಪಿಎ ಸರಕಾರದ ನಾಲ್ಕು ವರ್ಷಗಳ ನಂತರ ಜನಗಳು ಒಂದು ಅಭೂತಪೂರ್ವ ಬೆಲೆಯೇರಿಕೆಯಿಂದ ನರಳುತ್ತಿದ್ದಾರೆ. ಅಕ್ಕಿ, ಗೋಧಿ, ಅಡುಗೆ ಎಣ್ಣೆ

ದೇಶದ ಪ್ರಸಿದ್ಧ ವಿಜ್ಞಾನಿಗಳೂ ಮಾಜಿ ರಾಷ್ಟ್ರಪತಿಗಳೂ ಆದ ಅಬ್ದುಲ್ ಕಲಾಂ ಅಣು ಒಪ್ಪಂದ ದೇಶಕ್ಕೆ ಹಿತಕರವಾದುದು ಎನ್ನುತ್ತಿದ್ದಾರಲ್ಲ?


ಅಬ್ದುಲ್ ಕಲಾಂ ಅಣು ವಿಜ್ಞಾನಿಯಲ್ಲ. ಒಬ್ಬ ಕ್ಷಿಪಣಿ ವಿಜ್ಞಾನಿ. ದೇಶದ ಅನೇಕ ಅಣು ವಿಜ್ಞಾನಿಗಳು ಈ ಒಪ್ಪಂದವನ್ನು ಪರಿಶೀಲಿಸಿ ತೀವ್ರವಾಗಿ ಟೀಕಿಸಿದ್ದಾರೆ. ಬಾಬಾ ಅಣು ವಿಜ್ಞಾನ ಸಂಶೋಧನಾ ಕೇಂದ್ರದ ಮಾಜಿ ನಿರ್ದೇಶಕರಾದ ಪಿ.ಕೆ.ಅಯ್ಯಂಗಾರ್, ಅಣುಶಕ್ತಿ ಮಂಡಳಿಯ ಮಾಜಿ ಅಧ್ಯಕ್ಷರೂ, ಅಣು ವಿಷಯ ತಜ್ಞರುಗಳಾದ ಗೋಪಾಲಕೃಷ್ಣನ್, ಡಾ: ಎ.ಎನ್. ಪ್ರಸಾದ್‌ರವರು 123 ಒಪ್ಪಂದ ಹಾಗೂ ಐಎಇಎ ಒಪ್ಪಂದಗಳನ್ನೂ ಕೂಲಂಕುಶ ಪರೀಕ್ಷೆಗೆ ಒಳಪಡಿಸಿ ಅವುಗಳನ್ನು ಭಾರತ ತಿರಸ್ಕರಿಸಬೇಕು ಎಂದು ಘೋಷಿಸಿದ್ದಾರೆ. ಪ್ರಧಾನಿಗೆ ಪತ್ರ ಬರೆದಿದ್ದಾರೆ. ಹೃದಯದ ವಿಷಯದಲ್ಲಿ ಮೂತ್ರಪಿಂಡ ತಜ್ಞರುಗಳ ಮಾತಿಗೆಷ್ಟು ಬೆಲೆಯಿದೆಯೋ ಕಲಾಂ ಮಾತಿಗೂ ಅಷ್ಟೆ ಬೆಲೆ. ಕಲಾಂರವರು ಕೂಡ ಆರಂಭದ ಹಲವಾರು ತಿಂಗಳು ಮೌನವಾಗಿಯೇ ಇದ್ದರು ಎಂಬುದನ್ನೂ ಗಮನಿಸಬೇಕು. ಇನ್ನು ಕಲಾಂರವರು ಈ ವಿಷಯದಲ್ಲಿ ಏಕೆ ತಲೆ ಹಾಕಬೇಕು. ಸಾಮಾನ್ಯವಾಗಿ ವಿಜ್ಞಾನಿಗಳು ತಮ್ಮ ಕ್ಷೇತ್ರವಲ್ಲದ ವಿಷಯದಲ್ಲಿ ತಲೆ ಹಾಕುವುದಿಲ್ಲ. ಆದರೆ ಕಲಾಂರವರು ಹೀಗೆ ಮಾಡುವುದಕ್ಕೆ ಕಾರಣವಿಷ್ಟೇ. 1974ರ ಪೋಖ್ರಾನ್ ಸ್ಫೋಟದ ನಂತರ ಅಮೇರಿಕಾದ ನಿಷೇಧಕ್ಕೊಳಗಾದ ತಂತ್ರಜ್ಞಾನಗಳಲ್ಲಿ ಅನೇಕ ಕ್ಷಿಪಣಿ ತಂತ್ರಜ್ಞಾನ, ಇತರ ಮಿಲಿಟರಿ ತಂತ್ರಜ್ಞಾನಗಳೂ ಸೇರಿವೆ. ಈ ನಿಷೇಧ ಭಾರತದ ಕ್ಷಿಪಣಿ, ಉಪಗ್ರಹ ಹಾಗೂ ಮಿಲಿಟರಿ ಮುನ್ನಡೆಯನ್ನೂ ವಿಳಂಬಗೊಳಿಸಿದರು ಕೂಡ ಮುಂದೆ ಸಂಶೋಧನೆಗಳ ನೆರವಿನಿಂದ ಸ್ವತಂತ್ರ ಸಾಮರ್ಥ್ಯವನ್ನೂ ಗಳಿಸಿಕೊಳ್ಳಲು ನೆರವಾಯಿತು.

ಈಗ ಮತ್ತೆ ಆ ನಿಷೇಧಿತ ತಂತ್ರಜ್ಞಾನಗಳನ್ನು ಅಮೇರಿಕಾ ಭಾರತಕ್ಕೆ ನೀಡುವುದೆಂಬ ಭ್ರಮೆ ಕಲಾಂರದ್ದು. ಆದರೆ ಅಮೇರಿಕಾದ ತಂತ್ರಜ್ಞಾನ ಸ್ವಾಮ್ಯವನ್ನು ಅಷ್ಟೊಂದು ಸುಲಭವಾಗಿ ಭಾರತಕ್ಕೆ ಕೊಡುವುದೇ ಎಂಬುದು ವಿಶ್ವದೆಲ್ಲಾ ತಂತ್ರಜ್ಞರಿಗೆ ಚೆನ್ನಾಗಿ ಅನುಭವಕ್ಕೆ ಬಂದಿರುವ ವಿಷಯ.

ಇನ್ನೊಂದು ವಿಷಯವೆಂದರೆ ಕಲಾಂ ಈ ಒಪ್ಪಂದದ ಬಗ್ಗೆ ಬಂದಿರುವ ಯಾವುದೇ ಆಕ್ಷೇಪಣೆಗೂ ಉತ್ತರ ನೀಡಿಲ್ಲ. ಯಾವುದೇ ವಿವರವನ್ನೂ ಚರ್ಚಿಸಿಲ್ಲ. ಕೇವಲ ತೀರ್ಮಾನವನ್ನು ಮಾತ್ರ ಕೊಟ್ಟಿದ್ದಾರೆ. ಇದು ಒಬ್ಬ ವಿಜ್ಞಾನಿಗೆ ತಕ್ಕದಲ್ಲದ ನಡವಳಿಕೆ.

ಅಬ್ದುಲ್ ಕಲಾಂ ಕೆಲವು ತಿಂಗಳುಗಳ ಹಿಂದೆ ಈ ಮಾತನ್ನಾಡಿದಾಗ ಅದಕ್ಕೆ ಯಾರೂ ಹೆಚ್ಚು ಬೆಲೆ ಕೊಡಲಿಲ್ಲ. ಆದರೆ ಇತ್ತೀಚೆಗೆ ಸಮಾಜವಾದಿ ಪಕ್ಷ ಅವರನ್ನು ಭೇಟಿ ಮಾಡಿ ಅವರನ್ನೂ ಅಣು ಒಪ್ಪಂದದ ವಿಷಯದಲ್ಲಿ ತಮ್ಮ ತಿಪ್ಪರಲಾಗಕ್ಕೆ ಬಳಸಿಕೊಂಡಾಗ ಅದಕ್ಕೆ ಹೆಚ್ಚು ಪ್ರಚಾರ ಸಿಕ್ಕಿತು.

– ಜಿ.ಎನ್.ನಾಗರಾಜ್



ಬೇಳೆ, ತರಕಾರಿಗಳು ಮತ್ತು ಇತರ ಅಗತ್ಯ ಸಾಮಗ್ರಿಗಳ ಬೆಲೆಗಳೆಲ್ಲಾ ಗಗನಕ್ಕೇರಿವೆ. ಉದಾಹರಣೆಗೆ, 2004 ಮತ್ತು 2008ರ ನಡುವೆ ಅಕ್ಕಿಯ ಚಿಲ್ಲರೆ ಬೆಲೆ 46 ಶೇಕಡಾ, ಗೋದಿಯ ಬೆಲೆ 62 ಶೇಕಡಾ, ಸಾಸವೆ ಎಣ್ಣೆ 42 ಶೇಕಡಾ, ಕಡಲೇ ಬೇಳೆ 47 ಶೇಕಡಾ ಮತ್ತು ಉಪ್ಪು ಕೂಡಾ 42 ಶೇಕಡಾದಷ್ಟು ಏರಿವೆ. ಸರಕಾರ ಪಟ್ರೋಲ್ ಮತ್ತು ಡೀಸೆಲ್ ಬೆಲೆಗಳನ್ನು ಕಳೆದ ನಾಲ್ಕು ವರ್ಷಗಳಲ್ಲಿ ಏಳು ಬಾರಿ ಹೆಚ್ಚಿಸಿದೆ. ಪೆಟ್ರೋಲ್ ಬೆಲೆ 2004ರಿಂದ 2008ರ ನಡುವೆ 50 ಶೇಕಡಾದಷ್ಟು, ಡೀಸೆಲ್ 60ಶೇಕಡಾ ಮತ್ತು ಅಡುಗೆ ಅನಿಲ 58 ಶೇಕಡಾದಷ್ಟು ಏರಿವೆ.

ಎಡಪಕ್ಷಗಳು ಸರಕಾರದ ಮುಂದೆ ಈ ಎಲ್ಲಾ ಬೇಡಿಕೆಗಳನ್ನು ಇಟ್ಟಿದ್ದವು:

1. ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಸಾರ್ವತ್ರಿಕಗೊಳಿಸಿ ಪ್ರತಿಯೊಬ್ಬರಿಗೂ ರೇಷನ್ ಕಾರ್ಡ್ ಸಿಗುವಂತೆ ಮಾಡಬೇಕು.
2. ಆವಶ್ಯಕ ಸರಕುಗಳಲ್ಲಿ ಮುಂಗಡ ವ್ಯಾಪಾರ ನಿಲ್ಲಿಸಬೇಕು
3. ಕಳ್ಳದಾಸ್ತಾನು ಮತ್ತು ಸಟ್ಟಾಕೋರತನವನ್ನು ಮಟ್ಟ ಹಾಕಬೇಕು.
4. ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ತೆರಿಗೆ ಹೊರೆಯನ್ನು ಇಳಿಸಬೇಕು.
5. ಖಾಸಗೀ ತೈಲ ಶುದ್ಧೀಕರಣಾ ಗಾರಗಳ ಆಕಸ್ಮಿಕ ಲಾಭಗಳ ಮೇಲೆ ತೆರಿಗೆ ಹೇರಬೇಕು.

ಆದರೆ ಸರಕಾರ ಈ ಕ್ರಮಗಳನ್ನು ಕೈಗೊಳ್ಳಲು ನಿರಾಕರಿಸಿತು. ನವ-ಉದಾರವಾದಿ ಅಜೆಂಡಾವನ್ನು ಅನುಸರಿಸುತ್ತಾ ಕಾಂಗ್ರೆಸ್ ನೇತೃತ್ವದ ಸರಕಾರ ಹಿಂದಿನ ಬಿಜೆಪಿ ಸರಕಾರದ ನೀತಿಗಳನ್ನೇ ಪಾಲಿಸುತ್ತಿದೆ. ಈ ನೀತಿಗಳೇ ಕೃಷಿ ಬಿಕ್ಕಟ್ಟು, ರೈತರ ಆತ್ಮಹತ್ಯೆ, ಸಾಮೂಹಿಕ ಬಡತನ, ಬೆಲೆಯೇರಿಕೆ ಮತ್ತು ನಿರುದ್ಯೋಗದ ಸಂಕಟಮಯ ಪರಿಸ್ಥಿತಿಗೆ ಕಾರಣ. ಇದಕ್ಕೆ ಪ್ರತಿಯಾಗಿ ಶತಕೋಟ್ಯಾಧಿಪತಿಗಳು ಮತ್ತು ಸೂಪರ್ ಶ್ರೀಮಂತರ ಸಂಖ್ಯೆಯಲ್ಲಿ ಹೆಚ್ಚಳದ ಹೊಲಸು ದೃಶ್ಯ ಕಣ್ಣಿಗೆ ರಾಚುತ್ತಿದೆ. ಕಾಂಗ್ರೆಸ್ ವಿದೇಶಾಂಗ ನೀತಿಗಳಲ್ಲೂ, ಆಂತರಿಕ ನೀತಿಗಳಲ್ಲೂ ಇನ್ನಷ್ಟು ಬಲಪಂಥೀಯ ಮಾರ್ಗದತ್ತ ತಿರುಗುವ ದೃಢ ನಿರ್ಧಾರ ಮಾಡಿದಂತಿದೆ. ಈ ಸನ್ನಿವೇಶ ಕೋಮುವಾದಿ ಶಕ್ತಿಗಳಿಗೆ ಫಲವತ್ತಾದ ಭೂಮಿ ಒದಗಿಸುತ್ತಿದೆ ಎಂಬುದು ಎಡಪಕ್ಷಗಳ ಆತಂಕ.

ಕಾಂಗ್ರೆಸ್ ನೇತೃತ್ವದ ಸರಕಾರ ಉದ್ದೇಶಪೂರ್ವಕವಾಗಿ ಸಾಮಾನ್ಯ ಕನಿಷ್ಠ ಕಾರ್ಯಕ್ರಮವನ್ನು ಕಡೆಗಣಿಸುತ್ತಿರುವುದರಿಂದ ಇಂತಹ ಒಂದು ಜನ-ವಿರೋಧಿ ಸರಕಾರಕ್ಕೆ ನೀಡಿರುವ ಬೆಂಬಲವನ್ನು ಹಿಂತೆಗೆದುಕೊಳ್ಳಲು ನಿರ್ಧರಿಸಲಾಗಿದೆ ಎಂದು ಎಡಪಕ್ಷಗಳು ಸ್ಪಷ್ಟಪಡಿಸಿವೆ. ಇದರೊಂದಿಗೆ ಯುಪಿಎ ಸರಕಾರ ಬಹುಮತವನ್ನು ಮತ್ತು ಯುಕ್ತತೆಯನ್ನು ಕಳಕೊಂಡಿದೆ. ಪ್ರಧಾನ ಮಂತ್ರಿಗಳು ಲೋಕಸಭೆಯನ್ನು ಎದುರಿಸಬೇಕು ಮತ್ತು ವಿಶ್ವಾಸಮತವನ್ನು ಪಡೆಯಬೇಕು ಎಂದು ಎಡಪಕ್ಷಗಳು ಆಗ್ರಹಿಸಿವೆ.

ಪ್ರಧಾನ ಮಂತ್ರಿಗಳ ಬಳಿ ಉತ್ತರವಿದೆಯೇ?

ಜುಲೈ 8ರಂದು ಪತ್ರಿಕಾಸಮ್ಮೇಳನ ಕರೆದ ವಿದೇಶಾಂಗ ವ್ಯವಹಾರಗಳ ಮಂತ್ರಿ ಶ್ರೀ ಪ್ರಣಬ್ ಮುಖರ್ಜಿಯವರು ಸಂಸತ್ತಿನಲ್ಲಿ ವಿಶ್ವಾಸಮತ ಗೆದ್ದರೆ ಮಾತ್ರವೇ ಸರಕಾರ ಭಾರತದ ಸುರಕ್ಷಣಾ ಒಪ್ಪಂದವನ್ನು ಅಂತರ್‍ರಾಷ್ಟ್ರೀಯ ಅಣುಶಕ್ತಿ ಏಜೆನ್ಸಿಯ ಮಂಡಳಿಗೆ ಕಳಿಸುತ್ತದೆ ಎಂದರು. 'ನಾವು ಬಹುಮತ ಕಳಕೊಂಡರೆ ಸರಕಾರವನ್ನು ಬದ್ಧಗೊಳಿಸುವುದು ನನಗೆ ಸಾಧ್ಯವಿಲ್ಲ' ಎಂದು ಅವರು ಹೇಳಿದರು. ಈ ಬಗ್ಗೆ ಆಗ ಜಪಾನಿನಲ್ಲಿ ಇದ್ದ ಪ್ರಧಾನ ಮಂತ್ರಿಗಳೊಡನೆ ಸಮಾಲೋಚನೆ ನಡೆಸಿದ್ದೇನೆ ಎಂದೂ ಅವರು ಹೇಳಿದರು.

ಎಡಪಕ್ಷಗಳು ಸರಕಾರಕ್ಕೆ ನೀಡಿದ್ದ ಬೆಂಬಲವನ್ನು ಹಿಂತೆಗೆದುಕೊಳ್ಳುವ ನಿರ್ಧಾರವನ್ನು ಪ್ರಕಟಿಸಿದ ಕೆಲವು ಗಂಟೆಗಳ ನಂತರ ಬಂದ ಈ ಹೇಳಿಕೆ ಸರಕಾರ ಸಂಸತ್ತಿನಲ್ಲಿ ತನ್ನ ಬಹುಮತವನ್ನು ಸಿದ್ಧಪಡಿಸುವ ಮೊದಲು ಐಎಇಎ ಆಡಳಿತಗಾರರ ಮಂಡಳಿಯ ಬಳಿ ಹೋಗುವುದಿಲ್ಲ ಎಂಬ ಒಂದು ಗಂಭೀರ ವಚನವಾಗಿತ್ತು. ಆದರೆ ಇಪ್ಪತ್ತ ನಾಲ್ಕು ಗಂಟೆಗಳ ಒಳಗೆ ಭಾರತ ಸರಕಾರದ ಕೇಳಿಕೆಯ ಮೇರೆಗೆ ಒಪ್ಪಂದದ ಪಠ್ಯವನ್ನು ಮಂಡಳಿಯ ಪರಿಶೀಲನೆಗೆ ಸಲ್ಲಿಸಲಾಗಿದೆ ಎಂದು ಐಎಇಎ ಪ್ರಕಟಿಸಿತು.

ಇದು ಸರಕಾರ ನೀಡಿದ ಭರವಸೆಯ ಒಂದು ನಗ್ನ ಉಲ್ಲಂಘನೆ, ದೇಶಕ್ಕೆ ನೀಡಿದ ಒಂದು ನೈತಿಕ ವಚನದಲ್ಲಿ ಬೆಗೆದಿರುವ ವಿಶ್ವಾಸದ್ರೋಹ. ಅಧ್ಯಕ್ಷ ಬುಶ್‌ರೊಂದಿಗೆ ನಡೆದ ಪ್ರಧಾನ ಮಂತ್ರಿಗಳ ಭೇಟಿಯಲ್ಲಿ ಈ ಸಾರ್ವಜನಿಕ ಪ್ರತಿಜ್ಞೆಯನ್ನು ಮುರಿಯುವಂತಹದ್ದೇನು ನಡೆಯಿತು? ಈ ಬಗ್ಗೆ ಪ್ರಧಾನ ಮಂತ್ರಿಗಳು ಜನತೆಗೆ ಮತ್ತು ದೇಶಕ್ಕೆ ಉತ್ತರ ಕೊಡಬೇಕಾಗಿದೆ ಎಂದು ಎಡಪಕ್ಷಗಳು ಹೇಳಿವೆ.

ಒಪ್ಪಂದದ ಪಠ್ಯವನ್ನು ಗೋಪ್ಯವಾಗಿಟ್ಟಿರುವುದು ಭಾರತ ಸರಕಾರವೇ ಹೊರತು, ಐಎಇಎ ಅಲ್ಲ ಎಂದು ಎಡಪಕ್ಷಗಳು ಜುಲೈ 8, 2008 ರಂದು ಹೇಳಿದ್ದವು. ಇದನ್ನು ಕಳೆದ ಇಪ್ಪತ್ತನಾಲ್ಕು ಗಂಟೆಗಳಲ್ಲಿ ಐಎಇಎ ವಕ್ತಾರರು ದೃಢಪಡಿಸಿದ್ದಾರೆ.

ಗೋಪ್ಯತೆಯ ಸೋಗೇಕೆ?


ಕೃಪೆ: ಪ್ರಜಾವಾಣಿ

123 ಒಪ್ಪಂದದಲ್ಲಿ ಪಡೆಯಲಾಗದ ಅಬಾಧಿತ ಇಂಧನ ಪೂರೈಕೆ ಮತ್ತು ಇತರ ಸರಿಪಡಿಕೆ ಕ್ರಮಗಳಿಗೆ ಅವಕಾಶ ಮಾಡಿಕೊಳ್ಳಲು ಐಎಇಎ ಯೊಂದಿಗೆ ಸುರಕ್ಷಣಾ ಒಪ್ಪಂದದ ಮಾತುಕತೆ ನಡೆಸಬೇಕಾಗುತ್ತದೆ ಎಂದು ಯುಪಿಎ-ಎಡಪಕ್ಷಗಳ ಸಮಿತಿಯಲ್ಲಿ ಸರಕಾರ ಹೇಳಿತು. ಈ ನ್ಯೂನ್ಯತೆಯನ್ನು ಐಎಇಎ ಪರಿಹರಿಸಲು ಸಾಧ್ಯವೇ ಎಂದು ಎಡಪಕ್ಷಗಳಿಗೆ ಸಂದೇಹವಿತ್ತು.

ಯುಪಿಎ ಮಾತುಕತೆಗಳ ಮೂಲಕ ರೂಪಿಸಿದ ಈ ಒಪ್ಪಂದದ ಪಠ್ಯವನ್ನು ನಾಲ್ಕು ತಿಂಗಳುಗಳ ಕಾಲ ತೋರಿಸಲು ನಿರಾಕರಿಸಿ ಈಗ ಐಎಇಎ ಆಡಳಿತ ಮಂಡಳಿಗೆ ಸಲ್ಲಿಸಿದ ಮೇಲೆ ಅದನ್ನು ಸಾರ್ವಜನಿಕಗೊಳಿಸಿದೆ. ಏಕೆ ಇದುವರೆಗೆ ಅದನ್ನು ಜನರಿಂದ ಅಡಗಿಸಿಟ್ಟಿತ್ತು ಎಂಬುದು ಈಗ ಸ್ಪಷ್ಟವಾಗಿದೆ. ಭಾರತ ಈ ಮೂಲಕ, ಅಬಾಧಿತ ಇಂಧನ ಪೂರೈಕೆ ಕುರಿತಂತೆ, ಇಂಧನ ಪೂರೈಕೆ ನಿಲ್ಲಿಸಲ್ಪಟ್ಟರೆ ಸರಿಪಡಿಕೆ ಕ್ರಮಗಳನ್ನು ಕೈಗೊಳ್ಳುವ ಹಕ್ಕನ್ನು ಕುರಿತಂತೆ ಯಾವುದೇ ನಿರ್ದಿಷ್ಟ ಭರವಸೆಗಳನ್ನು ಪಡೆಯದೆಯೇ ತನ್ನ ಸಮಸ್ತ ನಾಗರಿಕ ಪರಮಾಣು ಶಕ್ತಿ ಕಾರ್ಯಕ್ರಮವನ್ನು ಶಾಶ್ವತವಾಗಿ ಐಎಇಎ ಯ ಸುರಕ್ಷಣಾ ಶರತ್ತುಗಳಿಗೆ

ಪುಟ 12ಕ್ಕೆ

ಕಾಂಗ್ರೆಸ್‌ನ ಕೆಲವು ಅಪಪ್ರಚಾರಗಳು

ಚೀನಾ ಕೂಡ 123 ಒಪ್ಪಂದ ಮಾಡಿಕೊಂಡಿದೆ ಭಾರತ ಏಕೆ ಮಾಡಿಕೊಳ್ಳಬಾರದು?

ಅಣು ಒಪ್ಪಂದದ ವಿಷಯದಲ್ಲಿ ಭಾರತ ಮತ್ತು ಚೀನಾದ ಸ್ಥಾನದಲ್ಲಿ ತುಂಬಾ ವ್ಯತ್ಯಾಸವಿದೆ. ಜಗತ್ತಿನಲ್ಲಿ ಅಣ್ವಸ್ತ್ರಗಳನ್ನು ಹೊಂದಿದ ರಾಷ್ಟ್ರಗಳೆಂದು ಪರಿಗಣಿತವಾಗಿರುವ ರಾಷ್ಟ್ರಗಳಲ್ಲಿ ಚೀನಾ ಕೂಡ ಒಂದು. ಉಳಿದ 5 ದೇಶಗಳಂತೆ, ಅಮೇರಿಕಾದಂತೆಯೇ ಚೀನಾ ಕೂಡ ಅಣ್ವಸ್ತ್ರಗಳನ್ನು ತಯಾರಿಸುವ ಎಲ್ಲ ಉಪಯೋಗಿಸುವ ಹಕ್ಕನ್ನು ಹೊಂದಿದೆ. ಆದರೆ ಅಣ್ವಸ್ತ್ರ ಪ್ರಸರಣ ನಿಷೇಧ ಒಪ್ಪಂದದ ಪ್ರಕಾರ ಭಾರತ ಅಣ್ವಸ್ತ್ರವನ್ನು ಪಡೆದುಕೊಳ್ಳುವುದಕ್ಕೆ ಬಿಡಬಾರದು ಎಂದು ಅಮೇರಿಕಾ ಪ್ರಯತ್ನಿಸುತ್ತಿದೆ. ಭಾರತ ಅಣ್ವಸ್ತ್ರವನ್ನು ಪಡೆದಿರುವುದು ಅಮೇರಿಕಾ ದೃಷ್ಟಿಯಿಂದ ಮಹಾಪರಾಧ. ಭಾರತ ದೇಶ ಇಡಿಯಾಗಿ ಈ 5 ರಾಷ್ಟ್ರಗಳ ಹೊರತು ಬೇರೆ ಯಾವ ರಾಷ್ಟ್ರಗಳೂ ಅಣ್ವಸ್ತ್ರವನ್ನು ಹೊಂದಬಾರದು ಎಂಬ ಹೇರಿಕೆಯನ್ನು ವಿರೋಧಿಸಿದೆ. ಅದಕ್ಕಾಗಿಯೇ ಅಣ್ವಸ್ತ್ರ ಪ್ರಸರಣ ನಿಷೇಧ ಒಪ್ಪಂದ, ಅಣ್ವಸ್ತ್ರ ಪರೀಕ್ಷೆ ನಿಷೇಧ ಒಪ್ಪಂದಗಳಿಗೆ ಸಹಿಹಾಕಿಲ್ಲ. ಹೀಗೆ ಸಹಿ ಹಾಕಿಲ್ಲದ ದೇಶಗಳಿಗೆ ಅಣು ಇಂಧನ, ತಂತ್ರಜ್ಞಾನ ಸೆರಬರಾಜನ್ನು ಅಮೇರಿಕಾ ನೇತೃತ್ವದ ಅಣು ಸರಬರಾಜು ದೇಶಗಳು ಪ್ರತಿಬಂಧಿಸುತ್ತವೆ.

ಆದರೆ ಚೀನಾಕ್ಕೆ ಈ ಪ್ರತಿಬಂಧಕಗಳು ಯಾವುವೂ ಲಗತ್ತಾಗುವುದಿಲ್ಲ. ಹೀಗಾಗಿ ಅಮೇರಿಕಾ ಜೊತೆಯಲ್ಲಿ ಚೀನಾ ಮಾಡಿಕೊಂಡ ಒಪ್ಪಂದ 'ಅಣ್ವಸ್ತ್ರ ರಾಷ್ಟ್ರ' ವೆಂಬ ಚೀನಾದ ಸ್ಥಾನಮಾನಕ್ಕೆ ಅನುಗುಣವಾಗಿದೆ. ಆದರೆ ಅದೇ ಸಮಯದಲ್ಲಿ ಭಾರತವನ್ನು 'ಅಣ್ವಸ್ತ್ರ ರಹಿತ ರಾಷ್ಟ್ರ' ವೆಂದೇ ಪರಿಗಣಿಸಲಾಗುತ್ತಿದೆ. ಅದಕ್ಕೆ ಅನುಗುಣವಾಗಿ ಭಾರತದ ಮೇಲೆ ಷರತ್ತುಗಳನ್ನು, ಕಾನೂನುಗಳನ್ನು ಹೇರಲಾಗುತ್ತಿದೆ. ಇಲ್ಲಿಯುವರೆಗೂ ಭಾರತ ಪ್ರತಿಪಾದಿಸಿದ ಸ್ವ ಗೌರವದ ನೀತಿಗಳನ್ನು ಕೈಬಿಟ್ಟು ಮನಮೋಹನಸಿಂಗ್ ಈ ಷರತ್ತುಗಳನ್ನು ತಪ್ಪಿಸಿಕೊಳ್ಳುತ್ತಿದ್ದಾರೆ. ಸ್ವತಂತ್ರ, ಸಾರ್ವಭೌಮ ರಾಷ್ಟ್ರವಾಗಿ ಭಾರತ ಇಂತಹ ಅವಹೇಳನಕಾರಿಯಾದ, ಭಾರತವನ್ನು ಎರಡನೇ ದರ್ಜೆಯ ರಾಷ್ಟ್ರವೆಂಬ ಸ್ಥಿತಿಗೆದೂಡುವ ಒಪ್ಪಂದಗಳನ್ನು ಒಪ್ಪಿಕೊಳ್ಳಬಾರದೆಂದೇ ಸಿಪಿಐ(ಎಂ) ಪ್ರತಿಪಾದನೆ. ಆದ್ದರಿಂದ ಚೀನಾ ಕೂಡ 123 ಒಪ್ಪಂದ ಮಾಡಿಕೊಂಡಿದೆ. ಭಾರತ ಅದೇ ರೀತಿ ಒಪ್ಪಂದ ಮಾಡಿಕೊಂಡರೆ ತಪ್ಪೇನು ಎಂಬ ವಾದದಲ್ಲಿಯೇ ಹುರುಳಿಲ್ಲ. ಇದು ಕೇವಲ ಸಿಪಿಐ(ಎಂ) ಬಗ್ಗೆ ಅಪಪ್ರಚಾರ ಮಾಡುವ ದುರುದ್ದೇಶದಿಂದ ಕೂಡಿದ್ದು.

ಚೀನಾದ 123 ಒಪ್ಪಂದದ ಮೇಲೆ ಹೈಡ್ ಕಾಯಿದೆಯಂತಹ ಷರತ್ತುಗಳಿಲ್ಲ

ಚೀನಾ ಮಾಡಿಕೊಂಡ 123 ಒಪ್ಪಂದದಲ್ಲಿ ಸ್ಪಷ್ಟವಾದ ಒಂದು ಉಲ್ಲೇಖವಿದೆ. 'ಎರಡೂ ರಾಷ್ಟ್ರಗಳ ಒಳಗಿನ ಕಾನೂನುಗಳು 123 ಒಪ್ಪಂದ ಮೇಲೆ ಯಾವುದೇ ಪರಿಣಾಮ ಬೀರುವಂತಿಲ್ಲ' ಇಂತಹ ಯಾವುದೇ ವಾಕ್ಯವನ್ನು ಭಾರತದ 123 ಒಪ್ಪಂದದಲ್ಲಿ ಸೇರಿಸಲು ಮನಮೋಹನಸಿಂಗ್ ಸರ್ಕಾರ ಏಕೆ ಪ್ರಯತ್ನಿಸಲಿಲ್ಲ. ಇಂತಹದೊಂದು ರಕ್ಷಣೆಯನ್ನೂ ಪಡೆಯುವುದಕ್ಕೆ ಬದಲಾಗಿ ಭಾರತಕ್ಕೆಂದೇ ಅಮೇರಿಕಾದ ಸಂಸತ್ತಿನಲ್ಲಿ ಅನೇಕ ವಾರಗಳ ಬಿರುಸಿನ ಚರ್ಚೆಯ ನಂತರ ಅಂಗೀಕರಿಸಲಾದ ಹೈಡ್ ಕಾಯಿದೆಯಲ್ಲಿ ಬಹಳ ಸ್ಪಷ್ಟವಾಗಿ ಭಾರತದ ವಿದೇಶಾಂಗ ನೀತಿ, ಭಾರತದ ಮಿಲಿಟರಿ ಅಮೇರಿಕಾದ ಸಹಯೋಗಿಯಾಗಿರಬೇಕೆಂಬ ಒತ್ತಾಯವಿದೆ. ಪ್ರತಿವರ್ಷ ಭಾರತ ಸರಿಯಾಗಿ ವರ್ತಿಸಿದೆಯೇ ಇಲ್ಲವೇ ಎಂದು ಅಮೇರಿಕಾದ ಅಧ್ಯಕ್ಷ ವರದಿ ನೀಡಬೇಕು ಎಂದು ಹೈಡ್ ಕಾಯಿದೆ ನಿರ್ಬಂಧಿಸಿದೆ. ಪ್ರತಿವರ್ಷವೂ ಭಾರತದಂತಹ ಸ್ವತಂತ್ರ ಸಾರ್ವಭೌಮ ದೇಶ ಇಂತಹ ಅಪಮಾನಕರ ಪರೀಕ್ಷೆಗೆ ಒಳಪಡಬೇಕು ಎಂಬುದೇ ಭಾರತದ ಜನತೆಯನ್ನೂ ರೊಚ್ಚಿಗೇಳಿಸುವ ವಿಚಾರ.

ಚೀನಾವನ್ನು ಬಲಪಡಿಸಲೆಂದು ಭಾರತವನ್ನು ದುರ್ಬಲಗೊಳಿಸಲೆಂದು ಸಿಪಿಐ(ಎಂ) ಈ ಒಪ್ಪಂದವನ್ನು ವಿರೋಧಿಸುತ್ತದೆ. ಸಿಪಿಐ(ಎಂ) ಚೀನಾದ ಏಜೆಂಟ್ ಆಗಿ ವರ್ತಿಸುತ್ತಿದೆ ಎಂಬ ಅಪಪ್ರಚಾರ.

ಇದು ಎಲ್ಲಾ ಅಪಪ್ರಚಾರಗಳಲ್ಲಿ ಅತ್ಯಂತ ಕೆಳಮಟ್ಟದ್ದು. ಕಾಂಗ್ರೆಸ್‌ಪಕ್ಷ, ಭಾರತ ಸರ್ಕಾರ, ಭಾರತದ ಮಾಧ್ಯಮದ ಕೆಲವು ಪ್ರತಿನಿಧಿಗಳು, ಕೆಲವು ಟಿ.ವಿ., ಚರ್ಚೆಗಳ ಭಾಗೀದಾರರು ಬೇಕೆಂದು ಎತ್ತುತ್ತಿರುವ ಈ ಪ್ರಚಾರ ಇಂದು ದೊಡ್ಡ ಸುಳ್ಳು ಕೂಡ. ಭಾರತ ಅಣ್ವಸ್ತ್ರ ವಿಲ್ಲದ ರಾಷ್ಟ್ರ ಎಂದು ಅಮೇರಿಕಾ ಪರಿಗಣಿಸಿದರೆ ಅಣ್ವಸ್ತ್ರವನ್ನು ಮುಂದೆಂದೂ ತಯಾರಿಸಬಾರದು ಎಂದು ಷರತ್ತು ಹೇರಿದರೆ ಅದು ಭಾರತವನ್ನು ಸಬಲಗೊಳಿಸುತ್ತದೆಯೇ? ಚೀನಾಕ್ಕೆ ಇದು ದೊಡ್ಡ ಕೊಡುಗೆಯಲ್ಲವೇ?

– ಜಿ.ಎನ್.ನಾಗರಾಜ್

ಶಾಸಕರ ಖರೀದಿ ವ್ಯವಹಾರ......

ಬಿಜೆಪಿ ಸರ್ಕಾರ ಅಸ್ತಿತ್ವಕ್ಕೆ ಬಂದು 45 ದಿನಗಳಾಗುತ್ತಿವೆ. ಇನ್ನೂ ಬಜೆಟ್‌ನ್ನು ಮಂಡಿಸಲಿಲ್ಲ. ಪೂರ್ಣ ಪ್ರಮಾಣದ ಅಧಿವೇಶವನ್ನು ನಡೆಸಲಿಲ್ಲ. ಆದರೆ ದಿನವೊಂದಕ್ಕೆ ಹತ್ತರಂತೆ ಭರವಸೆಗಳು ನಿಂತಿಲ್ಲ. ಮಾತುಗಳು, ಈ ಒಂದೂವರೆ ತಿಂಗಳಲ್ಲಿ ಯಡಿಯೂರಪ್ಪನವರ 'ಅಭಿವೃದ್ಧಿ' ಸಾಧನೆ ನೋಡಿ ನಿಬ್ಬೆರಗಾಗಿ ಕಾಂಗ್ರೆಸ್ - ಜೆಡಿ(ಎಸ್) ಪಕ್ಷಗಳ ಕೆಲವು ಶಾಸಕರು ಹಾಗೆಯೇ 'ಬರಿಗೈಯಲ್ಲಿ' ಬಿಜೆಪಿಗೆ ನಡೆದು ಬಂದುಬಿಟ್ಟಿದ್ದಾರೆ! 'ಅಭಿವೃದ್ಧಿ'ಯ(ಯಾರ) ಮಂತ್ರವನ್ನೇ ಜಪಿಸುವ ಇಂತಹ ಸರ್ಕಾರ ಸುಭದ್ರವಾಗಿರಬೇಕೆಂಬ ಗಣಿ ಧಣಿಗಳು 'ಆಪರೇಷನ್ ಲೋಟಸ್' ಕಾರ್ಯಾಚರಣೆ ಮಾಡುತ್ತಿದ್ದಾರಂತೆ. ಬಿಜೆಪಿ ಸಿದ್ಧಾಂತ, ಯಡ್ಡಿಯ ಆಕರ್ಷಣೆ ಎಂದೆಲ್ಲಾ ಇವರು ಎಷ್ಟೇ ಹೇಳಿದರೂ ನಂಬಿದ ಜನರಿಗೆ ಕೈಕೊಟ್ಟು, ಜನಾದೇಶವನ್ನು ಕಾಲ ಕಸವಾಗಿ ಕಂಡ ಮಾಜಿ ಶಾಸಕರಿಗೆ ಮಂತ್ರಿಗಿರಿ ದಯಪಾಲಿಸಿದ್ದು ನೋಡಿದರೆ ಯಡಿಯೂರಪ್ಪನನ್ನು ಒಳಗೊಂಡು ಬಿಜೆಪಿ ನಾಯಕರು ನೀಡುವ ತತ್ವ ಆಕರ್ಷಣೆಯ ವಾದ ಕಣ್ಣಿಗೆ ಎರಚುವ ಮಣ್ಣು ಎಂದು ಗೊತ್ತಾಗುತ್ತದೆ. ಹೀಗೆ ಶಾಸಕರ ಅಪಹರಣ - ಖರೀದಿ ವ್ಯವಹಾರ ಇನ್ನೂ ನಡೆಯುವ ಸಂಭವಗಳಿವೆ.

ಗಣಿ-ಭೂ ಮಾಫಿಯಾಗಳೇ ಸೂತ್ರಧಾರಿಗಳು

ಬೇರೆ ಪಕ್ಷಗಳಿಂದ ಇನ್ನೂ ಡಜನ್‌ಗಟ್ಟಳೆ ಶಾಸಕರು ಮಾರಾಟಕ್ಕೆ ತಯಾರಿದ್ದಾರೆ ಎಂಬುದು ದಿನನಿತ್ಯದ ಸುದ್ದಿ. ದೊಡ್ಡಬಳ್ಳಾಪುರದ ಶಾಸಕನಾಗಿದ್ದ ನರಸಿಂಹಸ್ವಾಮಿಯ ಹಾದಿಯನ್ನು ಅವರ ಅಪ್ಪ ಜಾಲಪ್ಪ ಹಿಡಿಯಲಿದ್ದಾರಂತೆ. ಈಗಾಗಲೇ ಆನಂದ ಅಸ್ನೋಟಿಕರ್, ಸತೀಶ್ ಜಾರಕೀಹೊಳಿ, ಬಾಲಚಂದ್ರ ಜಾರಕೀಹೊಳಿ, ಶಿವನಗೌಡನಾಯಕ, ನವರಸ ನಟ ಜಗ್ಗೇಶ್, ಮುಂತಾದವರು ಸೇರಿಯಾಗಿದೆ. ಬಂಡವಾಳಿಗರು - ಹೂಡಿಕೆದಾರರ ಕೇಂದ್ರವಾಗಿರುವ ಮಾರಿಷಸ್‌ನಲ್ಲಿ ಸಿದ್ದರಾಮಯ್ಯ ಮತ್ತವರ ಎಡ-ಬಲದವರು 'ವಿಶ್ರಾಂತಿ'ಗೆ ಹೋಗಿದ್ದಾರಂತೆ. ಇವರನ್ನು ಇಲ್ಲಿ ಕಾಣಲಾಗದೇ ಅಕ್ರಮ ಗಣಿ ಕುಳಗಳಾದ ಜನಾರ್ಧನ ರೆಡ್ಡಿ ತಂಡ ಸಿದ್ದುರೊಂದಿಗೆ ಅಭಿವೃದ್ಧಿ ಬಗ್ಗೆ ಚರ್ಚಿಸಲು ಅಲ್ಲಿಗೆ ಹೋಗಿದೆಯಂತೆ. 'ಸಮಾಜವಾದಿ' ಸಿದ್ದರಾಮಯ್ಯ ಕೋಮುವಾದಿ ಬಿಜೆಪಿಗೆ ಹೋಗುವ ಸಿದ್ಧತೆಯಲ್ಲಿರುವುದನ್ನು ಕಾಂಗ್ರೆಸ್‌ನವರೂ, ಅವರ ಮಿತ್ರರೂ ನಿರಾಕರಿಸುತ್ತಿಲ್ಲ!

ಇಲ್ಲಿ ತತ್ವ - ಸಿದ್ಧಾಂತಗಳ ಬಗ್ಗೆ ಅವರಾಡುವ ಮಾತುಗಳು ಕೇವಲ ಬೊಗಳೆ ಮಾತುಗಳು! ಎಲ್ಲವೂ ವ್ಯಾಪಾರ . ಉದಾರೀಕರಣದ ಈ ಯುಗದಲ್ಲಿ ಶಾಸಕರು - ಸಂಸದರು ಮಾರಾಟದ ಒಂದು ಸರಕು ಎಂದೇ ಬಲಪಂಥೀಯ ಪಕ್ಷಗಳು ಭಾವಿಸಿವೆ. ಆದ್ದರಿಂದ ತತ್ವ ನಿಷ್ಠತೆ ಕೈ ಬಿಟ್ಟು ಆ ಮಟ್ಟಕ್ಕೆ ರಾಜಕಾರಣ ಕೊಂಡೊಯ್ದಿವೆ. ಇದು ಪ್ರಜಾಪ್ರಭುತ್ವಕ್ಕೆ, ಮತ ನೀಡಿದ ಜನತೆಗೆ ಬಗೆದ ದ್ರೋಹ. ಇಂತಹ ಅಧಿಕಾರದಾಹೀ ದಾಳಿಗಳು ಪ್ರಜಾತಂತ್ರದ ಬೇರುಗಳನ್ನೇ ಕತ್ತರಿಸಲಿವೆ. ಅಕ್ರಮಣ ಗಣಿಗಾರಿಕೆ, ಅಕ್ರಮ ಭೂ ಕಬಳಿಕೆಗಳ ಮಾಫಿಯಾಗಳೇ ಸೂತ್ರಧಾರಿಗಳಾಗಿ ಯಡ್ಡಿ ಸರ್ಕಾರ ನಡೆಸುತ್ತಿರುವಾಗ 'ಅಕ್ರಮ ರಾಜಕಾರಣ' ಅದರ ಸಹಜ ಶಿಶುವೇ ಆಗಿದೆ. ಇಂತಹ ಹೀನ ರಾಜಕಾರಣವನ್ನು ಅಧಿಕಾರದಲ್ಲಿರಲು ಚಾಣಕ್ಯ ತಂತ್ರ ಅವಶ್ಯಕವೆಂದು ಮುಖ್ಯಮಂತ್ರಿ ಯಡ್ಡಿ ಹೇಳುವ ಮೂಲಕ ತಾವು ಯಾವ ಕೊಚ್ಚೆ ಮೋರಿಯಲ್ಲಿ ನಿಂತಿದ್ದೇನೆಂದು ಸಾರಿದ್ದಾರೆ. ಇಷ್ಟೆಲ್ಲಾ ನಡೆಯುವುದಕ್ಕೆ ಬಾಯಿ ಮುಚ್ಚಿ ಕುಳಿತು ಮೌನ ಸಮ್ಮತಿ ಸೂಚಿಸಿರುವ ಆರ್.ಎಸ್.ಎಸ್. ತನ್ನ ನೆಲೆ ವಿಸ್ತರಣೆಗೆ ಗಣಿ ಧಣಿಗಳನ್ನು ಆಶ್ರಯಿಸಿದ ಈ ಸಂಘ ಪರಿವಾರವೇ ಈಗ ತನ್ನ ಕಟ್ಟಾಳುಗಳ ಕೈಯಿಂದ ಅಧಿಕಾರ ಜಾರೀತು ಎಂದು ಸಣ್ಣಗೆ ಗೊಣಗುವುದು ಒಂದು ವಂಚನೆಯೇ ಆಗಿದೆ. ಬಿಜೆಪಿ ಶಾಸಕರೊಳಗೂ ಹಾಗೂ ಅಧ್ಯಕ್ಷ ಸದಾನಂದ ಗೌಡರೂ ಗುಸು-ಗುಸು ಅತೃಪ್ತ ಮಾತುಗಳು ಅಧಿಕಾರದ ಸುತ್ತಲೂ ಗಿರಕಿ ಹೊಡೆಯುತ್ತಿವೆ.

ಚುನಾವಣೆವರೆಗೂ...

ಬೇರೆ ಪಕ್ಷದ ಶಾಸಕರನ್ನು ಖರೀದಿಸಿ ಅವರೆಲ್ಲರನ್ನೂ ಮಂತ್ರಿಗಳನ್ನಾಗಿಸಿದಂತೆ ಬಿಜೆಪಿ-ಕರ್ನಾಟಕ ರಾಜಕಾರಣವನ್ನು ಗಬ್ಬೆಬ್ಬಿಸುತ್ತಿದೆ. ರೈತರ ನಿಲ್ಲದ ಹತ್ಯೆಗಳು, ಗೊಬ್ಬರ-ಬೀಜದ ಅಭಾವದ ಸಮಸ್ಯೆ, ಮಳೆ ಇಲ್ಲದೆ ಬರದ ಕರಿನೆರಳಿನ ಆವರಿಕೆ... ಇವೆಲ್ಲ ಯಡ್ಡಿಯ ಅಭಿವೃದ್ಧಿಯ ರಾಜಕಾರಣದಲ್ಲಿ ನಿರ್ಗತಿಕ 'ವಸ್ತು'ಗಳು! ಈಗೇನಿದ್ದರೂ ಬೆಂಗಳೂರು ಬೆಳಗಿಸುತ್ತೇವೆಂಬ ಯೋಜನೆಗಳು... ಕೃಷಿ ಮತ್ತು ಅಭಿವೃದ್ಧಿಯ ಪ್ರಾದೇಶಿಕ ಸಭೆಗಳು...ನಡದೇ ಇವೆ ಯಾಕೆಂದರೆ ಮುಂದಿದೆಯಲ್ಲಾ ಬೆಂಗಳೂರು ಮಹಾನಗರ ಪಾಲಿಕೆ ಹಾಗೂ ಪಾರ್ಲಿಮೆಂಟ್ ಚುನಾವಣೆಗಳು. ಅಲ್ಲಿಯುವರೆಗೂ ಇಂತಹ 'ಅಭಿವೃದ್ಧಿ ರಾಜಕಾರಣ' ಅಡೆತಡೆಯಿಲ್ಲದೇ ಸಾಗುತ್ತದೆ! ಈಗಿರುವ ಅವಕಾಶ, ಬಲವನ್ನೂ ಕ್ರೋಢೀಕರಿಸಿಕೊಂಡು ಹೊಸ ಘಳಿಗೆ ಸಿದ್ಧವಾಗುತ್ತದೆ.

ನಿಲ್ಲದ ಹತ್ಯೆಗಳು:

ಹಾವೇರಿಯಲ್ಲಿ ಗೊಬ್ಬರಕ್ಕಾಗಿ ನಡೆದ ಚಳುವಳಿಯಲ್ಲಿ ಪೊಲೀಸರು ಹಾರಿಸಿದ ಗುಂಡೇಟಿನಿಂದ ಜೀವನ್ಮರಣದ ಸ್ಥಿತಿಯಲ್ಲಿದ್ದ ರೈತ ಪುಟ್ಟಪ್ಪ ಹೇಮಪ್ಪ ಹೊನ್ನತ್ತಿ(35) ಕೊನೆಯುಸಿರೆಳೆದಿದ್ದಾರೆ. ಗೋಲಿಬಾರ್‌ನಲ್ಲಿ ಸತ್ತವರ ಸಂಖ್ಯೆ 2 ಕ್ಕೇರಿದೆ. ಹಾಗೆ ನೋಡಿದರೆ ಪುಟ್ಟಪ್ಪನ ದೇಹ ಹೊಕ್ಕಗುಂಡು ಛೇದಿಸಿದ ರೀತಿ ಆತ ಬದುಕುಳಿಯುವ ಸಂಭವವೇ ಇಲ್ಲವೆಂದು ಸಾರುತ್ತಿತ್ತು. ಆದರೆ ಆಗಲೇ ಸತ್ತರೆ ಮತ್ತೇ ಕೋಲಾಹಲಕ್ಕೆ ಕಾರಣವಾದೀತೆಂದು ಪ್ರಜ್ಞಾಹೀನ ಸ್ಥಿತಿಯಲ್ಲಿಯೇ ವೈದ್ಯಕೀಯ ನೆರವಿನಿಂದ ಇಲ್ಲಿಯವರೆಗೂ ಎಳೆದುತಂದು 'ಚಾಣಕ್ಯ ತಂತ್ರ' ಅನುಸರಿಸಿತ್ತು ಯಡ್ಡಿ ಸರ್ಕಾರ.

ಇಷ್ಟೆಲ್ಲಾ ನಡುವೆ ಬೆಂಗಳೂರಿನಲ್ಲಿ, ಗುಲಬರ್ಗಾದಲ್ಲಿ, ಬೆಳಗಾಂನಲ್ಲಿ ಕೃಷಿ ಬಗ್ಗೆ ಚರ್ಚೆಗಳನ್ನು ನಡೆಸಿತು. 'ಅಭಿವೃದ್ಧಿ' ಯೋಜನೆ, ಶಂಕು ಸ್ಥಾಪನೆ ಸಾವಿರಾರು ಕೋಟಿ ಹೂಡಿಕೆ ಭರವಸೆಯನ್ನು ಇಲ್ಲೆಲ್ಲಾ ಕೊಡಲಾಯಿತು. ಆದರೆ ರೈತರ ಸಾವು ನಿಲ್ಲಲಿಲ್ಲ. ಸರ್ಕಾರ ಗುಂಡಿನ ಸದ್ದು ಈ ನಡುವೆ ಕೇಳದಿದ್ದರೂ ಆತ್ಮಹತ್ಯೆಯೆಂಬ ಹತ್ಯೆಗಳು ನಿಂತೇ ಇಲ್ಲ.

ಅಣು ಒಪ್ಪಂದ : ಕೆಲವು ವಿವೇಕದ ದನಿಗಳು.......

ತಳ್ಳಿಹಾಕಬಾರದು

"…..ದೇಶದ ಪರಮಾಣು ವಿದ್ಯುತ್ ಕೇಂದ್ರಗಳಿಗೆ ಯುರೇನಿಯಂ ಇಂಧನ ಪಡೆಯುವ ಮುಖ್ಯ ಉದ್ದೇಶ ಹೊಂದಿದ ಅಣು ಒಪ್ಪಂದ ನಮ್ಮ ಸಾರ್ವಭೌಮತ್ವಕ್ಕೆ ಧಕ್ಕೆಯಾಗದಂತೆ ಸಂಬಂಧಿಸಿದ ಎಡಪಕ್ಷಗಳ ಆಕ್ಷೇಪವನ್ನು ಸಾರಾಸಗಟಾಗಿ ತಳ್ಳಿ ಹಾಕುವ ಬದಲು ಅದರಲ್ಲಿಯೂ ನೈಜ ಅಂಶಗಳನ್ನು ಪರಿಗಣನೆಗೆ ತೆಗೆದುಕೊಳ್ಳುವುದು ಒಳಿತು. ನಮ್ಮ ಅನಿವಾರ್ಯತೆಯನ್ನೂ ದೌರ್ಬಲ್ಯವೆಂದು ಭಾವಿಸಲು ಯಾವುದೇ ಕಾಲಕ್ಕೂ ಅವಕಾಶ ನೀಡಬಾರದು…"

- 'ಸಂಯುಕ್ತ ಕರ್ನಾಟಕ' ದ ಸಂಪಾದಕೀಯದಿಂದ

★

ಸಂಶೋಧನೆ ಮಾಡುವಂತಿಲ್ಲ...

"…..ಪರಮಾಣು ಒಪ್ಪಂದದ ವಿಷಯದಲ್ಲಿ ಯುಪಿಎ ಸರ್ಕಾರ ಎಂದೂ ಪಾರದರ್ಶಕವಾಗಿ ನಡೆದುಕೊಂಡಿಲ್ಲ. ಈ ಒಪ್ಪಂದ ಜಾರಿಗೆ ಬಂದರೆ ಪರಮಾಣು ಕುರಿತು ಭಾರತ ಸಂಶೋಧನೆ ಮಾಡುವಂತಿಲ್ಲ.ಪರಮಾಣು ಪರೀಕ್ಷೆ ನಡೆಸಿದರೆ ಒಪ್ಪಂದ ತನ್ನಿಂದ ತಾನೇ ತಾನಾಗಿರದ್ದಾಗುತ್ತದೆ. ಪರಮಾಣು ಶಕ್ತಿಯ ಕುರಿತು ಹೆನ್ರಿ ಜೆ ಹೈಡ್ ಕಾನೂನು ಭಾರತವನ್ನು ವಾಶಿಂಗಟನ್ ಗುಲಾಮ ದೇಶವನ್ನಾಗಿ ಪರಿವರ್ತಿಸಿದೆ.

ನಮ್ಮ ದೇಶದ ರಕ್ಷಣೆ ಮಾತ್ರವಲ್ಲ. ಉದ್ದಿಮೆ, ಕೃಷಿ, ಶಿಕ್ಷಣ ಕ್ಷೇತ್ರಗಳ ಮೇಲೆಲ್ಲ ಈ ಒಪ್ಪಂದ ನಕಾರಾತ್ಮಕ ಪರಿಣಾಮ ಬೀರಲಿದೆ. ಏಷ್ಯಾ ಖಂಡದಲ್ಲಿ ತನ್ನ ಹಿಡಿತ ಸಾಧಿಸಲು ಅಮೇರಿಕಾಗೆ ಇಂಥ ಒಪ್ಪಂದ ಬೇಕಾಗಿದೆ. ಅಂತೆಯೇ ದೇಶದ ಪ್ರಮುಖ ವಿಜ್ಞಾನಿಗಳೆಲ್ಲಾ ಈ ಗಂಡಾಂತರಕಾರಿ ಹುನ್ನಾರವನ್ನು ಬಲವಾಗಿ ವಿರೋಧಿಸಿದ್ದಾರೆ.

ನಾಲ್ಕು ವರ್ಷಗಳ ಹಿಂದೆ ಯುಪಿಎ ಸರ್ಕಾರ ಅಸ್ತಿತ್ವಕ್ಕೆ ಬಂದಾಗ ನಾಗರೀಕ ಪರಮಾಣು ಒಪ್ಪಂದದ ಬಗೆಗೆ ಪ್ರಸ್ತಾಪವೇ ಇರಲಿಲ್ಲ. ಸಾಮಾನ್ಯ ಕನಿಷ್ಟ ಕಾರ್ಯಕ್ರಮದಲ್ಲಿ ಇಲ್ಲದ ಇಂಥ ವಿವಾದಾತ್ಮಕ ವಿಷಯವನ್ನು ದಿಢೀರನೆ ಕೈಗೆತ್ತಿಕೊಂಡು ಮನಮೋಹನಸಿಂಗ್ ಇದನ್ನು ತನ್ನ ಸ್ವಂತ ಪ್ರತಿಷ್ಠೆಯ ಹಾಗೂ ಸರ್ಕಾರದ ಜೀವನ್ಮರಣದ ಪ್ರಶ್ನೆಯಾಗಿ ಮಾಡಿದುದೇಕೆ?

ಮಿತ್ರಪಕ್ಷಗಳ ಸಮ್ಮತಿಯಿಲ್ಲದೆ ಸಂಸತ್ತಿನ ಒಪ್ಪಿಗೆ ಪಡೆಯದೆ ಅಣು ಒಪ್ಪಂದದ ಕುರಿತು ಜಾರ್ಜ್ ಬುಷ್‌ಗೆ ಮಾತುಕೊಡಲು ಈ ದೇಶವೇನು ಪ್ರಧಾನಿ ಮನಮೋಹನ್ ಸಿಂಗ್‌ರ ಪಿತ್ರಾರ್ಜಿತ ಆಸ್ತಿಯೇ? ಭಾರತ ನೂರು ಕೋಟಿ ಜನತೆಯ ಬದುಕು ಭವಿಷ್ಯಗಳನ್ನು ಅಮೇರಿಕೆಯ ಹಿತಾಸಕ್ತಿಗೆ ಬಲಿಕೊಡಲು ಈ ಪ್ರಧಾನಿಗೆ ದೇಶದ ಜನತೆ ಅಧಿಕಾರ ನೀಡಿದೆಯೇ?

ಈಗ ತಮ್ಮ ಸಿದ್ಧಾಂತಕ್ಕೆ ಮಾತ್ರವಲ್ಲ ದೇಶದ ಹಿತಕ್ಕೆ ಬದ್ಧವಾಗಿ ಉಳಿದಿರುವ ಎಡಪಕ್ಷಗಳು ಬೆಂಬಲ ಹಿಂದೆ ಪಡೆದಿದೆ…"

'ವಾರ್ತಾಭಾರತಿ' ಸಂಪಾದಕೀಯದಿಂದ

★

ರಹಸ್ಯ ಅಗತ್ಯವಿದೆಯೇ?

"….ಭಾರತದಲ್ಲಿ ಪರಮಾಣು ವಿಜ್ಞಾನಕ್ಕೆ ಸಂಬಂಧಿಸಿದ ಎಲ್ಲವೂ ಬಹಳ ಗುಟ್ಟಾಗಿ ನಡೆಯುತ್ತದೆ. ಅಣು ಶಕ್ತಿ ಆಯೋಗವು ಅಗತ್ಯಕ್ಕಿಂತ ಹೆಚ್ಚು ರಹಸ್ಯ ಪಾಲಿಸುತ್ತಿದೆ. ಅಣು ಒಪ್ಪಂದದ ವಿಷಯದಲ್ಲಿ ಸಂಭವಿಸುತ್ತಿರುವುದನ್ನೂ ಇದುವೇ. ಅಣು ಒಪ್ಪಂದದ ಪೂರ್ಣ ಕರಡು ಚರ್ಚೆಗೆ ಬಂದದ್ದು ಅದು ಅಮೇರಿಕಾದ ಕಾಂಗ್ರೆಸ್‌ನಲ್ಲಿ ಚರ್ಚೆಗೆ ಒಳಗಾದ್ದರಿಂದ ಮಾತ್ರ. ಈಗ ಎಐಇಎ ಜೊತೆಗಿನ ಒಪ್ಪಂದದಲ್ಲಿ ಇರುವ ವಿವರಗಳನ್ನು ಬಹಿರಂಗಪಡಿಸುವುದಕ್ಕೆ ಸರ್ಕಾರ ಸಿದ್ಧವಿಲ್ಲ. ಪ್ರಜಾಪ್ರಭುತ್ವವಿರುವ ದೇಶವೊಂದರಲ್ಲಿ ಪ್ರಜೆಗಳಿಗೆ ತಿಳಿಯದ ರಹಸ್ಯವೊಂದರ ಅಗತ್ಯವಿದೆಯೇ ಎಂಬ ಪ್ರಶ್ನೆ ಇದ್ದೇ ಇದೆ. ಐಎಇಎ ಜೊತೆಗೆ ಸುರಕ್ಷಾ ಷರತ್ತುಗಳ ಒಪ್ಪಂದಕ್ಕೆ ಸಹಿ ಹಾಕುವ ಮುನ್ನ ಅದರಲ್ಲಿರುವ ಅಂಶಗಳನ್ನು ಸಂಸತ್‌ನಲ್ಲಿ ಮಂಡಿಸದೇ ಇರುವುದನ್ನು ಒಪ್ಪುವುದು ಕಷ್ಟವಾಗುತ್ತದೆ. ಅಣುಶಕ್ತಿ ಆಯೋಗವೆಂಬ ಸಂಸ್ಥೆಯ ಈ ನಿಗೂಢತೆಯ ಬಗ್ಗೆ ಒಂದು ಚರ್ಚೆ ಆರಂಭವಾಗಬೇಕಿದೆ…"

-'ಉದಯವಾಣಿ' ಸಂಪಾದಕೀಯದಿಂದ...

ಕಾನೂನು ಇಲ್ಲ

ಬಂಡವಾಳ ಶಾಹಿಗಳು ಮೇಲ್ವರ್ಗ ಕೂಡಿ
ಭಾರತವ ಆಳುತ್ತ ಬಂದಿಹರು ನೋಡಿ
ಹೀಗಾಗಿ ಬಡ ದುಡಿವ ಮಂದಿಗಳು ಎಲ್ಲ
ಉಣ್ಣಲೇಬೇಕೆಂಬ ಕಾನೂನು ಇಲ್ಲ.

ಹಕ್ಕು

ಸಾಹುಕಾರರ ಮನೆಯ ಸಾಕಿರುವ ಬೆಕ್ಕು
ಪಡೆದಿಹುದು ಚೆನ್ನಾಗಿ ತಿಂದುಂಬಹಕ್ಕು
ಅವರದೇ ಮನೆಯಲ್ಲಿ ಹಗಲಿರುಳು ಕೇಳು?
ಬೆವರಿಳಿಸಿ ದುಡಿವವಗೆ ಅರೆ ಹೊಟ್ಟೆ ಕೂಳು

- ವಿಡಂಬಾರಿ

ಸುಳ್ಳು ಹೇಳುವುದಕ್ಕೆ ಒಂದು ಮಿತಿ ಇರಬೇಡವೇ? ಹೋಗಲಿ ಒಂದು ಸಭ್ಯ ಭಾಷೆ, ರೂಪಕವಾದರೂ ಬೇಡವೆ?

ಸುಳ್ಳಿನ ಸರದಾರ ಪ್ರತಾಪ್ ಸಿಂಹ

ನಿತ್ಯಾನಂದಸ್ವಾಮಿ

ಬಿಜೆಪಿಯ ಮತ್ತು ಸಂಘ ಪರಿವಾರದ ಮುಖವಾಣಿಯಾಗಿ ಪ್ರಕಟಗೊಳ್ಳುವ 'ವಿಜಯಕರ್ನಾಟಕ' ದಿನಪತ್ರಿಕೆಯ ಹಕ್ಕನ್ನು ಯಾರೂ ಪ್ರಶ್ನಿಸುವಂತಿಲ್ಲ. ಆದರೆ, ಎಡಪಕ್ಷಗಳ ವಿರುದ್ಧ ನಿಂತರವಾಗಿ ಸತ್ಯಕ್ಕೆ ದೂರವಾದ ಮಾತುಗಳನ್ನು ಹೆಣೆದು ಓದುಗರ ದಾರಿ ತಪ್ಪಿಸುವ ಉದ್ದೇಶದಿಂದಲೇ ಬರೆಯುತ್ತಿರುವ ಪ್ರತಾಪ ಸಿಂಹನನ್ನು ಪ್ರಶ್ನಿಸದೆ ಇರಲಾಗದು. ಈ ದುರುದ್ದೇಶದಿಂದಲೇ ವಿಜಯಕರ್ನಾಟಕ ಈತನನ್ನು ನೇಮಿಸಿಕೊಂಡದ್ದು ನಿಜವಿದ್ದರೆ, ಪತ್ರಿಕೆಯ ಧೋರಣೆಯೂ ಕೂಡಾ ಅಷ್ಟೇ ಪ್ರಶ್ನಾರ್ಹವಾಗುತ್ತದೆ. ಆತನದ್ದು ಹೇಳಿ ಕೇಳಿ 'ಬೆತ್ತಲೆ ಜಗತ್ತು'. ಮಾನ ಮರ್ಯಾದೆ ಎಲ್ಲವನ್ನೂ ಬಿಟ್ಟೇ ನಿಂತವನಂತೆ ಕಾಣುತ್ತಾನೆ. ಪತ್ರಿಕೆಯ ಧೋರಣೆಯೂ ಅಷ್ಟೊಂದು ಅಧೋಗತಿಗೆ ಕುಸಿದಿದೆಯೇ? ಅಭಿಪ್ರಾಯ ಸ್ವಾತಂತ್ರ್ಯದ ಹೆಸರಿನಲ್ಲಿ ಏನನ್ನೂ ಬೇಕಾದರೂ ಬರೆದು ಪ್ರಕಟಸುವುದು ಪತ್ರಿಕಾ ಧರ್ಮವೇ?


ಕಳೆದ ಜೂನ್ 28ರ ಸಂಚಿಕೆಯಲ್ಲಿ ಪ್ರಕಟಗೊಂಡ ಪ್ರತಾಪಸಿಂಹನ ಲೇಖನ ಸುಳ್ಳಿನ ಸರಮಾಲೆಯೇ ಆಗಿದೆ. 'ಮಾವೋ, ಮಾರ್ಕ್ಸ್, ಏಂಗೆಲ್ಸ್ ಯಾರೂ ಇಲ್ಲವೇ ಇಂಡಿಯನ್ಸ್'? ಎಂಬ ತಲೆಬರಹದೊಂದಿಗೆ ಆತ ವಿಷ ಕಾರಲು ಆರಂಭಿಸುತ್ತಾನೆ. ಹೌದು, ಇವರ್‍ಯಾರು ಹುಟ್ಟಿನಿಂದ 'ಇಂಡಿಯನ್ಸ್' ಅಲ್ಲ. ಆದರೆ, ಇಲ್ಲೇ ಹುಟ್ಟಿದ ಅನೇಕ 'ಅಗ್ರಗಣ್ಯ' ಇಂಡಿಯನ್ಸ್‌ಗಿಂತ ಅವರು ಹೆಚ್ಚು ಇಂಡಿಯನ್ಸ್ ಆಗಿದ್ದರು ಎಂಬುದನ್ನು ಪ್ರತಾಪ ಸಿಂಹನಂತವರು ಒಪ್ಪಿಕೊಳ್ಳಲಾರರು. ಇಂಡಿಯಾದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮವೆಂದೇ ಚಿರಪರಿಚಿತವಾಗಿರುವ 1857ರ ಬಂಡಾಯದ ಎಲ್ಲಾ ಬೆಳವಣಿಗೆಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಾ ಬ್ರಿಟಿಷ್ ವಸಾಹತುಶಾಹಿಗಳ ವಿರುದ್ಧ ಭಾರತೀಯರ ಹೋರಾಟವನ್ನು ತಮ್ಮ ಲೇಖನಗಳ ಮೂಲಕ ವಿಶ್ಲೇಷಿಸಿ, ಭಾರತೀಯರಿಗೆ ನೈತಿಕ ಬೆಂಬಲ ನೀಡಿದವರು ಕಾರ್ಲ್‌ಮಾರ್ಕ್ಸ್. ಬಾಲ ಗಂಗಾಧರ ತಿಲಕರನ್ನು ಬ್ರಿಟಿಷರು ಬಂಧಿಸಿದಾಗ ಮುಂಬೈ ನಗರದ ವಿವಿಧ ಜವಳಿ ಗಿರಣಿಗಳ ಸಾವಿರಾರು ಕಾರ್ಮಿಕರು ತಿಲಕರ ಬಿಡುಗಡೆಗೆ ಒತ್ತಾಯಿಸಿ ಮುಷ್ಕರ ಮಾಡಿದ್ದರು. ಈ ಸುದ್ದಿಯನ್ನು ಕೇಳಿ ಹೆಮ್ಮೆಪಟ್ಟುಕೊಂಡವರು ಮತ್ತು ಮುಷ್ಕರ ಹೂಡಿದ ಕಾರ್ಮಿಕರನ್ನು ಅಭಿನಂದಿಸಿದವರು ಲೆನಿನ್. ಮಾರ್ಕ್ಸ್, ಏಂಗೆಲ್ಸ್, ಲೆನಿನ್, ಮಾವೋ ಮೊದಲಾದವರು ಸಮಾಜ ವಿಜ್ಞಾನಿಗಳು. ವಿಜ್ಞಾನಿಗಳು ಯಾವುದೇ ಒಂದು ದೇಶಕ್ಕೆ ಸೇರಿದವರಾಗಿರುವುದಿಲ್ಲ. ಅವರ ಸಾಧನೆ, ಸಂಶೋಧನೆಗಳ ಕೊಡುಗೆಯಿಂದ ಅವರು ವಿಶ್ವಮಾನವರಾಗುತ್ತಾರೆ. ರವೀಂದ್ರನಾಥ ಠಾಗೋರ, ಮಹಾತ್ಮಗಾಂಧಿ, ಡಾ:ಬಿ.ಆರ್.ಅಂಬೇಡ್ಕರ್ ಮೊದಲಾದವರು ವಿಶ್ವ ಮಾನವರ ಸಾಲಿಗೆ ಸೇರಿದವರು. ಅವರು ಇಡೀ ಮಾನವ ಕುಲದ ಹಿತ ಬಯಸುವವರು.

ಇವರು ಇಂಡಿಯನ್ ಅಲ್ಲವೇ?

ಜಗತ್ತಿನ ಶೋಷಿತ, ದಮನಿತ ಜನಸಮೂಹಗಳಿಗೆ ಮಾರ್ಕ್ಸ್, ಮಾವೋರಂತವರ ಸಂದೇಶವಾದರೂ ಏನು? ಆಯಾ ದೇಶದ ಶೋಷಿತ ಜನತೆಯ ಆಯಾ ದೇಶದ ವಿಶಿಷ್ಟ ಹಾಗೂ ವಸ್ತುನಿಷ್ಠ ಪರಿಸ್ಥಿತಿಯನ್ನು ಗಣನೆಗೆ ತೆಗೆದುಕೊಂಡು ಒಂದು ಕ್ರಾಂತಿಕಾರಿ ಕಾರ್ಯಕ್ರಮವನ್ನು ರೂಪಿಸಿ

ಸಾಧಿಸಬೇಕೆಂಬುದೇ ಅವರ ಅಮರ ಸಂದೇಶವಾಗಿದೆ. ಕ್ರಾಂತಿಯನ್ನು ಆಮದು ಮಾಡಿಕೊಳ್ಳಲಾಗದು ಎಂಬುದೇ ಅದರ ಅರ್ಥ. ಈ ವಿಶ್ವ ಕ್ರಾಂತಿಕಾರಿಗಳ ಸಂದೇಶವನ್ನು ಭಾರತದ ಪರಿಸ್ಥಿತಿಗೆ ಅನ್ವಯಿಸಿ ಭಾರತದ ವಿಮೋಚನೆಗೆ ದಾರಿಯನ್ನು ಕಂಡು ಹುಡುಕಿದ 'ಇಂಡಿಯನ್ಸ್' ಸಾಕಷ್ಟು ಇದ್ದಾರೆ. ಪ್ರತಾಪ ಸಿಂಹರಂತಹ ಸುಳ್ಳಿನ ಸರದಾರರು ಅಂತಹವರನ್ನು ಓದುಗರಿಗೆ ಪರಿಚಯಿಸಲು ಇಷ್ಟಪಡಲಾರರು. ಇ.ಎಂ.ಎಸ್. ನಂಬೂದರಿಪಾದ್, ಎ.ಕೆ.ಗೋಪಾಲನ್, ಪಿ.ಸುಂದರಯ್ಯ, ಬಿ.ಟಿ.ರಣದಿವೆ, ಹರಕಿಷನ್ ಸಿಂಗ್ ಸುರ್ಜಿತ್, ಜ್ಯೋತಿ ಬಸು, ಕ್ಯಾಪ್ಟನ್ ಲಕ್ಷ್ಮಿ ಸೈಗಲ್, ಗೋದಾವರಿ ಪರುಳೇಕರ್ ಮೊದಲಾದವರು ಭಾರತದ ಶ್ರೇಷ್ಠ ಸುಪುತ್ರ-ಸುಪುತ್ರಿಯರಲ್ಲವೇ?

ಕಮ್ಯುನಿಸ್ಟರು ಭಗತ್‌ಸಿಂಗ್, ಚಂದ್ರಶೇಖರ್ ಆಜಾದ್, ಝೂನ್ಸಿ ರಾಣಿ ಲಕ್ಷ್ಮಿಬಾಯಿ, ಸುಭಾಷ್‌ಚಂದ್ರ ಬೋಸ್ ಮೊದಲಾದವರನ್ನು



ಬೆತ್ತಲೆ ಜಗತ್ತು

ಪ್ರತಾಪ್ ಸಿಂಹ

pratap_deva@yahoo.co.in

"ನಮಗೆ ಪೊಲಿಟಿಕಲ್ ಇಂಡಿಪೆಂಡೆನ್ಸ್ ಸಿಕ್ಕಿದೆ. ಫುಡ್ ಇಂಡಿಪೆಂಡೆನ್ಸ್ ಅನ್ನೂ ಸಾಧಿಸಿದ್ದಾಗಿದೆ. ಒಂದು ವೇಳೆ ನಮ್ಮ ದೇಶ ಅಭಿವೃದ್ಧಿ ಹೊಂದಿದ ರಾಷ್ಟ್ರವೆನಿಸಿಕೊಳ್ಳಬೇಕೆಂದಾದರೆ ನಾವು 'ಎನರ್ಜಿ ಇಂಡಿಪೆಂಡೆನ್ಸ್' ಅನ್ನೂ ಸಾಧಿಸಬೇಕು"

ನೀವೇ ಹೇಳಿ, ದೇಶವನ್ನು ದಾರಿತಪ್ಪಿಸುತ್ತಿರುವವರಾರು!

ಗೌರವಿಸುವುದಿಲ್ಲ ಎಂಬುದು ಪ್ರತಾಪ್‌ಸಿಂಹರ ಪ್ರಸ್ತುತ ಲೇಖನದಲ್ಲಿರುವ ಇನ್ನೊಂದು ಹಸಿ ಸುಳ್ಳು. ಭಗತ್‌ಸಿಂಗ್ ಅವರ ವಿಚಾರಧಾರೆಗೆ ಕಮ್ಯೂನಿಸ್ಟರು ಕೊಟ್ಟಷ್ಟು ಪ್ರಚಾರವನ್ನು ಇನ್ನು ಯಾರೂ ಕೊಟ್ಟಿಲ್ಲ. ಅವರ ಜನ್ಮ ಶತಾಬ್ಧಿಯನ್ನು ದೇಶದೆಲ್ಲೆಡೆ ಆಚರಿಸುವ ಮೂಲಕ ಇಂದಿನ ಯುವಪೀಳಿಗೆಗೆ ಅವರ ಸಂದೇಶವನ್ನು ಕೊಂಡೊಯ್ಯಲು ಪ್ರಯತ್ನಿಸಿದ್ದು ಕಮ್ಯೂನಿಸ್ಟರು. ಭಗತ್‌ಸಿಂಗ್ ಅವರ ಕ್ರಾಂತಿಕಾರಿ ವಿಚಾರಧಾರೆಯನ್ನು, ಸಮಾಜವಾದದ ಪರವಾಗಿದ್ದ ಅವರ ಒಲವನ್ನು ಮರೆಮಾಚುವ ಹಿಂದುತ್ವ ಶಕ್ತಿಗಳ ಪ್ರಯತ್ನವನ್ನು ಪರಿಣಾಮಕಾರಿಯಾಗಿ ಬಯಲಿಗೆಳೆದವರು ಕಮ್ಯೂನಿಸ್ಟರು. 1857ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ 150ನೇ ವರ್ಷದ ಆಚರಣೆಯ ನಿಮಿತ್ತ ಅನೇಕ ಲೇಖನಗಳನ್ನೂ, ಪುಸ್ತಕಗಳನ್ನು ಪ್ರಕಟಿಸಿ ಆ ಚಾರಿತ್ರಿಕ ಬಂಡಾಯದಲ್ಲಿ ಮಂಗಲ್ ಪಾಂಡೆ, ಝೂನ್ಸಿ ರಾಣಿ, ಬಹಾದ್ದೂರ್ ಷಾ ಮೊದಲಾದವರ ಪಾತ್ರಗಳನ್ನು ಸ್ಮರಿಸಿದ್ದು ಕಮ್ಯೂನಿಸ್ಟರು. ಇನ್ನೂ ಸುಭಾಷ್‌ಚಂದ್ರ ಬೋಸ್‌ರ ಕುರಿತು ಪಶ್ಚಿಮ ಬಂಗಾಳದ ಶಾಲಾ ಪಠ್ಯ ಪುಸ್ತಕಗಳಲ್ಲಿ ಪ್ರಾಮುಖ್ಯತೆ ನೀಡಿರುವುದಲ್ಲದೇ ಪ್ರತಿ ವರ್ಷ ಸುಭಾಷ್ ಚಂದ್ರ ಬೋಸರ ಜಯಂತಿಯನ್ನು ಅಲ್ಲಿ ಆಚರಿಸಲಾಗುತ್ತಿದ್ದರೂ ಪ್ರತಾಪ ಸಿಂಹ ಸುಳ್ಳು ಆರೋಪಗಳನ್ನು ಮಾಡುತ್ತಿರುವುದು ಖಂಡನೀಯ. ವಿಶ್ವದ ಯುವಜನಾಂಗಕ್ಕೆ ಸ್ಫೂರ್ತಿಯ ನೆಲೆಯಾಗಿರುವ ಕ್ರಾಂತಿಕಾರಿ ಚೆಗೆವರಾರ 80ನೇ ಜನ್ಮದಿನವನ್ನು ಆಚರಿಸಿದ್ದು ಪ್ರತಾಪ್ ಸಿಂಹನನ್ನು ಕೆರಳಿಸಿದೆ. ಆದರೆ ಬ್ರಿಟಿಷರಲ್ಲಿ ತನ್ನ ಪ್ರಾಣದ ಭಿಕ್ಷೆ ಬೇಡಿ ತಪ್ಪೊಪ್ಪಿಗೆ ಪತ್ರ ಬರೆದುಕೊಟ್ಟು ಸೆರೆಮನೆಯಿಂದ ಹೊರ ಬಂದಿದ್ದ ಸಾವರ್‌ಕರ್ ಜನ್ಮದಿನ ಆಚರಿಸುವುದಕ್ಕೆ ಇವರ ಆಕ್ಷೇಪವಿಲ್ಲ!

ಕಮ್ಯೂನಿಸ್ಟರು ಅಮೇರಿಕಾದೊಂದಿಗಿನ ಪರಮಾಣು ಸಹಕಾರ ಒಪ್ಪಂದಕ್ಕೆ ವ್ಯಕ್ತಪಡಿಸುತ್ತಿರುವ ವಿರೋಧದ ಬಗ್ಗೆ ಪ್ರತಾಪ ಸಿಂಹ ಅನುಮಾನ ವ್ಯಕ್ತಪಡಿಸುವ ಮೂಲಕ ಓದುಗರಲ್ಲಿ ಗೊಂದಲ ಉಂಟು ಮಾಡುವ ಪ್ರಯತ್ನ ಮಾಡಿದ್ದಾರೆ. ಭಾರತವು ಚೀನಾ ವಿರುದ್ಧ ಅಮೇರಿಕಾದ ಔಟ್‌ಪೋಸ್ಟ್ ಆದರೆ ಕಮ್ಯೂನಿಸ್ಟ್‌ರಿಗೇನು ನಷ್ಟ ಎಂದು ಪ್ರಶ್ನೆ ಮಾಡುತ್ತಾರೆ. ಇದರಿಂದ ನಷ್ಟವಾಗುವುದು ಕಮ್ಯೂನಿಸ್ಟರಿಗೆ ಮಾತ್ರವಲ್ಲ, ದೇಶದ ಹಿತಕ್ಕೆ. ಭಾರತ ಅಮೇರಿಕಾದ ಬಾಲಬಡುಕ ದೇಶವಾಗಿರು ವುದರಿಂದ ಇಲ್ಲಿಯ ಅತ್ಯಂತ ಒಂದು ಸಣ್ಣ ಶ್ರೀಮಂತ ವಿಭಾಗಕ್ಕೆ ಲಾಭವಾಗುಬಹುದು. ಇಷ್ಟಕ್ಕಾಗಿಯೇ ಆ ಸಣ್ಣ ವಿಭಾಗ ಮತ್ತು ಆ ವಿಭಾಗದ ಹಿತ ಬಯಸುವ ರಾಜಕೀಯ ಪಕ್ಷಗಳು ಈ ಪರಮಾಣು ಒಪ್ಪಂದವನ್ನು ಮುಕ್ತವಾಗಿ ಬೆಂಬಲಿಸುತ್ತಿರುವುದು. ಆದರೆ ಆಗ ಭಾರತ ಒಂದು ಸ್ವತಂತ್ರ ಸಾರ್ವಭೌಮ ರಾಷ್ಟ್ರವಾಗಿ ಉಳಿಯಲು ಸಾಧ್ಯವೇ? ಅದರ ಸ್ವಂತ್ರ ವಿದೇಶಾಂಗ ಧೋರಣೆಯ ಗತಿ ಏನು? ಅಮೇರಿಕಾದ ಆಕ್ರಮಣಕಾರಿ ನೀತಿಯನ್ನು ಬೆಂಬಲಿಸುತ್ತಾ, ಭಾರತ ಅಮೇರಿಕಾದ ಅಡಿಯಲ್ಲಿ ಒಂದು ಗುಂಡಾ ರಾಷ್ಟ್ರವಾಗಿ ಪರಿವರ್ತನೆಯಾಗುವುದಿಲ್ಲವೇ?

ಚೀನಾ ತನ್ನ ರಾಷ್ಟ್ರೀಯ ಹಿತದೃಷ್ಟಿಯಿಂದ ಪರಮಾಣು ಒಪ್ಪಂದಕ್ಕೆ ಭಾರತ ಮುಂದಾಗಬೇಕೆಂದೇ ಬಯಸುತ್ತಾ ಈ ಒಪ್ಪಂದವನ್ನು ವಿರೋಧಿಸುವುದರಿಂದ ಚೀನಾಕ್ಕೆ ಅನುಕೂಲವಾಗುವುದು ಏನೂ ಇಲ್ಲ. ಅಭಿವೃದ್ಧಿ ಹೊಂದುತ್ತಿರುವ ಅದರ ನೆರೆಯ ರಾಷ್ಟ್ರವಾದ ಭಾರತ ಅಣ್ವಸ್ತ್ರ ವಿಷಯದಲ್ಲಿ ಜಾಗತಿಕ ನಿಯಂತ್ರಣಕ್ಕೆ ಒಳಪಡುವುದನ್ನು ಅದು ಸಹಜವಾಗಿ ಬಯಸುತ್ತದೆ. ಆದರೆ, ಚೀನಾವನ್ನು ಸದೆಬಡಿಯಬೇಕೆಂಬ ಅಮೇರಿಕಾದ ಉದ್ದೇಶಕ್ಕೆ ಭಾರತ ಕೈ ಜೋಡಿಸುವುದು ಎಷ್ಟರಮಟ್ಟಿಗೆ ಸರಿ? ಪ್ರತಾಪ್‌ಸಿಂಹ ಪ್ರಕಾರ ಅದು ಸರಿ. ಚೀನಾವನ್ನು ನಾಶ ಮಾಡಬೇಕು ಎನ್ನುವ ಅಮೇರಿಕಾದ ಉದ್ದೇಶಕ್ಕೆ ಭಾರತ ಕೈ ಜೋಡಿಸಬೇಕು ಎಂಬುದು ಅವರ ವಾದ! ಚೀನಾ ಒಂದು ಭಿನ್ನವಾದ ರಾಜಕೀಯ ಧೋರಣೆಯನ್ನು ಪ್ರತಿಪಾದಿಸುತ್ತಾ ಮುನ್ನಡೆಯುತ್ತಿರುವುದು ಅಮೇರಿಕಾಕ್ಕೆ ನುಂಗಲಾರದ ತುತ್ತು. ತನ್ನ ಸಾಮ್ರಾಜ್ಯಶಾಹಿ ವಿಸ್ತರಣಾ ನೀತಿಗೆ ಚೀನಾ ಪ್ರಬಲವಾದ ತಡೆಯೊಡ್ಡಬಲ್ಲದು ಎಂದು ಅದಕ್ಕೆ ಗೊತ್ತು. ಆದ್ದರಿಂದ ಭಾರತ ಚೀನಾದೊಂದಿಗೆ ಕೈ ಜೋಡಿಸಬಾರದೆಂದೂ, ಚೀನಾದ ವಿರುದ್ಧ ತನಗೆ ನೆರವಾಗಬೇಕೆಂದು ಅಮೇರಿಕಾ ಬಯಸುತ್ತದೆ. ಈ ಪ್ರಶ್ನೆಯಲ್ಲಿ ನಮ್ಮ ದೇಶದ ಯಾವುದರಲ್ಲಿ ಅಡಗಿದೆ ಎಂಬುದನ್ನು ನಾವು ನೋಡಬೇಕಾಗಿದೆ. ನಮ್ಮ ನೆರೆಯ ದೇಶಗಳೊಂದಿಗೆ ನಾವು ಸಹಕಾರದಿಂದ ಇರುವುದು ಒಳ್ಳೆಯದೋ ಅವರೊಂದಿಗೆ ಜಗಳವಾಡುತ್ತಾ ಇರುವುದು ಒಳ್ಳೆಯದೋ? ಒಂದು ಸಾಮ್ರಾಜ್ಯವಾದಿ ದೇಶದ ಒತ್ತಡಕ್ಕೆ ಮಣಿದು ನಾವು ನಮ್ಮ ನೆರೆಯ ರಾಷ್ಟ್ರದೊಂದಿಗೆ ವೈರುತ್ವವನ್ನು ಸಾಧಿಸುವುದರಲ್ಲಿ ನಮ್ಮ ದೇಶದ ಹಿತಸಾಧನೆ ಹೇಗೆ ಸಾಧ್ಯ?

'ಔಟ್ ಪೋಸ್ಟ್ ಆಗಲಿ'

ಚೀನಾದೊಂದಿಗೆ ನಮಗೆ ಗಡಿ ವಿವಾದ ಇರುವುದು ನಿಜ. ಇಂತಹ ವಿವಾದಗಳು ಅನೇಕ ದೇಶಗಳ ನಡುವೆ ಇವೆ. ಇಂತಹ ವಿವಾದಗಳನ್ನು ಮಾತುಕತೆಯಿಂದಲೇ ಬಗೆಹರಿಸಿಕೊಳ್ಳಬೇಕು ಎಂದು ಸಿಪಿಐ(ಎಂ) ಪ್ರತಿಪಾದಿಸುತ್ತಾ ಬಂದಿದೆ. ಗಡಿ ಪ್ರಶ್ನೆಗಾಗಿ ಯುದ್ಧ ಯಾರು ಆರಂಭಮಾಡಿದರೂ ಅದು ತಪ್ಪೇ. ಭಾರತ-ಚೀನಾ ಗಡಿ ಯುದ್ಧದ ವಿಷಯದಲ್ಲಿ ಕಮ್ಯೂನಿಸ್ಟರು ಚೀನಾವನ್ನು ಬೆಂಬಲಿಸುವ ಪ್ರಶ್ನೆಯೇ ಇಲ್ಲ. ಗಡಿವಿವಾದವನ್ನು ಮಾತುಕತೆಯಿಂದಲೇ ಬಗೆಹರಿಸಿಕೊಳ್ಳಬೇಕು ಎಂಬುದನ್ನು ಈಗ ಚೀನಾವೂ ಒಪ್ಪಿಕೊಂಡಿದೆ, ಭಾರತವೂ ಒಪ್ಪಿಕೊಂಡಿದೆ. ಇದು ಭಾರತದ ಕಮ್ಯೂನಿಸ್ಟರು, ವಿಶೇಷವಾಗಿ ಸಿಪಿಐ(ಎಂ) ಹೊಂದಿದ ನಿಲುವಿಗೆ ಸಿಕ್ಕ

ಪುಟ 12ಕ್ಕೆ

ಕನ್ನಡಿ



‘ಓಡು ಓಡು ಓಡ್ತಾನೆ ಇರು.... ?’

ಕೆ.ಎಸ್.ವಿಮಲ

ಓಡು-ಓಡು ಓಡ್ತಾನೇ ಇರು.... ನಿಲ್ಲಬೇಡ. ಓಡೋದೇ ನಿನ್ ಕೆಲಸ.... ಈ ಪ್ರಪಂಚದ ಚಲನೆಯ ಪರಿ ಇದು. ಇಡೀ ವಿಶ್ವ ನಾಗಾಲೋಟದಲ್ಲಿ ಓಡುತ್ತಿರುವ ಹಾಗೆ ಭಾಸವಾಗುತ್ತಿದೆ. ಯಾರು, ಯಾಕೆ, ಎಲ್ಲಿಂದೆಲ್ಲಿಗೆ ಓಡುತ್ತಿದ್ದೇವೆ? ಈ ಪ್ರಶ್ನೆ ಕಾಡುವುದೇ ಇಲ್ಲವೇ ಯಾರಿಗೂ? ಒಂದು ವರ್ಗದ ಜನ ಹೊಟ್ಟೆಯ ಪಾಡಿಗಾಗಿ ತುತ್ತಿನ ಚೀಲ ತುಂಬಿಸುವ ಕನಿಷ್ಠ ಅವಶ್ಯಕತೆಯ ಗಳಿಕೆಗಾಗಿ ಓಡುತ್ತಿದ್ದರೆ, ಇನ್ನೊಂದು ವರ್ಗದ ಜನ ಹೆಸರು ಅಂತಸ್ತು, ಪ್ರತಿಷ್ಠೆಯ ಗಳಿಕೆಗಾಗಿ ಓಡುತ್ತಿದ್ದಾರೆ. ಈ ಎರಡೂ ವಿಭಾಗದವರಿಗೆ ಇದು ಅಗತ್ಯದ ಕ್ರಿಯೆ ಇರಬಹುದು. ಆದರೆ ಆಡಿಕೊಂಡಿರಬೇಕಾದ ಮುಗ್ಧ ಮಕ್ಕಳು!

ಯಾವುದೇ ವಿದ್ಯುನ್ಮಾನ ಮಾಧ್ಯಮಗಳಲ್ಲಿ ನೋಡಿದರೂ ಒಂದು ಕನಿಷ್ಠ ಹಾಡಿನ ಸ್ಪರ್ಧೆಯ ಕಾರ್ಯಕ್ರಮ ಇತ್ತೀಚಿನ ದಿನಗಳಲ್ಲಿ ಇದ್ದೇ ಇರುತ್ತದೆ. ಒಂದು ಜನಪ್ರಿಯ ಚಾನಲ್ ಪ್ರಥಮ ಬಾರಿಗೆ ಅಂತಹ ಒಂದು ಕಾರ್ಯಕ್ರಮವನ್ನು ರಾಷ್ಟ್ರೀಕೃತ ಬ್ಯಾಂಕೊಂದರ ಪ್ರಾಯೋಜನೆಯ ಮೂಲಕ ಕನ್ನಡದಲ್ಲಿ ಪ್ರಾರಂಭಿಸಿದಾಗ ಎಲ್ಲರೂ ಅಂದುಕೊಂಡಿದ್ದು ಎಲ್ಲೆಲ್ಲೋ ಅಡಗಿ ಕುಳಿತ ಪ್ರತಿಭೆಗಳನ್ನು ಹೊರಗೆ ತೆಗೆಯುವ ಅವಕಾಶ, ನಗರದ ವಾಸಿಗಳಿಗೆ ಮಾತ್ರ ಸಿಗಬಹುದಾಗಿದ್ದ ಅವಕಾಶ ನಗರದ ಬೇಲಿಯಾಚೆಗೂ ವಿಸ್ತರಿಸುತ್ತಿದೆ ಎಂದೆಲ್ಲ. ಆದರೆ ಬೇರೆ ಹಲವು ಚಾನಲ್‌ಗಳಿಗೆ ಹೋಲಿಸಿದರೆ ಈಗಲೂ ಸಾಕಷ್ಟು ಜವಾಬ್ದಾರಿಯುತವಾಗಿಯೇ ನಿರ್ವಹಿಸುತ್ತಿರುವ ಈ ಕಾರ್ಯಕ್ರಮ ಕೂಡ ಮಕ್ಕಳಲ್ಲಿ ಹುಟ್ಟಿಸುವುದು ಪೈಪೋಟಿಯನ್ನೇ. ಮೊದಮೊದಲು ಹಾಡುಗಳ ಆಯ್ಕೆಯ ಕುರಿತು ಅರ್ಥವೇ ಗೊತ್ತಿಲ್ಲವಿದ್ದರೂ, ಓರಿಜಿನಲ್ ಹಾಡುಗಾರರನ್ನು ಅನುಕರಿಸಿ ತಮ್ಮ ಬಾಲ್ಯದ ಹುಡುಗು ವಯಸ್ಸಿಗೆ ತಕ್ಕುದಲ್ಲದ ಹಾಡುಗಳು ಬರುವಾಗ ಬೇಸರಿಸಿ, ಕೊನೆಯ ವಿವೇಕದ ಮಾತು ಹೇಳುವಾಗ ಆ ಕುರಿತು ಕಿವಿ ಮಾತುಗಳು ಕ್ರಮೇಣ ಕಾಣೆಯಾದವು. ಬಹುಶಃ ವೀಕ್ಷಕರು/ ಶ್ರೋತೃಗಳಂತೆ ಆದರೂ ಅದಕ್ಕೆ ಹೊಂದಿಕೊಂಡು ಬಿಟ್ಟರೋ ಅಥವಾ ಮತ್ತೇನೋ...

> ರಿಯಾಲಿಟಿ ಶೋ ದಲ್ಲಿ ಪಾಲ್ಗೊಂಡಾಗ ಆದ ಮಾನಸಿಕ ಒತ್ತಡದಿಂದ ಕುಸಿದ ಮಗು ಈಗಲೂ ಚೇತರಿಸಿಕೊಂಡಿಲ್ಲ.

ಆದರೆ ಈ ಕಾರ್ಯಕ್ರಮದ ಜನಪ್ರಿಯತೆ ಅಥವಾ ಇತರ ದೈತ್ಯ ರಾಷ್ಟ್ರೀಯ ಹಿಂದಿ ಭಾಷಿಕ ಚಾನೆಲ್‌ಗಳಲ್ಲಿ ಬಹಳ ಹಿಂದಿನಿಂದಲೇ ಬರುತ್ತಿದ್ದ ಕಾರ್ಯಕ್ರಮಗಳ ಪ್ರಭಾವವೋ ಇಂದು ಎಲ್ಲ ವಾಹಿನಿಗಳಲ್ಲಿ ಈ ಕಾರ್ಯಕ್ರಮ ವಿವಿಧ ಹೆಸರುಗಳಲ್ಲಿ ಬರುತ್ತಿದೆ. ಆ ಮಕ್ಕಳು ವಹಿಸುವ ಪರಿಶ್ರಮ ವೀಕ್ಷಕರಾಗಿ ಕುಳಿತ ತಂದೆ-ತಾಯಿಯರ ಮುಖದಲ್ಲಿ ಕಾಣುವ ಆತಂಕಗಳನ್ನು ನೋಡಿದಾಗೆಲ್ಲ ಇದು ನಮ್ಮ ಅಗತ್ಯವೇ ಎನಿಸುತ್ತಲೇ ಇರುತ್ತದೆ. ಇಂದಿನ ಸ್ಪರ್ಧಾ ಪ್ರಪಂಚಕ್ಕೆ ತೆರೆದುಕೊಂಡ ನಾವು ನಮ್ಮ ಮಕ್ಕಳನ್ನು ಅದಕ್ಕೆ ಅಣಿಗೊಳಿಸಬೇಕೆಂಬ ಧಾವಂತ ಪೋಷಕರ ನಡೆ-ನುಡಿಗಳಲ್ಲಿ ಎದ್ದು ಕಾಣುತ್ತಿರುತ್ತದೆ. ಅದರಲ್ಲಿಯೂ ಕೆಲವು ಕಾರ್ಯಕ್ರಮಗಳಲ್ಲಿ ಹೆಸರಾಂತ ಹಾಡುಗಾರರು ತೆರೆಯುಮೇಲೆ ಎಷ್ಟು ಕ್ರೂರಿಗಳಾಗಿ ಕಾಣುತ್ತಿರುತ್ತಾರೆಂದರೆ, ಸ್ಪರ್ಧಿಗಳಾದ ಮಕ್ಕಳ ಮುಂದೆ ಅವರು ಮಾತನಾಡುವ ಸಮಯದಲ್ಲಿ, ತನ್ನೆದುರು ನಿಂತ ಮಕ್ಕಳ ಮನಸ್ಸಿನೊಳಗೆ ತಾನೆಂತಹ ತುಮುಲಗಳನ್ನು ಸೃಷ್ಟಿಸುತ್ತಿದ್ದೇನೆಂಬ ಕನಿಷ್ಠ ಪ್ರಜ್ಞೆಯೂ ಇಲ್ಲದ ಸ್ಥಿತಿಯಲ್ಲಿ ನಿಂತು ಬಿಟ್ಟಿರುತ್ತಾರೆ. ಇಂತಹ ಯಾವುದೇ ಅಥವಾ ಯಾವುದೇ ಸ್ಪರ್ಧೆಗಳು ಆಟದಲ್ಲಿ ಎಲ್ಲರೂ ಗೆಲ್ಲುವುದು ಸಾಧ್ಯವಿಲ್ಲ ಅಥವಾ ಸೋತವರು ಸತ್ವಹೀನರಲ್ಲ. ಸೋಲು-ಗೆಲುವಿನಿಂದ ಒಂದರ ಹಿಂದೆ ಒಂದು ಎಂಬ ಸರಳ ಸತ್ಯವನ್ನು ಮಕ್ಕಳ ಮನಸ್ಸಿನಲ್ಲಿ ಮೂಡಿಸುವಂತಾಗಬೇಕು. ಆದರೆ ಈ ರಿಯಾಲಿಟಿ ಶೋ ಗಳು ಕೊಡುತ್ತಿರುವುದೇನು? ಬಹುಶಃ ಈ ವಿಪರೀತಗಳಿಗೆ ಜೀವಂತ ಸಾಕ್ಷಿ ರಂಜನಿ ಸೇನ್‌ಗುಪ್ತ ಎಂಬ ಮಗು. ರಿಯಾಲಿಟಿ ಶೋ ದಲ್ಲಿ ಪಾಲ್ಗೊಂಡಾಗ ಆದ ಮಾನಸಿಕ ಒತ್ತಡದಿಂದ ಕುಸಿದ ಮಗು ಈಗಲೂ ಚೇತರಿಸಿಕೊಂಡಿಲ್ಲ. ರಿಯಾಲಿಟಿ ಶೋ ನಡೆಸಿದವರು ತಾವು ಅಂತಹ ಯಾವುದೇ ಒತ್ತಡ ನೀಡಿಲ್ಲವೆಂದು ಸಮಜಾಯಿಷಿ ನೀಡುತ್ತಿದ್ದಾರಾದರೂ ಇಲ್ಲಿ ಅವರು ಮಾತ್ರ ಜವಾಬ್ದಾರರೇ? ಶಿಂಜನಿ ಸೇನ್‌ಗುಪ್ತ 16 ವರ್ಷದ ನೃತ್ಯಗಾತಿ. ಹಲವಾರು ಟೆಲಿವಿಷನ್ ಧಾರವಾಹಿ, ಬಂಗಾಲಿ ಸಿನಿಮಾಗಳಲ್ಲಿ ನಟಿಸಿದ ಅಭಿನೇತ್ರಿ. ಮೇ 19 ರಂದು ಒಂದು ರಿಯಾಲಿಟಿ ಶೋ ದಲ್ಲಿ ತೀರ್ಪುಗಾರರ ವರ್ತನೆಯಿಂದ ಆದ ಆಘಾತದಿಂದ ಸಂಪೂರ್ಣ ಖಿನ್ನತೆಗೆ ಒಳಗಾಗಿ, ಮಾತು ಕಳೆದುಕೊಂಡು, ಪಾರ್ಶ್ವವಾಯು ಪೀಡಿತಳಾಗಿ ಬೆಂಗಳೂರಿನ ನಿಮ್ಹಾನ್ಸ್‌ನಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಳೆ. ಈ ಘಟನೆ ನಮ್ಮಲ್ಲಿ ಹಲವು ಪ್ರಶ್ನೆಗಳನ್ನೆತ್ತಿದೆ?


ಈ ಜಗಮಗಿಸುವ ಬೆಳ್ಳಿತೆರೆಯ ಭ್ರಮಾಲೋಕದಲ್ಲಿಂದು ಮಧ್ಯಮ ಮೇಲ್ ಮಧ್ಯಮ ವರ್ಗದ ಜನ ಮುಳುಗುತ್ತಿರುವ ಈ ಯುಗದಲ್ಲಿ ನಾಳೆಗಳ ಪರಿಣಾಮದ ಕುರಿತು ಏನೂ ಯೋಚಿಸದ ಪೋಷಕರ ಪಾಲೂ ತಳ್ಳಿ ಹಾಕಲು ಸಾಧ್ಯವಿಲ್ಲ. ಎನ್.ಡಿ.ಟಿ.ವಿ. ನಡೆಸಿದ ಒಂದು ಸಮೀಕ್ಷೆಯಲ್ಲಿ ಮಾತನಾಡಿದ ಎಷ್ಟೋ ತಾಯಂದಿರ ಮಾತುಗಳಲ್ಲಿ ಇದು ಸ್ಪಷ್ಟವಾಗಿದೆ. ತಮ್ಮ ಮಕ್ಕಳಿಂದ ತಾವು ಏನನ್ನೂ ನಿರೀಕ್ಷಿಸಿ, ಅವರ ಮೇಲೆ ಎಂತಹ ಒತ್ತಡ ಹೇರುತ್ತಿದ್ದೇವೆಂಬ ಪರಿತಿಯೇ ಇಲ್ಲದ ಸ್ಥಿತಿ ಅವರದು. ಬಹುಶಃ ಈ ಪರಿಸ್ಥಿತಿ ಕೇವಲ ರಿಯಾಲಿಟಿ ಶೋ ದಂತಹ ಚಟುವಟಿಕೆಗಳಲ್ಲಿ ಮಾತ್ರವಲ್ಲ. ವಿದ್ಯಾಭ್ಯಾಸದ ಸಂದರ್ಭದಲ್ಲೂ ಕಂಡು ಬರುತ್ತಿದ್ದು, ಪರೀಕ್ಷೆಯ ಒತ್ತಡ, ಫಲಿತಾಂಶ ಬರುವ ಮೊದಲೇ ಹೆದರಿ ಆತ್ಮಹತ್ಯೆಯಂತಹ ಕಠಿಣ ತೀರ್ಮಾನಗಳಿಗೆ ಜಗತ್ತಿಗೆ ಕಣ್ಣು ಬಿಡದ ಮಕ್ಕಳು ಬರುತ್ತಿರುವುದು ದಿನನಿತ್ಯದ ಸಂಗಾತಿಗಳಾಗುತ್ತಿವೆ. ಬಹುಶಃ ಸ್ಪರ್ಧಾ ಪ್ರಪಂಚದಲ್ಲಿಯೂ ಒತ್ತಡಕ್ಕೊಳಗಾಗದೇ ಆರೋಗ್ಯಕರ ಸ್ಪರ್ಧೆಗೆ ಸಜ್ಜಾಗುವ ವಾತಾವರಣ ನಿರ್ಮಾಣದತ್ತ ಚರ್ಚೆ ಅಗತ್ಯ.

ಬೆಂಬಲ ಕಳಕೊಂಡ ಯುಪಿಎ ಸರ್ಕಾರ

ಪುಟ 9 ರಿಂದ

ಒಪ್ಪಿಸ ಹೊರಟಿದೆ ಎಂಬ ಸಂಗತಿಯನ್ನು ಮರೆಮಾಚಲೆಂದೇ ಹೀಗೆ ಮಾಡಲಾಯಿತು ಎಂಬುದು ಈಗ ಜಗಜ್ಜಾಹೀರಾಗಿದೆ.

ಅಮೆರಿಕಾ ಅಥವಾ ಇತರ ಪರಮಾಣು ಪೂರೈಸುವ ದೇಶಗಳು ಆಮದು ಮಾಡಿಕೊಂಡ ಅಣು ರಿಯಾಕ್ಟರುಗಳಿಗೆ ಇಂಧನ ನೀಡಲು ನಿರಾಕರಿಸಿದರೆ ಅವನ್ನು ಈ ಸುರಕ್ಷಣಾ ಒಪ್ಪಂದದಿಂದ ಮುಕ್ತಗೊಳಿಸಬಹುದೇ, ಅದೇ ರೀತಿ ದೇಶೀ ನಾಗರಿಕ ರಿಯಾಕ್ಟರುಗಳಿಗೂ ಇಂಧನ ಪೂರೈಕೆ ನಿಲ್ಲಿಸಿದರೆ ಅವನ್ನೂ ಇದರಿಂದ ಮುಕ್ತಗೊಳಿಸಬಹುದೇ, ಇಂತಹ ಸಂದರ್ಭಗಳಲ್ಲಿ ಭಾರತ ಕೈಗೊಳ್ಳಬಹುದಾದ ಸರಿಪಡಿಕೆ ಕ್ರಮಗಳೇನು ಹಾಗೂ ಈ ಕ್ರಮಗಳನ್ನು ಕಾರ್ಯಗತಗೊಳಿಸಬೇಕಾದರೆ ಭಾರತ ಪಾಲಿಸಬೇಕಾದ ಶರತ್ತುಗಳೇನು ಎಂಬ ಬಗ್ಗೆ ಎಡಪಕ್ಷಗಳು ಕೇಳಿದ್ದವು. ಈಗ ಸಾರ್ವಜನಿಕಗೊಳಿಸಿದ ಒಪ್ಪಂದದ ಕರಡಿನಲ್ಲಿ ಈ ಪ್ರಶ್ನೆಗಳಿಗೆ ಸ್ಪಷ್ಟ ಉತ್ತರ ದೊರೆತಿಲ್ಲ ಎಂದು ಈ ಒಪ್ಪಂದವನ್ನು ಅಧ್ಯಯನ ಮಾಡಿದ ನಂತರ ಜುಲೈ 11ರಂದು ಎಡಪಕ್ಷಗಳು ನೀಡಿದ ಹೇಳಿಕೆಯಲ್ಲಿ ಅಭಿಪ್ರಾಯಪಟ್ಟಿವೆ.



ಈ ಒಪ್ಪಂದದ ಪ್ರಕಾರ ಇದರ ವ್ಯಾಖ್ಯೆಯಲ್ಲಿ ಯಾವುದೇ ವಿವಾದ ಬಂದರೆ ಐಎಇಎ ಯ ತೀರ್ಪೇ ಅಂತಿಮ. ಭಾರತದ ಪ್ರಕಾರ ಅದು ಸರಿಯಿಲ್ಲದಿದ್ದರೂ ಅದನ್ನು ಒಪ್ಪಿಕೊಳ್ಳಬೇಕು, ಭಾರತ ಒಪ್ಪಂದದ ಯಾವುದೇ ಅಂಶವನ್ನು ಪಾಲಿಸುತ್ತಿಲ್ಲ ಎಂದು ಆಡಳಿತ ಮಂಡಳಿ ಬಗೆದರೆ ಸ... , ವಿಶ್ವ ಸಂಸ್ಥೆಯ ಭದ್ರತಾಸಮಿತಿಗೆ ತಿಳಿಸಿ ನಿ...ಂಧವೂ ಸೇರಿದಂತೆ ಯಾವುದೇ ಶಿಕ್ಷೆಗೆ ಒಳಗಾಗಬೇಕು.

ಇರಾನ್. ಇದಕ್ಕೆ ಇತ್ತೀಚಿನ ಉದಾಹರಣೆ. ಭಾರತವೂ ಸೇರಿದಂತೆ ಹಲವು ದೇಶಗಳು ಇರಾನಿಗೆ ತನ್ನ ಇಂಧನ ಆವೃತ್ತವನ್ನು ನಿರ್ಧರಿಸುವ ಹಕ್ಕು ಇದೆ ಎಂದು ಅನುಮೋದಿಸಿದರೂ ಅಮೆರಿಕಾದ ಒತ್ತಡದಿಂದ ಐಎಇಎ ಆಡಳಿತ ಮಂಡಳಿ ಅದು ಉಲ್ಲಂಘನೆಯೆಂದು ಭದ್ರತಾಸಮಿತಿಗೆ ಒಪ್ಪಿಸಿತು.

ಭಾರತ ಯಾವ ಸಂದರ್ಭದಲ್ಲಿ ಈ ಒಪ್ಪಂದಕ್ಕೆ ಒಳಗಾಗುತ್ತಿದೆ ಎಂಬುದನ್ನು ತಿಳಿಸುವ ಪೀಠಿಕೆಯನ್ನು ಬಿಟ್ಟರೆ ಉಳಿದೆಲ್ಲಾ ಅಂಶಗಳಲ್ಲಿ ಇದು ಅಣು ಪ್ರಸರಣ ನಿಷೇಧ ಸಂಧಿಯ ಪ್ರಕಾರ ಪರಮಾಣು ಶಸ್ತ್ರಾಸ್ತ್ರವಿಲ್ಲದ ಪ್ರಭುತ್ವಗಳು ಎಂದು ಪರಿಗಣಿಸಲ್ಪಡುವ ದೇಶಗಳಿಗೆ ಅನ್ವಯವಾಗುವ ಸಾಮಾನ್ಯ ಒಪ್ಪಂದದಂತೆಯೇ ಇದೆ ಎಂದು ಪರಿಣತರೂ ಅಭಿಪ್ರಾಯ ಪಟ್ಟಿದ್ದಾರೆ. ಅಂದರೆ ಈ ಒಪ್ಪಂದಕ್ಕೆ ಒಳಪಡುವ ಸೌಲಭ್ಯಗಳನ್ನು ಕುರಿತಂತೆ ಭಾರತಕ್ಕೆ ವಿಶೇಷ ಹಕ್ಕುಗಳೇನೂ ಇರುವುದಿಲ್ಲ ಎಂಬುದು ಸ್ಪಷ್ಟ. ಇದು ಪ್ರಧಾನ ಮಂತ್ರಿಗಳು ಸಂಸತ್ತಿಗೆ ನೀಡಿದ ಭರವಸೆಗಳಿಗೆ ಸಂಪೂರ್ಣವಾಗಿ ವ್ಯತಿರಿಕ್ತವಾದ ಸಂಗತಿ ಎಂದು ಎಡಪಕ್ಷಗಳು ಆಕ್ಷೇಪಿಸಿವೆ.

ಒಟ್ಟಿನಲ್ಲಿ ಕೊನೆಗೂ ಬಯಲಾದ ಐಎಇಎ ಸುರಕ್ಷಣಾ ಒಪ್ಪಂದ ಹೈಡ್ ಆಕ್ಟ್ ಮತ್ತು 123 ಒಪ್ಪಂದದ ಯಾವುದೇ ಮೂಲಭೂತ ಸಮಸ್ಯೆಗಳಿಗೆ ಪರಿಹಾರ ನೀಡಿಲ್ಲ. ಆದ್ದರಿಂದ ಪ್ರಧಾನ ಮಂತ್ರಿಗಳು ಬಯಸುವಂತೆ ಭಾರತ- ಅಮೆರಿಕಾ ಪರಮಾಣು ವ್ಯವಹಾರವನ್ನು ಕಾರ್ಯಗತಗೊಳಿಸಿದರೆ , ಭಾರತ ತನ್ನ ವೆಚ್ಚದಾಯಕ ಆಮದು ಮಾಡಲ್ಪಟ್ಟ ರಿಯಾಕ್ಟರುಗಳನ್ನು ಶಾಶ್ವತವಾಗಿ ಐಎಇಎ ಯ ಸುರಕ್ಷಣಾ ಕ್ರಮಗಳಿಗೆ ಒಳಪಡಿಸಬೇಕಾಗುತ್ತದೆ; ವಿದೇಶಾಂಗ ನೀತಿಯ ಪ್ರಶ್ನೆಗಳಲ್ಲಿ ಅಮೆರಿಕಾದ ಬಾಲಂಗೋಚಿಯಾಗಲು ನಿರಾಕರಿಸಿದರೆ ಇವನ್ನೆಲ್ಲಾ ಶಾಶ್ವತವಾಗಿ ಮುಚ್ಚಬೇಕಾದ ಪರಿಸ್ಥಿತಿ ಬರಬಹುದು. ಆದ್ದರಿಂದ ಈ ಒಪ್ಪಂದದ ದಾರಿಯಲ್ಲಿ ಮುಂದುವರೆಯುವುದು ಭಾರತದ ಹಿತಾಸಕ್ತಿಗಳಿಗೆ ಹಾನಿಕಾರಕ ಎಂಬುದು ಈಗ ಇನ್ನಷ್ಟು ಸ್ಪಷ್ಟವಾಗಿದೆ.


ಕಾಂಗ್ರೆಸ್ ಪಕ್ಷ ಈಗ ನಮ್ಮ ದೇಶದ ಆಳುವ ವರ್ಗಗಳ ಪ್ರಧಾನ ಪಕ್ಷವಾಗಿ, ರಾಷ್ಟ್ರೀಯ ಹಿತಾಸಕ್ತಿಗಳನ್ನೂ ಲೆಕ್ಕಿಸದೆ ಅಮೆರಿಕಾದೊಂದಿಗೆ ಸಾಮರಿಕ ಶಾಮೀಲಿಗೆ ಬದ್ಧವಾಗಿದೆ ಎಂಬುದೂ ಸ್ಪಷ್ಟವಾಗಿದೆ ಎಂದು ಎಡಪಕ್ಷಗಳು ಟೀಕಿಸಿವೆ.

ಪಾಳೆಗಾರರ ನೆಲದಲ್ಲಿ ಪಟಪಟಿಸಿದ ಕೆಂಬಾವುಟ!

ಅಂದು ಕೂಲಿಕಾರರ ಘೋಷಣೆಗಳು ಗುರುಗುಂಟಾ ಸಂಸ್ಥಾನದ ಕಲ್ಲಿನ ಕೋಟೆಯೊಳಗೆ ಪ್ರತಿಧ್ವನಿಸಿದವು, ಪಾಳೆಗಾರರ ನೆಲದಲ್ಲಿ ಕೆಂಬಾವುಟದ ಪಟಪಟಿಸುತ್ತಾ, ಪಾಳೆಗಾರರೆ ಇನ್ನು ನಿಮ್ಮ ಪಾಳೆಗಾರಿಕೆ ಮುಗಿಯಿತು ಎನ್ನುವ ಕೂಲಿಕಾರ ಸಂಘದ ಪರೋಕ್ಷ ಎಚ್ಚರಿಕೆ!

ಲಿಂಗಸಗೂರು ತಾಲ್ಲೂಕಿನ ಗುರುಗುಂಟಾ ಹಿಂದೆ ಸಂಸ್ಥಾನವಾಗಿದ್ದಂತಹ ಪ್ರದೇಶ ರಾಜ ಮನೆತನದ ಹಲವರು ಈಗಲೂ ಇದ್ದಾರೆ. ಅಲ್ಲಿಯಾವ ಹೋರಾಟಗಳು ನಡೆಯುವುದಿಲ್ಲ, ರಾಜರ ವಿರುದ್ಧ ಯಾರು ಮಾತನಾಡುವಂತಿಲ್ಲ, ಅಲ್ಲಿ ವಿವಿಧ ಇಲಾಖೆಯ ಅಧಿಕಾರಿಗಳು ಜನ ಸಾಮಾನ್ಯರ ಮಾತು ಕೇಳುವುದಿಲ್ಲ. ಅವರಿಗೆಲ್ಲ ರಾಜರ ರಕ್ಷಣೆ!

ಈ ಭಾಗದ ರೈತರು ಬೀಜ ಕೇಳಲು ಹೋದರೆ ಗುರುಗುಂಟಾ ರೈತ ಸಂಪರ್ಕ ಕೇಂದ್ರ ವ್ಯಾಪ್ತಿಗೆ ಹನ್ನೊಂದು ಗ್ರಾಮ ಪಂಚಾಯ್ತಿಗಳ ಐವತ್ತು ಹಳ್ಳಿಗಳನ್ನು ಸೇರಿಸಲಾಗಿದೆ ಸಾಲದಕ್ಕೆ ಈ ಕೇಂದ್ರಕ್ಕೆ 10,887 ಹೆಕ್ಟೇರ್‌ಗೆ ಬಿತ್ತನೆ ಬೀಜಗಳನ್ನು ಕೊಡಬೇಕಾದ ಜವಾಬ್ದಾರಿ ಬೀಜದ ಅವಶ್ಯಕತೆಯಿರುವುದು ಕ್ವಿಂಟಲ್‌ಗಳ ಲೆಕ್ಕದಲ್ಲಿ. ಆದರೆ ಪೂರೈಕೆಯಾಗಿದ್ದು ಕೆ.ಜಿ.ಗಳಲ್ಲಿ ಲೆಕ್ಕದಲ್ಲಿ. ಆದರೆ ರೈತರಿಗೆ ಬೇಕಾದ ಗಂಗಾ-ಕಾವೇರಿ ಬ್ರಾಂಡಿನ ಸೂರ್ಯಕಾಂತಿ ಬೀಜಗಳೆ ಇರಲಿಲ್ಲ. ಇಷ್ಟೆಲ್ಲಾ, ಅನಾನುಕೂಲವಿದ್ದಾಗೂ ರೈತ ಸಂಪರ್ಕ ಕೇಂದ್ರಕ್ಕೆ ಹೋಗಿ ಬೀಜ ಕೇಳಿದರೆ, ತಹಸಿಲ್ದಾರರು ಬಿಡುಗಡೆ ಮಾಡಿರುವ ಸಣ್ಣ ಅತಿ ಸಣ್ಣ ರೈತರ ಪಟ್ಟಿಯಲ್ಲಿ ಹೆಸರಿಲ್ಲವೆಂಬ ನೆವ ಹೇಳಿ ಮರಳಿ ಕಳಿಸಲಾಗುತ್ತಿತ್ತು. ಪಟ್ಟಿಯೊಳಗೆ ಹೆಸರಿದ್ದರೆ ಚುನಾವಣೆ ಗುರುತಿನ ಪತ್ರ, ಪಡಿತರ ಚೀಟಿ, ಅಥವಾ ಬ್ಯಾಂಕ್ ಖಾತೆ ಪುಸ್ತಕ ಮೂರರಲ್ಲಿ ಒಂದನ್ನು ತೋರಿಸಿ ಬೀಜಗಳನ್ನು ತರಬೇಕು. ಇವಾವು ಇಲ್ಲದಿದ್ದರೆ ನಿಮಗೆ ಬೀಜ ಕೊಡಲಾಗುವದಿಲ್ಲ ಎಂದ್ಹೇಳಿ ಸಂಪರ್ಕ ಕೇಂದ್ರದ ಅಧಿಕಾರಿಗಳು ರೈತರನ್ನು ಮರಳಿ ಕಳಿಸುತ್ತಿದ್ದರು. ಹೀಗೆ



ಬೀಜಗಳನ್ನು ಪಡೆಯಲಾದೆ ರೈತರ ಸಪ್ಪೆ ಮೊರೆಯೊಂದಿಗೆ ಮರಳುತ್ತಿದ್ದರು.

ಕೂಲಿಕಾರರ ಸಂಘದ ಮಧ್ಯ ಪ್ರವೇಶ: ಹೀಗೆ ರೈತರನ್ನು ಮರಳಿ ಕಳಿಸುತ್ತಿರುವದನ್ನು ಗಮನಿಸಿ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ತಾಲ್ಲೂಕ ಸಂಚಾಲಕ ಎಂ.ಸಿ.ನಿಂಗಪ್ಪ ಮತ್ತು ಯಲಗಟ್ಟಾ ಗ್ರಾಮ ಸಮಿತಿಯ ಮುಖಂಡ ಕನಕಪ್ಪ ಗಂಗಾವತಿ ಇಬ್ಬರು ಯಲಗಟ್ಟಾ, ಯರಜಂತಿ, ಬಂಡೆಬಾವಿ, ಪೈದೊಡ್ಡಿ, ರಾಯದುರ್ಗ ಟನಮಕಲ್ ಮುಂತಾದ ಹಳ್ಳಿಗಳಿಗೆ ತೆರಳಿ ರೈತರನ್ನು ಸೇರಿಸಿ ಗುರುಗುಂಟಾ ರೈತ ಸಂಪರ್ಕ ಕೇಂದ್ರಕ್ಕೆ ಮುತ್ತಿಗೆ ಹಾಕುವ ಕಾರ್ಯ ಕ್ರಮವನ್ನು ಹಮ್ಮಿಕೊಳ್ಳಲಾಯಿತು.

ಜೂನ್ 27ರಂದು ಕೆಲವು ಹಳ್ಳಿಗಳಿಂದ ರೈತರು ಜೀಪು ಮಾಡಿಕೊಂಡು ಬಂದರೆ, ಇನ್ನೊಂದಿಷ್ಟು ಜನ ಬಸ್ಸಿಗೆ ಬಂದು ಸೇರಿಕೊಂಡರು. ಕೆಲವು ಜನ ತಮ್ಮ ಹಳ್ಳಿಗಳಿಂದ ನಡೆದು ಕೊಂಡು, ಒಂದಿಷ್ಟು ಜನ ಸೈಕಲ್ ತೆಗೆದುಕೊಂಡು ಬಂದು ಗುರುಗುಂಟಾ ಗ್ರಾಮ ಸೇರಿದರು. 11 ಗಂಟೆಗೆ ಗುರುಗುಂಟಾ ಬಸ್ ನಿಲ್ದಾಣದಲ್ಲಿ ಸಮಾವೇಶಗೊಂಡ ರೈತರನ್ನು ಉದ್ದೇಶಿಸಿ ಎಂ.ಸಿ. ನಿಂಗಪ್ಪ ಮಾತನಾಡಿ ಹೋರಾಟದ ಉದ್ದೇಶವನ್ನು ವಿವರಿಸಿದರು. ನಂತರ ಬಸ್‌ನಿಲ್ದಾಣದಿಂದ ಕೆಂಬಾವುಟ ಮತ್ತು ಬ್ಯಾನರ್‌ಗಳನ್ನು ಹಿಡಿದು ಕೊಂಡು ಕೂಲಿಕಾರರ ಮೆರವಣಿಗೆ ಹಲಗೆ ಬಡಿತ, ಘೋಷಣೆಗಳೊಂದಿಗೆ ಸಂಪರ್ಕ ಕೇಂದ್ರಕ್ಕೆ ತೆರಳಿ ರೈತ ಸಂಪರ್ಕ ಕೇಂದ್ರಕ್ಕೆ ಮುತ್ತಿಗೆ ಹಾಕಲಾಯಿತು. ಈ ಸಂದರ್ಭದಲ್ಲಿ ಪ್ರತಿಭಟನಾಕಾರರನ್ನುದ್ದೇಶಿಸಿ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ರಾಯಚೂರು ಜಿಲ್ಲಾಧ್ಯಕ್ಷ ಕರಿಯಪ್ಪ ಅಚ್ಚೊಳ್ಳಿ, ಜಿಲ್ಲಾ ಕಾರ್ಯದರ್ಶಿ ತಿಪ್ಪಯ್ಯ ನಾಯಕ, ಮಾತನಾಡಿ ಸರಕಾರದ ಕೃಷಿ ನೀತಿ, ಹಾವೇರಿ ಗೋಲಿಬಾರ್ ಘಟನೆಯ ಬಗ್ಗೆ ಮಾತನಾಡಿ, ರೈತರಿಗೆ ಬೀಜ ವಿತರಸುವ ಎಲ್ಲಾ ಕಟ್ಟಳೆಗಳನ್ನು ತೆಗೆದು ಹಾಕಿ ಎಲ್ಲಾ ರೈತರಿಗೆ ಬೀಜ ವಿತರಿಸಬೇಕೆಂದು ಒತ್ತಾಯಿಸಿದರು.

ಮನವಿ ಸ್ವೀಕರಿಸಲು ಬಂದ ಲಿಂಗಸಗೂರು ತಹಸೀಲ್ದಾರ ಎಂ. ರಾಚಪ್ಪ ಮನವಿ ಸ್ವೀಕರಿಸಿ ಎರಡು ಬೇಡಿಕೆಗಳನ್ನು ಸ್ಥಳದಲ್ಲಿಯೇ ಈಡೇರಿಸಿದರು. ಸಣ್ಣ ರೈತರ ಪಟ್ಟಿಯಲ್ಲಿ ಹೆಸರಿಲ್ಲದ್ದಿದ್ದರೂ ಭೂ ಕಂದಾಯ ರಸೀದಿ ತಂದರೆ ಬೀಜ ನೀಡುವಂತೆ ಅಧಿಕಾರಿಗಳಿಗೆ ಆದೇಶಿಸಿದ್ದು ಅಲ್ಲದೆ ಯಾವುದೆ ಗುರುತಿನ ಚೀಟಿಗಳನ್ನು ಕೇಳದಂತೆ ಅಧಿಕಾರಿಗಳಿಗೆ ತಾಕೀತು ಮಾಡಿದರು. ಗಂಗಾ-ಕಾವೇರಿ ಬೀಜಗಳನ್ನು ಕೂಡಲೆ ಒದಗಿಸುವ ಕ್ರಮ ಕೈಗೊಳ್ಳಲಾಗುವದೆಂದು ಭರವಸೆ ನೀಡಿದರು. ಆಗ ನೋಡಬೇಕಿತ್ತು ನೀವು ರೈತರ ಮೊಗದಲ್ಲಿ ಮಂದಹಾಸ! ದಿನನಿತ್ಯ ಅಲೆದು ಅಲೆದು ಹೈರಾಣವಾಗಿದ್ದ ರೈತ ಖುಷಿಯಾಗಿದ್ದ!

ಈ ಹೋರಾಟದಿಂದಾಗಿ ಹೊಸದಾಗಿ ಐದು ಹಳ್ಳಿಗಳು ಸಂಪರ್ಕಕ್ಕೆ ಬಂದು ತಮ್ಮ ಹಳ್ಳಿಗಳಲ್ಲಿ ಸಂಘ ಕಟ್ಟುವಂತೆ ದುಂಬಾಲು ಬಿದ್ದಿದ್ದಾರೆ. ಇದು ಕೂಲಿಕಾರರ ಸಂಘದ ಹಿರಿಮೆ. ಹೋರಾಟದ ನೇತೃತ್ವವನ್ನು ಕನಕಪ್ಪ ಗಂಗಾವತಿ, ಗೂಳಪ್ಪ ಯಲಗಟ್ಟಾ, ಚನ್ನಯ್ಯ ಸ್ವಾಮಿ, ಹನುಮಗೌಡ. ದ್ಯಾವಣ್ಣ, ಅಮರೇಗೌಡ ಮಲ್ಲಾಪುರ ವಹಿಸಿದ್ದರು.

ಎಂ. ಸಿ. ನಿಂಗಪ್ಪ ಹಟ್ಟಿ ಚಿನ್ನದ ಗಣಿ

ಸುಳ್ಳಿನ ಸರದಾರ ಪ್ರತಾಪ್ ಸಿಂಹ

ಪುಟ 11 ರಿಂದ

ಜಯ. ಚೀನಾ ಗಡಿ ಪ್ರಶ್ನೆಯನ್ನು ಮುಂದೆ ಮಾಡಿ ನಮ್ಮೊಂದಿಗೆ ಯುದ್ಧ ಮಾಡಿದ್ದು ನಿಜವಾದರೂ ಅದು ಅಮೇರಿಕಾದ ತರಹ ಬೇರೊಂದು ದೇಶವನ್ನು ಆಕ್ರಮಣ ಮಾಡಿ, ಅದನ್ನು ತನ್ನ ಅಧೀನ ದಲ್ಲಿಟ್ಟುಕೊಳ್ಳಲು ಪ್ರಯತ್ನಪಟ್ಟಿಲ್ಲ (ಅಮೇರಿಕಾ ಅಫಘಾನಿಸ್ತಾನ, ಇರಾಕ್ ಮೇಲೆ ಆಕ್ರಮಣ ಮಾಡಿದ ಹಾಗೆ). ಚೀನಾಕ್ಕೆ ಅಮೇರಿಕಾದ ತರಹ ವಿಶ್ವದ ಮೇಲೆ ತನ್ನ ಯಜಮಾನಿಕೆಯನ್ನು ಹೇರುವ ಉದ್ದೇಶವಿಲ್ಲ. ತಾನು ನಂಬಿರುವ ಸಮಾಜವಾದಿ ಸಿದ್ಧಾಂತವನ್ನು ಸಹ ಅದು ಯಾವುದೇ ರಾಷ್ಟ್ರದ ಮೇಲೆ ಹೇರುವ ಪ್ರಯತ್ನವನ್ನು ಮಾಡುತ್ತಿಲ್ಲ. ಚೀನಾಕ್ಕೆ ತನ್ನ ರಾಷ್ಟ್ರೀಯ ಹಿತವೇ ಮುಖ್ಯ. ಆ ಉದ್ದೇಶಕ್ಕಾಗಿ ಅದು ನೆರೆಯ ದೇಶಗಳೊಂದಿಗೆ ಸ್ನೇಹ, ಸಹಕಾರದಿಂದ ಇರಲು ಬಯಸುತ್ತದೆ. ಅಂತಹ ಒಂದು ನೆರೆಯ ದೇಶದೊಂದಿಗೆ ಅಮೇರಿಕಾದ ಸಾಮ್ರಾಜ್ಯಶಾಹಿ ಹಿತಕ್ಕಾಗಿ ನಾವು ಅಮೇರಿಕಾದ ಕೈಗೊಂಬೆ ಆಗಬೇಕೇ? ಚೀನಾ ಮಾತ್ರವಲ್ಲ ಪಾಕಿಸ್ತಾನವೂ ಸೇರಿದಂತೆ ನಮ್ಮ ನೆರೆಯ ಎಲ್ಲ ದೇಶಗಳೊಂದಿಗೆ ನಾವು ಸ್ನೇಹದಿಂದ ಇರುವುದರಲ್ಲೇ ನಮ್ಮ ದೇಶದ ಹಿತ ಅಡಗಿದೆ. ಭಾರತವು ಚೀನಾದ ವಿರುದ್ಧ ಅಮೇರಿಕಾದ ಔಟ್‌ಪೋಸ್ಟ್ ಆಗುವುದರಲ್ಲಿ ಏನೂ ನಷ್ಟವಿಲ್ಲ ಎಂದು ಪ್ರತಾಪ್‌ಸಿಂಹ ಹೇಳುತ್ತಿರುವುದರ ಮರ್ಮವೇನು? ನಾವು ನಮಗಾಗಿ ಬದುಕದೇ ಅಮೇರಿಕಾಕ್ಕಾಗಿ ಬದುಕಬೇಕು ಎಂಬಂತೆ.

'ಕಮ್ಯೂನಿಸ್ಟರಿಂದ ದೇಶಪ್ರೇಮವನ್ನು ನಿರೀಕ್ಷಿಸುವುದು ತಪ್ಪಾಗುತ್ತದೆ' ಎಂದು ಪ್ರತಾಪಸಿಂಹ ಹೇಳಿದ್ದಾನೆ. ಇದನ್ನು ಈ ಹಿಂದೆಯೂ ಅನೇಕ ಸಲ ಆತ ಹೇಳುತ್ತಾ ಬಂದಿದ್ದಾನೆ. ಕಮ್ಯೂನಿಸ್ಟರಿಗೆ ಅವರ ದೇಶ ಪ್ರೇಮದ ಬಗ್ಗೆ ಯಾರಿಂದಲೂ ಸರ್ಟಿಫಿಕೇಟ್ ಬೇಕಾಗಿಲ್ಲ. ಕಮ್ಯೂನಿಸ್ಟ್ ಪಕ್ಷ ದೇಶದ ಸ್ವಾತಂತ್ರ್ಯಕ್ಕಾಗಿ ತನ್ನ ಅಸಂಖ್ಯಾತ ಕಾರ್ಯಕರ್ತರ ಅಮೂಲ್ಯ ಪ್ರಾಣವನ್ನು ಬಲಿಕೊಟ್ಟಿದೆ. ಕಮ್ಯೂನಿಸ್ಟ್ ಪಕ್ಷದಲ್ಲಿ ಈಗಲೂ ಸ್ವಾತಂತ್ರ್ಯ ಯೋಧರಿದ್ದಾರೆ. ಬಿಜೆಪಿಯಲ್ಲಿ ಅಂತಹ ಯೋಧರು ಹುಡುಕಿದರೂ ಹೆಚ್ಚು ಸಿಗಲಾರರು. ಈಗಲೂ ಅಸಂಖ್ಯಾತ ಕಮ್ಯೂನಿಸ್ಟ್ ಕಾರ್ಯಕರ್ತರು ತಮ್ಮ ಸ್ವಂತ ಹಿತವನ್ನು ಬದಿಗಿಟ್ಟು, ದೇಶದ ಶೋಷಿತ ಜನತೆಯ ವಿಮೋಚನೆಗಾಗಿ ಹೋರಾಟ ನಡೆಸುತ್ತಿದ್ದಾರೆ. ಪ್ರತಾಪ್‌ಸಿಂಹ ಅಂತವರ ಬರಹಗಳಲ್ಲಿ ಅವರ ತ್ಯಾಗ ಬಲಿದಾನ ದಾಖಲಾಗದಿರಬಹುದು. ಆದರೆ ದೇಶದ ಚರಿತ್ರೆಯಲ್ಲಿ ಅದು ಅಮರವಾಗಿರುವುದು. ○

ಬೆಂಗಳೂರು ಜೆ.ಸಿ.ನಗರ:

ಗಲಭೆಗೆ ಸಂಚು - ವಿಫಲಗೊಳಿಸಿದ ಜನ

ಪ್ರಾರ್ಥನಾ ಸ್ಥಳವನ್ನು ಅಪವಿತ್ರಗೊಳಿಸಿ ವಿವಿಧ ಕೋಮುಗಳ ನಡುವೆ ಅಶಾಂತಿಯನ್ನು ಸೃಷ್ಟಿಸಲು ನಿನ್ನೆ ಕೆಲವು ಶಕ್ತಿಗಳು ಪ್ರಯತ್ನಪಟ್ಟಿದ್ದರಿಂದ ಉದ್ವಿಗ್ನ ಪರಿಸ್ಥಿತಿ ನಗರದ ಜೆ.ಸಿ.ನಗರಕ್ಕೆ ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಬೆಂಗಳೂರು ಜಿಲ್ಲಾ ಸಮಿತಿಯ ನೇತೃತ್ವದಲ್ಲಿ ನಿಯೋಗ ಭೇಟಿ ನೀಡಿ ಪರಿಶೀಲನೆ ನಡೆಸಿತು.

ಸಿಪಿಐ(ಎಂ) ನಿಯೋಗವು ಮಂತ್ರಿಗಳಾದ ಮಮ್ತಾಜ್ ಅಲಿಖಾನ್, ಡಿಸಿಪಿ ಸೈಯದ್ ಅಲ್ಟತ್ ಹುಸೇನ್, ಪ್ರಾರ್ಥನಾ ಸ್ಥಳದ ಮುಖಂಡರು, ಸ್ಥಳೀಯ ಮುಖಂಡರು ಹಾಗೂ ನಾಗರೀಕರೊಂದಿಗೆ ಮಾತುಕತೆ ನಡೆಸಿತು.

ಈ ಸಂದರ್ಭದಲ್ಲಿ ಕಂಡು ಬಂದ ಅಂಶಗಳಿವು:

1. ಈ ಪ್ರದೇಶದಲ್ಲಿ ಎರಡು ಕೋಮುಗಳ ನಡುವೆ ಗಲಭೆ ಸೃಷ್ಟಿಸಲು ಕೆಲವು ಶಕ್ತಿಗಳು ಪ್ರಯತ್ನಿಸಿವೆ. ಪ್ರಾರ್ಥನಾ ಸ್ಥಳವನ್ನು ಅಪವಿತ್ರಗೊಳಿಸಿರುವುದು ಹಾಗೂ ನಂತರ ನಡೆದ ಗಲಭೆಯನ್ನು ಪೂರ್ವಯೋಜಿತವಾಗಿ ಮಾಡಿರುವ ಸಾಧ್ಯತೆಗಳು ನಿಚ್ಚಳವಾಗಿವೆ. ಇದನ್ನು ಮಾಡುವಲ್ಲಿ ಪ್ರದೇಶದ ಹೊರಗಿನವರ ಕೈವಾಡ ಹೆಚ್ಚಾಗಿರಬಹುದು.

2. ಸ್ಥಳೀಯ ಜನರಲ್ಲಿ ಯಾವುದೇ ಕಾರಣಕ್ಕೂ ಪ್ರದೇಶದ ಶಾಂತಿ ಮತ್ತು ಜನರ ಐಕ್ಯತೆಯನ್ನು ಹಾಳು ಮಾಡಲು ಬಿಡಬಾರದು ಎಂಬ ಕಾಳಜಿಯಿದೆ. ಹೀಗಾಗಿಯೇ ನಿನ್ನೆ ಬಹಳ ಬೇಗನೇ ಪರಿಸ್ಥಿತಿ ಹತೋಟಿಗೆ ಬಂದಿದೆ. ಶಾಂತಿ ಕಾಪಾಡಲು ಮುತುವರ್ಜಿ ವಹಿಸಿದ ಸ್ಥಳೀಯ ಜನತೆ ಅಭಿನಂದನಾರ್ಹರು.

3. ಘಟನೆಯ ಹಿಂದೆ ಧಾರ್ಮಿಕ ಭಾವನೆಗಳನ್ನು ಉದ್ರೇಕಿಸಿ ರಾಜಕೀಯ ಧೃವೀಕರಣದಿಂದ ಲಾಭ ಮಾಡಲು ಬಯಸುವ ದುಷ್ಟ ಶಕ್ತಿಗಳಿವೆಯೋ ಅಥವಾ ಕಿಡಿಗೇಡಿಗಳಿದ್ದಾರೋ ಬೇಗನೇ ತನಿಖೆ ನಡೆಸಿ ಶಿಕ್ಷಿಸುವಂತಾಗಬೇಕು. ಇಂತಹ ಸಂದರ್ಭದಲ್ಲಿ ಅಮಾಯಕರು ಬಲಿಪಶುಗಳಾಗುವ ಸಾಧ್ಯತೆ ಇರುವುದರಿಂದ ಅಮಾಯಕರನ್ನು ಬಿಡಲು ಕ್ರಮ ವಹಿಸಬೇಕು.

ಈ ಎಲ್ಲಾ ಹಿನ್ನೆಲೆಯಲ್ಲಿ ಪ್ರದೇಶದ ಶಾಂತಿ ಮತ್ತು ಐಕ್ಯತೆಗೆ ಧಕ್ಕೆ ಬರಲಾರದ ರೀತಿಯಲ್ಲಿ ಎಲ್ಲಾ ಜನರು ವಿಶೇಷ ಮುತುವರ್ಜಿ ವಹಿಸಬೇಕು ಮತ್ತು ಪ್ರಚೋದನೆಗಳು ಹಾಗೂ ಸುಳ್ಳು ಸುದ್ದಿಗಳನ್ನು ಹರಡುವವರನ್ನು ತಿರಸ್ಕರಿಸಬೇಕೆಂದು ಸಿಪಿಐ(ಎಂ) ನಿಯೋಗವು ಮನವಿ ಮಾಡಿತು.


ನಿಯೋಗದಲ್ಲಿ ಸಿಪಿಐ(ಎಂ)ನ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಎಸ್.ಪ್ರಸನ್ನಕುಮಾರ್, ಬೆಂಗಳೂರು ಜಿಲ್ಲಾ ಕಾರ್ಯದರ್ಶಿ ಪ್ರಕಾಶ್.ಕೆ, ರಾಜ್ಯ ಸಮಿತಿ ಸದಸ್ಯರಾದ ಅಮಾನುಲ್ಲಾಖಾನ್, ಅಖಿಲ ಭಾರತ ವಕೀಲರ ಸಂಘದ ಮುಖಂಡರಾದ ಟಿ.ನಾರಾಯಣಸ್ವಾಮಿ, ಯುವಜನ ಮುಖಂಡರಾದ ಪಿ.ನಾಗರಾಜ್, ಬೆಂಗಳೂರು ಉತ್ತರ ವಲಯ ಸಮಿತಿ ಮುಖಂಡರಾದ ಚೌಡರೆಡ್ಡಿ, ಶಿವರುದ್ರಯ್ಯ, ಸ್ಥಳೀಯ ಮುಖಂಡರಾದ ಅಸಾದುಲ್ಲಾ, ಬಾಜಾ ಮೊಹಿದ್ದೀನ್, ಕುಮಾರ್ ಮುಂತಾದವರು ಭಾಗವಹಿಸಿದ್ದರು.

ಜನಶಕ್ತಿ ಕನ್ನಡ ವಾರಪತ್ರಿಕೆ
ಜುಲೈ 20, 2008

ವಿಜ್ಞಾನ ಋಷಿಗಿದೋ ನಮ್ಮ ನಮನ

ವೈಜ್ಞಾನಿಕ ಸಾಹಿತ್ಯವನ್ನು ಹರಿತವಾಗಿ ಬರೆದೂ ಬಾಬಾ ಗಳ ಕಾಲಿಗೆ ಬೀಳುವ ವಿಜ್ಞಾನಿಗಳನ್ನು ನಾವು ನೋಡಿದ್ದೇವೆ. ಮಾತು ಬರಹ, ಕೃತಿ ಹೀಗೆ ಎಲ್ಲದರಲ್ಲೂ ವೈಜ್ಞಾನಿಕ ಮನೋಧರ್ಮವನ್ನು ಪ್ರಖರವಾಗಿ ಪ್ರತಿಪಾದಿಸಿದ ಆಡಿದ್ದನ್ನೇ ಬರೆದ, ಬರೆದದ್ದನ್ನೇ ಬದುಕಿದ್ದ ಗುಡ್ಡೆಹಿತ್ತು ತಮ್ಮಪ್ಪಯ್ಯ ನಾರಾಯಣರಾವ್ ಅಸ್ತಂಗತರಾಗಿದ್ದಾರೆ. ಇಡೀ ಜಗತ್ತು ತೆರೆದುಕೊಳ್ಳುವುದೇ ರಾತ್ರಿಯ ದಿಗಂತದ ನಕ್ಷತ್ರಗಳಲ್ಲಿ ಎಂದು ವಿಶ್ವದ ಅಗಾಧತೆಯನ್ನು ಆಸ್ವಾದಿಸುತ್ತಲೇ ವಿಜ್ಞಾನದ ದರ್ಶನವನ್ನು ಬೋಧಿಸಿದ ಜಿಟಿಎನ್ ಹಲವಾರು ವಿಷಯಗಳಲ್ಲಿ ಆಪ್ತರಾಗುತ್ತಾರೆ. ಮೌಢ್ಯತೆ, ಕಂದಾಚಾರ, ಅಧಿಕಾರದ ಗದ್ದುಗೆ ಹಿಡಿದಿದ್ದು ಹಾಗೂ ಇದನ್ನು ಸಾಂಸ್ಥೀಕರಣಗೊಳಿಸ ಹೊರಟಿದ್ದು ಅವರಿಗೆ ತೀವ್ರ ಕೋಪ, ಅಸಮಾಧಾನ ಮೂಡಿಸಿತ್ತು. ಜನಶಕ್ತಿಗಾಗಿ ಅವರನ್ನು ಸಂದರ್ಶಿಸಿದಾಗ ಇದನ್ನು ವ್ಯಕ್ತಪಡಿಸಿದ್ದರು ಕೂಡ. ಪ್ರಯೋಗಕ್ಕೆ ನಿಲುಕದ, ತರ್ಕಬದ್ಧವಾಗಿ ವಿವರಿಸಲಾಗದ ಎಲ್ಲವೂ ಅವಾಸ್ತವ ಅಸಂಬದ್ಧಗಳು ಎನ್ನುವುದು ಜಿಟಿಎನ್‌ರ ಪ್ರೌಢ ನಂಬಿಕೆಯಾಗಿತ್ತು. ಮನುಷ್ಯನ ಜೀವನದ ಮೇಲೆ ಗ್ರಹ ನಕ್ಷತ್ರಗಳ ಪ್ರಭಾವದ ದೃಢೀಕರಣವನ್ನು ವ್ಯಕ್ತಿಯ ದೌರ್ಬಲ್ಯವನ್ನು ಬಳಸಿ, ಅಲೌಕಿಕವಾಗಿ ನೀಡುವ ಜ್ಯೋತಿಷಿಗಳೆಂದರೆ ಅವರಿಗೆ ಕೆಂಡದಂತಹ ಕೋಪ. ಜ್ಯೋತಿಷ್ಯ ಆಮಿಷಗಳನ್ನು ಸೃಷ್ಟಿಸುತ್ತದೆ. ಆ ಮೂಲಕ ಪವಾಡದ ನಿರೀಕ್ಷೆಯಲ್ಲಿರುವ ಮನುಷ್ಯ ಪ್ರಯತ್ನ ಶೀಲನಾಗುವ ಬದಲು ಅಪಾಯಕಾರಿ ಪ್ರವೃತ್ತಿಯವನಾಗಿ ಬದಲಾಗುತ್ತಾನೆ ಎಂದು ಜಿಟಿಎನ್ ಹೇಳುತ್ತಿದ್ದರು.

ಆಕಾಶಕಾಯ ಬಗ್ಗೆ ಕುತೂಹಲಕರ ಆಸಕ್ತಿ ಇದ್ದುದರಿಂದ ಖಗೋಳಶಾಸ್ತ್ರದಲ್ಲಿ ಅವರ ಅಧ್ಯಯನಕ್ಕೆ ಪೂರಕವಾಗಿರುವ ಭೌತಶಾಸ್ತ್ರದಲ್ಲಿ ಅಪಾರ ಪಾಂಡಿತ್ಯವನ್ನು ಜಿಟಿಎನ್ ಹೊಂದಿದ್ದರು. ವಿಜ್ಞಾನ ವಿಷಯಗಳನ್ನು ಕನ್ನಡದಲ್ಲಿ ಬರೆದ ಮೊದಲ ಲೇಖಕರಲ್ಲಿ ಜಿಟಿಎನ್ ಒಬ್ಬರು. ಆದರೆ ಅವರ ಬರವಣಿಗೆ ಸಂಕೀರ್ಣವಾಗಿತ್ತು. ಭಾಷೆ ಸಾಹಿತ್ಯಕವಾಗಿಯೂ ಮೇಲ್‌ಸ್ತರದಲ್ಲಿತ್ತು. ಜನಸಾಮಾನ್ಯರ ಪರಿಭಾಷೆಗಿಂತ ಭಿನ್ನವಾಗಿ ಸಂಸ್ಕೃತ



ಜನ್ಯ ಪದಗಳ ಬಳಕೆ ಅವರ ವೈಜ್ಞಾನಿಕ ಕೃತಿಗಳಲ್ಲಿ ಕಂಡು ಬರುತ್ತವೆ. ಬಹುಶಃ ವಿಜ್ಞಾನ ಮೂಲ ಶಬ್ದಗಳು, ಗ್ರೀಕ್, ಲ್ಯಾಟಿನ್ ಭಾಷೆಗಳಿಂದ ಬಂದದ್ದರಿಂದ ಅವುಗಳ ಅನುವಾದವನ್ನು ಸರಿದೂಗಿಸಲು ಜಿಟಿಎನ್ ಹಾಗೆ ಮಾಡಿದ್ದಾರಬಹುದು.

ಜಿಟಿಎನ್ ವಿಜ್ಞಾನವನ್ನು ಜೀವಿಸಿದರೂ ಅವರ ಆಸಕ್ತಿ ಅಷ್ಟಕ್ಕೆ ಸೀಮಿತವಾಗಿರಲಿಲ್ಲ. ಕಲೆಯ ನೃತ್ಯ, ಸಂಗೀತ ಪ್ರಕಾರಗಳಲ್ಲಿ ಅವರಿಗೆ ತೀವ್ರ ಆಸ್ಥೆ. ಮೈಸೂರಿನಲ್ಲಿ ಎಲ್ಲಿಯೇ ಸಂಗೀತಗೋಷ್ಠಿಗಳಾದರೆ ಅಲ್ಲಿ ಜಿಟಿಎನ್ ಹಾಜರಾಗುತ್ತಿದ್ದರು.

ವಿಶ್ವದ ಕಲೆ, ಕೃಷ್ಣವಿಚಾರಗಳು, ಕೋಪರ್ನಿಕಸ್ ತಂತಿ, ಜಾತಕ ಮತ್ತು ಭವಿಷ್ಯ ವೈಜ್ಞಾನಿಕ ಮನೋಧರ್ಮ ಅವರ ಹಲವಾರು ಕೃತಿಗಳಲ್ಲಿ ಮುಖ್ಯವಾದವು.

ವಿಜ್ಞಾನದ ಕೃತಿಗಳನ್ನು ರಚಿಸಿ ಅವಕ್ಕೊಂದು ಅಕಾಡೆಮಿಕ್ ಸ್ವರೂಪ ನೀಡಿ ಗ್ರಂಥಾಲಯ ಸೇರಿಸುವುದು ಸುಲಭ. ಆದರೆ ಈ ಕೃತಿಗಳಾಗಲಿ ಅಥವಾ ಕೃತಿಗಳ ವಿಷಯಗಳಾಗಲಿ ಜನರ ಮಧ್ಯೆ ಚರ್ಚೆಗೊಳಗಾಗುವುದು ತೀರ ವಿರಳ. ಜಿಟಿಎನ್ ಕೂಡ ಈ ಒಂದು ಅಕಾಡೆಮಿಕ್ ಶಿಸ್ತಿಗೆ ಒಳಗಾಗಿದ್ದರೂ ಸಮಾಜದ ಮೌಢ್ಯತೆಯನ್ನು ಚರ್ಚೆ, ಸಂವಾದಗಳಲ್ಲಿ, ಜನರೊಡನೆ ಮುಖಾಮುಖಿಯಾಗುವ ವೇದಿಕೆಗಳಲ್ಲಿ ಖಡಾಖಂಡಿತವಾಗಿ ವಿರೋಧಿಸುತ್ತಿದ್ದರು. ವಿಜ್ಞಾನ ಕೇವಲ ಕಲಿಕೆಯ ವಿಷಯವಲ್ಲ. ಅದೊಂದು ಮನೋಧರ್ಮವಾಗಬೇಕು ಎನ್ನುವುದು ಜಿಟಿಎನ್‌ರ ಆಶಯವಾಗಿತ್ತು. ಬರೆದಂತೆಯೇ ಬದುಕಿದ ಜಿಎಸ್‌ಎಸ್ ತಮ್ಮ ಶವವನ್ನು ಯಾವುದೇ ಸಂಸ್ಕಾರಗಳಿಗೊಳಪಡಿಸದೆ ಜೆಎಸ್‌ಎಸ್ ವೈದ್ಯಕೀಯ ಕಾಲೇಜಿಗೆ ನೀಡಬೇಕೆಂದು ಬಯಸಿದ್ದರು. ವಿಜ್ಞಾನಕ್ಕಾಗಿ ಬದುಕಿದ್ದ ದೇಹ ಸಂಶೋಧನೆಗಾಗಿ ವಿಜ್ಞಾನಕ್ಕೆ ಮರಳಿದ್ದು ವಿಪರ್ಯಾಸವೇನಲ್ಲ. 'ಅತ್ರಿಸೂನು' ಎಂಬ ಕಾವ್ಯನಾಮದಲ್ಲಿ ಅವರು ಹಲವಾರು ವಿಷಯಗಳ ಬಗ್ಗೆ ಚತುಷ್ಪದಿಗಳನ್ನು ರಚಿಸಿದ್ದಾರೆ. ಅವರ ಒಟ್ಟು ವ್ಯಕ್ತಿತ್ವವನ್ನು ಬಿಂಬಿಸುವ ರಚನೆಯನ್ನು ಇಲ್ಲಿ ಸಾದರಪಡಿಸುವ ಮೂಲಕ ನಮ್ಮ ಶ್ರದ್ಧಾಂಜಲಿ.

ಆವಗಾಳಿಯದಾವ ಸುಸ್ವರವಧರಿಸಿಹುದೋ
ಆವ ಸುಸ್ವರದ ಮೂಲವದಾವ ಕೋಗಿಲೆಯೋ
ಜೀವನ ರಹಸ್ಯವಿದು ಶೋಧಕಂ ನೀನಾಗು
ಭಾವ ಮೂಲವನರಸಿ ಸಾಗುತಿರು ಅತ್ರಿಸೂನು

ಮುಷ್ಕರ ಏಕೆ?


ಪುಟ 5 ರಿಂದ

ಮತ್ತಿತರ ಕೃಷಿಗೆ ಬಳಸುವ ಕಚ್ಚಾ ಉತ್ಪನ್ನಗಳನ್ನು ಸಮರ್ಪಕವಾಗಿ ಪೂರೈಸ ಬೇಕೆಂದು ಒತ್ತಾಯಿಸಬೇಕಾಗಿದೆ. ಕೃಷಿ ಉತ್ಪನ್ನಗಳಿಗೆ ಬೆಂಬಲ ಬೆಲೆ ನೀಡಬೇಕು. ರೈತರು ಕಬ್ಬನ್ನು ಸರಬರಾಜು ಮಾಡಿದ ತಕ್ಷಣ ಹಣ ಪಾವತಿಸಬೇಕು ಎಂದು ಒತ್ತಾಯಿಸಲಾಗುತ್ತಿದೆ.

ನಗರ ಪ್ರದೇಶದ ಬಡವರು ಮನೆ ಕಟ್ಟಿಕೊಳ್ಳಲು ಸರ್ಕಾರ ಉಚಿತವಾಗಿ ನಿವೇಶನ ನೀಡಬೇಕು, ಅಗತ್ಯ ಮೂಲ ಸೌಕರ್ಯಗಳನ್ನು ಕಲ್ಪಸಬೇಕು, ಉಚಿತವಾಗಿ ಮತ್ತು ಕಡ್ಡಾಯವಾಗಿ ಪ್ರಾಥಮಿಕ ಶಿಕ್ಷಣ ಕಲ್ಪಿಸಬೇಕು. ಸರ್ಕಾರಿ ಶಾಲೆಗಳನ್ನು ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ವಹಿಸಬಾರದು. ಸಾರ್ವಜನಿಕ ವಿತರಣೆ ವ್ಯವಸ್ಥೆಯನ್ನು ಬಲಿಷ್ಠಗೊಳಿಸುವುದರೊಂದಿಗೆ ಪಡಿತರ ವ್ಯವಸ್ಥೆಯನ್ನು ಸಾರ್ವತ್ರೀಕರಣಗೊಳಿಸ ಬೇಕು.

ಎಲ್ಲೆಲ್ಲಿ ಸಾಧ್ಯವಾದರೆ ಅಲ್ಲೆಲ್ಲ ವಿದ್ಯಾರ್ಥಿಗಳು, ಕಾರ್ಮಿಕರು, ಯುವಜನರು, ರೈತರು, ಮಹಿಳಾ ಕಾರ್ಮಿಕರನ್ನು ಒಳಗೊಂಡಂತೆ ಸಮಿತಿ ಗಳನ್ನು ರಚಿಸುವ ಮೂಲಕ ಪ್ರತಿಭಟನೆ ಗಳನ್ನು ಯಶಸ್ವಿಗೊಳಿಸಲು ಜೆಸಿಟಿಯು ಕರೆ ನೀಡಿದೆ. ಕಲಾವಿದರು ಮತ್ತು ಇತರ ಪ್ರಜಾಸತ್ತಾತ್ಮಕ ಸಂಘಟನೆಗಳನ್ನು ಸಹ ಮುಷ್ಕರದಲ್ಲಿ ಭಾಗವಹಿಸಲು ಅಗತ್ಯ ಸಿದ್ಧತೆಗಳನ್ನು ಕೈಗೊಳ್ಳಬೇಕು. ಈ ಹಿನ್ನೆಲೆಯಲ್ಲಿ ಸಂಘಟಿ ಸಿರುವ ಜೆಸಿಟಿಯು ಸಮಾವೇಶದಲ್ಲಿ ಸಾವಿರಾರು ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕು. ಜುಲೈ 30ರಂದು ರಾಜ್ಯಾದ್ಯಂತ ರ್‍ಯಾಲಿ, ಪ್ರತಿಭಟನೆ, ಮುಷ್ಕರಗಳನ್ನು ಸಂಘಟಿಸಬೇಕು. ಹೋರಾಟ ಸಮಿತಿಗಳನ್ನು ರಚಿಸಲು ಸಿಐಟಿಯು ಮುಖಂಡರು, ಕಾರ್ಯ ಕರ್ತರು, ನಾಯಕತ್ವ ನೀಡಬೇಕು. ಎಲ್‌ಪಿಜಿ ನೀತಿಗಳನ್ನು ವಿರೋಧಿಸುವ ಕಾರ್ಮಿಕರ ಹಕ್ಕುಗಳು, ಸಾಮಾನ್ಯ ಜನರ ಜೀವನವನ್ನು ರಕ್ಷಿಸುವ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸುವ ಸಂಘಟನೆಗಳ ಬೆಂಬಲ ಪಡೆಯಬೇಕು.

ಇಂತಹ ಜಂಟಿ ಕಾರ್ಯಾಚರಣೆಗಳ ಮೂಲಕ ರಾಜ್ಯಾದ್ಯಂತ ಮುಷ್ಕರ, ಪ್ರತಿಭಟನೆ, ರ್‍ಯಾಲಿಗಳನ್ನು ನಡೆಸ ಬೇಕೆಂದು ಸಿಐಟಿಯು ಕರೆ ನೀಡಿದೆ.



ವಿಜ್ಞಾನಿಗಳ ಹಸಿವ ಹಿಂಗಿಸುತ್ತಿರುವ ಚಂದ್ರನ ಚೂರುಗಳು !

ಸುಮಾರು ನಲವತ್ತು ವರ್ಷಗಳ ಹಿಂದೆ ಅಮೇರಿಕಾದ ಬಾಹ್ಯಾಕಾಶ ಸಂಸ್ಥೆ ನಾಸಾ ಉಡಾಯಿಸಿದ್ದ 'ಅಪೋಲೋ'ಗಗನ ನೌಕೆಯು ಚಂದ್ರನ ಅಂಗಳದಿಂದ ಕೆಲವು ಮಣ್ಣಿನ ಮಾದರಿಗಳು ಮತ್ತು ಬಿಳಿ ಮತ್ತು ಕಂದು ಮಿಶ್ರಿತ ಬಂಡೆಯ ಚೂರೊಂದನ್ನು ತಂದಿತ್ತು. ಅದನ್ನು ವಿವಿಧ ಬಗೆಯ ಶೋಧನೆಗೊಳಪಡಿಸುತ್ತಿರುವ ವಿಜ್ಞಾನಿಗಳಿಗೆ ಇಂದಿಗೂ ಕೂಡ ಅದು ಹಲವು ವಿಷಯಗಳಲ್ಲಿ ಅನ್ಯಗ್ರಹಗಳ ಕುರಿತಂತೆ ರಹಸ್ಯ ವಿಚಾರಗಳನ್ನು ನಮಗೆ ತಿಳಿಸಿಕೊಡುತ್ತಾ ಬಂದಿದೆ. ಪ್ರತಿ ಸಲಕ್ಕೆ ಒಂದು ಗ್ರಾಂ ಗಿಂತಲೂ ಕಡಿಮೆ ಗಾತ್ರದ ಚೂರನ್ನು ಹೊಸ ಹೊಸ ವಿಜ್ಞಾನಿಗಳ ಮೌಲ್ಯಮಾಪನ ತಂಡಕ್ಕೆ ಸಾಲವಾಗಿ ನೀಡಿ ಅವರ ಸಂಶೋಧನಾ ವರದಿಗಳನ್ನು ಸಮೀಕರಿಸಿ ನೋಡಲಾಗುತ್ತಿದೆ. ಇದರಿಂದ ಚಂದ್ರ ರೂಪುಗೊಂಡ



ನಿರ್ದಿಷ್ಟ ಕಾಲಾವಧಿ ಯಾವುದು?, ಚಂದ್ರ ರೂಪುಗೊಂಡ ಬಗೆ ಹೇಗೆ?, ಚಂದ್ರನ ಆಕಾರ ಯಾವುದರಿಂದಾಗಿದೆ? ನಮ್ಮ ಸೌರವ್ಯೂಹದ ಉಗಮ ಮತ್ತು ವಿಕಾಸ, ಇತ್ಯಾದಿ ಪ್ರಶ್ನೆಗಳಿಗೆ ಉತ್ತರಗಳು ದೊರಕುತ್ತವೆ ಎಂಬುದು ವಿಜ್ಞಾನಿಗಳ ಆಶೆ.

ಮೂಲತಃ ಮೂರು ರೀತಿಯಲ್ಲಿ ಚಂದ್ರನ ಚೂರುಗಳು ನಮಗೆ ದೊರಕಿವೆ: ಒಂದು, ಅಮೇರಿಕಾದ ಅಪೋಲೋ ಗಗನ ನೌಕೆಯ ಗಗನ ಸಂಚಾರದಿಂದ, ಎರಡು, ಸೋವಿಯತ್ ಒಕ್ಕೂಟದ ಲ್ಯೂನಾ ಗಗನಯಾತ್ರೆಯಿಂದ, ಮೂರನೆಯದು, ಕೆಲವು ವೇಳೆ ಭೂಮಿಗೆ ಬಂದಪ್ಪಳಿಸುವ ಉಲ್ಕೆಗಳಿಂದ.



ಅದರಂತೆ, ಅದು ಚಂದ್ರನಲ್ಲಿ ರೂಪುಗೊಂಡುದು ಸುಮಾರು 450 ಕೋಟಿ ವರ್ಷಗಳ ಹಿಂದೆ, ಅಂದರೆ ಸರಿಸುಮಾರು ಅದೇ ಕಾಲಕ್ಕೆ ಚಂದ್ರ ಕೂಡ ಘನೀಕೃತಗೊಂಡು ಉಪಗ್ರಹವಾಗಿ ರೂಪುಗೊಂಡ ಕಾಲಾವಧಿಯದು. ಸೌರವ್ಯೂಹದಲ್ಲಿ ಆ ಕಾಲಾವಧಿಯಲ್ಲಿ ಯಾವುದೋ ಗ್ರಹವೋ ಉಲ್ಕೆಯೋ ಭೂಮಿಗೆ ಬಲಯುತವಾಗಿ ಬಂದಪ್ಪಳಿಸಿ ಭೂಮಿಯ ತುಣುಕೊಂದು ದೂರಹಾರಿ ಅದು ಚಂದ್ರನಾಗಿ ರೂಪುತಾಳಿತು ಎಂಬುದು ಒಂದು ಗುಂಪಿನ ವಿಜ್ಞಾನಿಗಳ ಅಂಬೋಣ.

ನೋಟ



ಡಾ. ಜಿ. ಭಾಸ್ಕರ ಮಯ್ಯ

ಪಠ್ಯಪುಸ್ತಕ ಪರಿಷ್ಕರಣೆ ಶವಪೆಟ್ಟಿಗೆಯ ಮೊದಲ ಮೊಳೆ

ಸಂಘ ಪರಿವಾರ ಅಧಿಕಾರಕ್ಕೆ ಬಂದ ತತ್‌ಕ್ಷಣ ಅದರ ಮೊದಲ ಆದ್ಯತೆ ಶಿಕ್ಷಣ ರಂಗ. ಈ ಪರಿವಾರದಲ್ಲಿ ಅಸಭ್ಯ, ಅನಾಗರೀಕ, ವಂಚಕ, ಧೂರ್ತ ಗೋಬೆಲ್ಸ್‌ಗಳೇ ಸಾಮಾನ್ಯವಾಗಿ ಶಿಕ್ಷಣ ಮಂತ್ರಿಗಳಾಗುವುದು. ಫ್ಯಾಸಿಸ್ಟ್ ಟ್ರೈನಿಂಗ್ ಮಾತ್ರ ಪಡೆದ, ಈ ವ್ಯಕ್ತಿಗಳು ಖಾತೆ ತೆರೆಯುತ್ತಲೇ ಪಠ್ಯ ಪುಸ್ತಕ ಪರಿಷ್ಕರಣೆಗೆ ತೊಡಗುತ್ತಾರೆ. ಇಂತಹ ನೀಚರ ಪಠ್ಯಪುಸ್ತಕಗಳು ಹೇಗಿರುತ್ತವೆಯೆಂಬುದನ್ನು ಪರಿಶೀಲಿಸುವ :

ಶಿಕ್ಷಣಕ್ಕೆ ಸಂಬಂಧಿಸಿದ ಇವರ ಮಾತೃ ಸಂಸ್ಥೆ ವಿದ್ಯಾಭಾರತಿ ಅಖಿಲ ಭಾರತೀಯ ಶಿಕ್ಷಾ ಸಂಸ್ಥಾನ'ವು ಅಧಿಕೃತವಾಗಿ 1978ರಲ್ಲಿ ಅಸಿತ್ವಕ್ಕೆ ಬಂದಿತು. 'ಸರಸ್ವತಿ ಶಿಶುಮಂದಿರ' ಹಾಗೂ ಅದೇ ಮಾದರಿಯ ಬೇರೆ ಬೇರೆ ಹೆಸರಿನಲ್ಲಿರುವ ಅವರ ಶಾಲೆಗಳಲ್ಲಿ ಕಲಿಸಲು ವಿವಿಧ ಬಗೆಯ ಅಧ್ಯಯನ ಸಾಮಾಗ್ರಿಗಳನ್ನು ಸಂಸ್ಥಾನವು ಒದಗಿಸುತ್ತಿರುತ್ತದೆ. ಮಧ್ಯಪ್ರದೇಶ, ಗುಜರಾತ್, ಉತ್ತರ ಪ್ರದೇಶ, ರಾಜಸ್ಥಾನಗಳಲ್ಲಿ ಇಂಥ ಶಾಲೆಗಳು ವ್ಯಾಪಕವಾಗಿವೆ. ಎರಡನೇಯ ತರಗತಿಯವರೆಗೆ ಶಾಲೆಗಳವರೇ ಪರೀಕ್ಷೆ ನಡೆಸಲು ಅನುಮತಿ ನೀಡಿದೆ. ಈ ಶಾಲೆಗಳು ಕೋಮುದ್ವೇಷವನ್ನು ಹರಡುವ ಮೂಲ ನೆಲೆಗಳು.

'ವಿದ್ಯಾಭಾರತಿ' ಯು ಹಲವು ಕಿರುಪುಸ್ತಕಗಳನ್ನು ಸಂಸ್ಕೃತಿ ಜ್ಞಾನಪರೀಕ್ಷೆ' 'ಸಂಸ್ಕೃತ ಜ್ಞಾನ ಪ್ರಶ್ನೋತ್ತರ' ಮುಂತಾದ ಹೆಸರುಗಳಲ್ಲಿ ದೊಡ್ಡ ಮಟ್ಟದಲ್ಲಿ ಪ್ರಚಾರ ಕಾರ್ಯ ಕೈಗೊಂಡಿದೆ. ಅವುಗಳನ್ನು ಮನನ ಮಾಡಿ ಕೊನೆಯಲ್ಲಿ ಅಖಿಲ ಭಾರತ ಶಿಕ್ಷಾ ಸಂಸ್ಥಾನದಿಂದ ನಡೆಸಲ್ಪಡುವ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳು ತೇರ್ಗಡೆ ಹೊಂದಬೇಕು. ಆಗ ಆತ ವಿದ್ಯಾವಾರಿಧಿ'ಯೇ ಆಗುತ್ತಾನೆ! ಅವರೇ ಹೇಳಿಕೊಂಡಂತೆ ಅವರ ಉದ್ದೇಶ ಯುವ ಪೀಳಿಗೆಗೆ ಧಾರ್ಮಿಕ, ಸಾಂಸ್ಕೃತಿಕ ಮತ್ತು ರಾಷ್ಟ್ರೀಯತೆಯ ಅರಿವು ಮೂಡಿಸುವುದೇ ಆಗಿದೆ.

ಈ ಪುಸ್ತಕಗಳಲ್ಲಿ ಅಡಕವಾಗಿರುವ ಕೆಲವು ಮಾದರಿಗಳು:

ಭಾರತದ ನಕ್ಷೆಯಲ್ಲಿ ಇವರು-ಟಿಬೆಟ್, ನೇಪಾಳ, ಭೂತಾನ್, ಶ್ರೀಲಂಕಾ, ಬ್ರಹ್ಮದೇಶ(ಮಾಯನ್ಮಾರ್) ಮೊದಲಾದ ಸ್ವತಂತ್ರ ದೇಶಗಳನ್ನು ಭಾರತ ಅಂಗವಾಗಿ ತೋರಿಸಿದೆ.

ಈ ಪುಸ್ತಕದಲ್ಲಿ ಶ್ರೀಲಂಕಾದ ಬಗೆಗಿನ ಒಂದು ಪ್ರಶ್ನೆ ಹೀಗಿದೆ:'ಭಾರತ ಮಾತೆಯ ಕಾಲುಗಳನ್ನು ಮುಟ್ಟುವ, ಒಂದು ಕಾಲದಲ್ಲಿ ರಾವಣನ ಮೇಲೆ ವಿಜಯ ಸಾಧಿಸಿದ. ದಕ್ಷಿಣದಲ್ಲಿರುವ ದ್ವೀಪ ಯಾವುದು?'

ಈ ಪುಸ್ತಕಗಳಲ್ಲಿ ಅರಬೀ ಸಮುದ್ರವನ್ನು 'ಸಿಂಧೂ ಸಮುದ್ರ'ವೆಂದು ಕರೆಯಲಾಗಿದೆ. ಅಂತೆಯೇ ಬಂಗಾಳಕೊಲ್ಲಿ 'ಗಂಗಾಸಾಗರ'. ಇವರ ಪ್ರಕಾರ ಈ ಪುಣ್ಯಭೂಮಿ ಭಾರತವು ಪ್ರಪಂಚದ ನಾಗರೀಕತೆಯ ತವರು ಮನೆ. ಇಡೀ ಪ್ರಪಂಚದ ಜನರು ಬಟ್ಟೆ ಬರೆಯಿಲ್ಲದೆ, ಮರದ ತೊಗಟೆ ಅಥವಾ ಪ್ರಾಣಿಗಳ ಚರ್ಮಗಳನ್ನು ತೊಡುತ್ತಿದ್ದ ಕಾಲದಲ್ಲಿ ಭಾರತದ ಋಷಿ ಮುನಿಗಳು ಆ ಎಲ್ಲಾ ದೇಶದ ಜನರಿಗೆ ನಾಗರಿಕತೆಯ ಬೆಳಕಿನಲ್ಲಿ ನೀಡಿದರು.

'ಆರ್ಯತ್ವದ ಬೆಳಕನ್ನನು ಪ್ರಚಾರ ಮಾಡಿದ ಋಷಿ ಮುನಿಗಳು' ಎಂಬ ಶೀರ್ಷಿಕೆಯ ಕೆಳಗೆ ಈ ಸಂಗತಿಗಳಿವೆ:

1. ಚೀನಾ ದೇಶಕ್ಕೆ ನಾಗರೀಕತೆಯ ಬೆಳಕನ್ನು ಕೊಟ್ಟವರು: ಭಾರತೀಯರು

2. ಪ್ರಾಚೀನ ಚೀನಾಕ್ಕೆ ಭಾರತವು ತಾಯಿ ಮನೆ. ಅಲ್ಲಿಯ ಪೂರ್ವಜರೆಲ್ಲಾ ಭಾರತದ ಕ್ಷತ್ರಿಯರು.

3. ಚೀನಾದಲ್ಲಿ ವಾಸಿಸಲು ತೊಡಗಿದ ಪ್ರಪ್ರಥಮ ಜನರು ಭಾರತೀಯರು. ಆರ್ಯರ ಪ್ರಸಿದ್ಧಿಗೆ ಕಾರಣವಾದ ವಾಲ್ಮೀಕಿ ರಾಮಾಯಣವು ಗ್ರೀಕ್ ದೇಶವನ್ನು ಪ್ರಭಾವಿಸಿತ್ತಲ್ಲದೆ, ಆ ಪ್ರಭಾವದಿಂದಲೇ ಹೋಮರನ್ನು 'ಇಲಿಯಥ್' ಅನ್ನು ರಚಿಸಿದ.

ಉತ್ತರ ಅಮೇರಿಕಾದ ರೆಡ್ ಇಂಡಿಯನ್ನರ ಭಾಷೆಗಳು ಮೂಲತಃ ಭಾರತೀಯ ಮೂಲದ್ದು. ಕೆಲವು ಪ್ರಶ್ನೋತ್ತರಗಳನ್ನು ನೋಡಿ.

ಪ್ರ: ರಾಮನ ಜನ್ಮಸ್ಥಾನದಲ್ಲಿ ಯಾರು ಮೊದಲಿಗೆ ದೇವಾಲಯವನ್ನು ನಿರ್ಮಿಸಿದರು?

ಉ: ಶ್ರೀರಾಮನ ಮಗ ಕುಶ

ಪ್ರ: ರಾಮಮಂದಿರವನ್ನು ನಾಶಮಾಡಿದ ಮೊದಲ ವಿದೇಶಿ ಆಕ್ರಮಣಕಾರ ಯಾರು?

ಉ: ಗ್ರೀಸಿನ ಮೀನಾಂಡರ್ (150 ಕ್ರಿ.ಪೂ)

ಪ್ರ: ಇಂದಿರುವ ರಾಮಮಂದಿರವನ್ನು ಕಟ್ಟಿದವರಾರು?

ಉ: ಮಹಾರಾಜ ಚಂದ್ರಗುಪ್ತ ವಿಕ್ರಮಾದಿತ್ಯ (ಕ್ರಿ.ಶ.380-413)

ಪ್ರ: 1033 ರಲ್ಲಿ ಯಾವ ಮುಸ್ಲಿಂ ಆಕ್ರಮಣಕಾರಿ ದೇವಾಲಯಗಳನ್ನು ಸರ್ವ ನಾಶ ಮಾಡಿದ?

ಉ: ಮಹಮ್ಮದ್ ಘಜನಿ

ಪ್ರ: 1838 ರಲ್ಲಿ ರಾಮಮಂದಿರವನ್ನು ನಾಶ ಮಾಡಿದ ಮುಸ್ಲಿಂ ಯಾರು?

ಉ: ಬಾಬರ್

ಪ್ರ: ಏಕೆ ಬಾಬರಿ ಮಸೀದಿ ಒಂದು ಮಸೀದಿ ಅಲ್ಲ?

ಉ: ಇಂದು ತನಕ ಅಲ್ಲಿ ನಮಾಜ್ ನಡೆದಿಲ್ಲ.

ಪ್ರ: 1528 ರಿಂದ1914 ರ ತನಕ ರಾಮಮಂದಿರ ಮುಕ್ತಿ ಆಂದೋಲನಕ್ಕೆ ಎಷ್ಟು ಜನ ಪ್ರಾಣ ತೆತ್ತರು?

ಉ: ಮೂರು ಲಕ್ಷ ಐವತ್ತು ಸಾವಿರ ಜನರು

ಪ್ರ: ರಾಮಜನ್ಮಭೂಮಿಯನ್ನು ಎಷ್ಟು ಬಾರಿ ವಿದೇಶಿಯರು ಆಕ್ರಮಣ ಮಾಡಿದರು?

ಉ: ಎಪ್ಪತ್ತೇಳು ಬಾರಿ

ಪ್ರ: ಶ್ರೀರಾಮ ಕರ ಸೇವಾ ಸಮಿತಿಯ ಎಂದು ಕರ ಸೇವೆ ಮಾಡುವ ನಿರ್ಣಯ ಮಾಡಿತು?

ಉ: 1990 ಅಕ್ಟೋಬರ್ 30

ಪ್ರ: 1990 ನವೆಂಬರ್ 2 ರ ದಿನಾಂಕವನ್ನು ನಾವು ನಮ್ಮ ಇತಿಹಾಸದಲ್ಲಿ ಏಕೆ ಕರಾಳ ದಿನವನ್ನಾಗಿ ಆಚರಿಸಬೇಕು?

ಉ: ಏಕೆಂದರೆ, ಅಲ್ಲಿನ ಮುಖ್ಯಮಂತ್ರಿ ಕರ ಸೇವಕರ ಮೇಲೆ ಗುಂಡು ಹೊಡೆಯಲು ಪೋಲೀಸರಿಗೆ ಆಜ್ಞಾಪಿಸಿದ್ದ. ಇದರಿಂದ ನೂರಾರು ಕರ ಸೇವಕರು ಹುತಾತ್ಮರಾದರು.

ಪ್ರ: ಶ್ರೀ ರಾಮಜನ್ಮಭೂಮಿಗೆ ಯಾವಾಗ ಶಿಲಾನ್ಯಾಸ ಮಾಡಲಾಯಿತು?

ಉ: 1, ನವೆಂಬರ್ 1989

ಪ್ರ: ರಾಮಜನ್ಮ ಭೂಮಿಯನ್ನು ಮುಕ್ತಿಗೊಳಿಸಲು ಈ ತನಕ ಎಷ್ಟು ಹೋರಾಟಗಳು ನಡೆದಿವೆ?

ಉ: ಎಪ್ಪತ್ತೆಂಟು ಹೋರಾಟಗಳು. ಇದರೊಂದಿಗೆ ಕೆಲವು ಪ್ರಶ್ನೆಗಳಲ್ಲಿ ಉತ್ತರದೊಂದಿಗೆ ಕೊಡಲಾಗಿದೆ. ಉದಾ: 'ಯಾವಾಗ ರಾಮಭಕ್ತ ಕರಸೇವಕರು ರಾಮಜನ್ಮ ಭೂಮಿಯಲ್ಲಿ ಕೇಸರಿ(ಭಗವಾ) ಧ್ವಜವನ್ನು ಹಾರಿಸಿದರು'?

'ಭಗವಾ ಧ್ವಜವನ್ನು ಹಾರಿಸುವಾಗ ಪ್ರಾಣ ಕಳೆದುಕೊಂಡ ಇಬ್ಬರು ಯುವಕರನ್ನು ಹೆಸರಿಸಿ?

ಇಸ್ಲಾಂ ಕುರಿತಾಗಿ ಒಂದು ಹೇಳಿಕೆ ಹೀಗಿದೆ:

"ಮೂರ್ತಿ ಭಂಜಕರಾದ ಸಹಸ್ರಾರು ಮುಸ್ಲಿಮರು ಪ್ರತಿವರ್ಷ ಕಾಬಾಕ್ಕೆ ತೀರ್ಥಯಾತ್ರೆ ಮಾಡಿ ಅಲ್ಲಿನ ಮುಸ್ಲಿಂ ಸಾಮಾಜಿಕ ಜೀವನದ ಮಹೋನ್ನತ ಗುರಿಯೆಂದರೆ ಕಾಬಾದ ಕರಿಕಲ್ಲಿನ (ಶಿವಲಿಂಗದ ದರ್ಶನವನ್ನು ಪಡೆಯುವುದು)

ಬಿಟ್ಟ ಸ್ಥಳಗಳನ್ನು ತುಂಬಿರಿ ಎಂಬ ಪ್ರಶ್ನಾವಳಿಯಲ್ಲಿ ರಕ್ತದ ನದಿಗಳು ಎಂದರೆ.... (ಪ್ರವಾದಿ ಮಹಮ್ಮದ್ ಹರಡಿದ ಇಸ್ಲಾಂ ಧರ್ಮ)

ಈ ಸಂಸ್ಥೆಯ ಪುಸ್ತಕಗಳ ಪ್ರಕಾರ ಭಗವಾನ್ ರಾಮ ಅಥವಾ ಕೃಷ್ಣನ ಅವತಾರಗಳು ಆಗಾಗ್ಗೆ ಭಾರತೀಯ ಸಂಸ್ಕೃತಿಗೆ ಕೊನೆಗಾಣಿಸಲು ಅದೇ ಶಕ್ತಿ 'ಆರ್‌ಎಸ್‌ಎಸ್' ರೂಪದಲ್ಲಿ ಜನ್ಮವೆತ್ತಿದೆ.

ಪಠ್ಯಪುಸ್ತಕ ಪರಿಷ್ಕರಣೆಯೆಂದರೆ ಇಂಥ ಮಹಾನ್ ಸತ್ಯಗಳನ್ನು ಶಿಕ್ಷಣದಲ್ಲಿ ಅಳವಡಿಸುವುದು. ಮಿಸ್ಟರ್ ಹಿಟ್ಲರ್ ಉರುಫ್ ನಾಥೂರಾಮ್ ಮೋದಿಯ ರಾಜ್ಯದ ಪಠ್ಯ ಪುಸ್ತಕಗಳಲ್ಲಿ ರಾಷ್ಟ್ರಪಿತ ಮಹಾತ್ಮಗಾಂಧಿ ಓರ್ವ ದುರಾತ್ಮ; ರಾಕ್ಷಸ. ಆದರೆ ನಾಥೂರಾಮ್ ಗೋಡ್ಸೆ ಓರ್ವ ನಿಜವಾದ ಮಹಾತ್ಮ!!

ಕೊನೆಯಲ್ಲಿ ಒಂದು ಮಾತು. ಫ್ಯಾಸಿಸ್ಟ್‌ರು ಬಿಟ್ಟ ಬ್ರಹ್ಮಾಸ್ತ್ರ ಕೊನೆಯಲ್ಲಿ ತಿರುಗಿ ಬಂದು ಅವರನ್ನೇ ಸುಟ್ಟು ಬೂದಿ ಮಾಡುವುದು ಇತಿಹಾಸದ ಅನಿವಾರ್ಯ ಸತ್ಯ.

'ಪಕ್ಷಾಂತರಿಗಳಿಗೆ ತಕ್ಕ ಪಾಠ ಕಲಿಸಿ'

ಬಿಜೆಪಿ ಮತ್ತು ಸಂಘ ಪರಿವಾರದವರು ಯೋಜನಾಬದ್ಧವಾಗಿ ಮಾಡುತ್ತಿರುವ ಕ್ರಮ ಇದಾಗಿದೆ. ಪ್ರಜಾಪ್ರಭುತ್ವ ಯಶಸ್ವಿಯಾಗಬೇಕಾದರೆ ಆಡಳಿತ ಪಕ್ಷದಷ್ಟೇ ಸಮರ್ಥವಾದ ವಿರೋಧ ಪಕ್ಷ ಇರಬೇಕು.

'ಶಾಸಕರ ಪಕ್ಷಾಂತರದ ಹಿಂದೆ ಭೂ ಮಾಫಿಯಾ, ಗಣಿ ಮಾಫಿಯಾ ಕೆಲಸ ಮಾಡುತ್ತಿದೆ, ಗೆದ್ದು ಬಂದ 40 ದಿನಗಳಲ್ಲಿ ರಾಜೀನಾಮೇ ನೀಡುವ ಮೂಲಕ ಮತದಾರರಿಗೆ ವಂಚನೆ, ಮೋಸ ಮಾಡಿದ್ದಲ್ಲದೆ, ಜಾತಿ ಮತ್ತು ಹಣಬಲದ ಅಹಂಕಾರದಿಂದಾಗಿ ಮತ್ತೆ ಗೆಲ್ಲುವುದಾಗಿ ಹೇಳುತ್ತಿದ್ದಾರೆ' ಎಂದು ಮಾಜಿ ಶಾಸಕ ವಿ.ಶ್ರೀರಾಮರೆಡ್ಡಿ ಟೀಕಿಸಿದರು.

ಸಿಪಿಐ(ಎಂ) ಗುರುವಾರ ಇಲ್ಲಿ ಏರ್ಪಡಿಸಿದ್ದ ಶಾಸಕರ ಬೇಟೆ ಮತ್ತು ಪ್ರಜಾಪ್ರಭುತ್ವದ ಮೌಲ್ಯಗಳು' ಕುರಿತ ದುಂಡು ಮೇಜಿನ ಸಭೆಯಲ್ಲಿ ಮಾತನಾಡಿದ ಅವರು, 'ಬಿಜೆಪಿ ನೈತಿಕ ಮೌಲ್ಯಗಳ ಪತನಕ್ಕೆ ಕೊಡಲಿ ಪೆಟ್ಟು ನೀಡಿದೆ. ಪ್ರಜಾಪ್ರಭುತ್ವದಲ್ಲಿ ಎಂದೂ ಕಂಡರಿಯದ ಬೆಳವಣಿಗೆಗಳು ನಡೆಯುತ್ತಿವೆ. ಕೆಟ್ಟ ಸಂಪ್ರದಾಯವನ್ನು ಹುಟ್ಟು ಹಾಕಿದೆ' ಎಂದು ಆರೋಪಿಸಿದರು.

ಬಿಜೆಪಿ ಮತ್ತು ಸಂಘ ಪರಿವಾರದವರು ಯೋಜನಾಬದ್ಧವಾಗಿ ಮಾಡುತ್ತಿರುವ ಕ್ರಮ ಇದಾಗಿದೆ. ಪ್ರಜಾಪ್ರಭುತ್ವ ಯಶಸ್ವಿಯಾಗಬೇಕಾದರೆ ಆಡಳಿತ ಪಕ್ಷದಷ್ಟೇ ಸಮರ್ಥವಾದ ವಿರೋಧ ಪಕ್ಷ ಇರಬೇಕು. ಸ್ವಂತ ಅಭಿವೃದ್ಧಿಗಾಗಿ ಪಕ್ಷಾಂತರ ಮಾಡುತ್ತಿದ್ದಾರೆಯೇ ಹೊರತು, ಕ್ಷೇತ್ರದ ಅಭಿವೃದ್ಧಿಗಾಗಿ ಅಲ್ಲ ಎಂದು ಟೀಕಿಸಿದರು.

ಬಿಜೆಪಿ ತನಗೆ ಅಂಟಿರುವ ಅಸ್ಪೃಶ್ಯತೆಯ ಕಳಂಕದಿಂದ ಹೊರ ಬಂದು ಕೇಂದ್ರದಲ್ಲಿ ಪೂರ್ಣ ಬಹುಮತ ಪಡೆಯಬೇಕು ಎಂಬ ದೃಷ್ಟಿಯಿಂದ ಪಕ್ಷಾಂತರಕ್ಕೆ ಮುಂದಾಗಿದೆ. ವಿರೋಧಪಕ್ಷಗಳಿಗೆ ಮತ ಹಾಕಬಾರದು ಎಂಬುದು ಅಪಾಯಕಾರಿ ಸಂಕೇತ ಎಂದು ಅಭಿಪ್ರಾಯಪಟ್ಟರು.

ಮತದಾರರು ಮತ್ತು ಚುನಾಯಿತ ಪ್ರತಿನಿಧಿಗಳ ನಡುವಿನ ಸಂಬಂಧ ವ್ಯಾಪಾರವಾಗಿ ಪರಿವರ್ತನೆಯಾಗಿದೆ. ನೈತಿಕತೆ ಮಾಯವಾಗಿದ್ದು, ಅಧಿಕಾರ ಪರವಾದ ರಾಜಕೀಯ ಧ್ರುವೀಕರಣವಾಗುತ್ತಿದೆ. ಹಣ ಪಡೆದು ಪಕ್ಷಾಂತರ ಮಾಡಿರುವಂತಹವರಿಗೆ ಜನತೆ ತಕ್ಕ ಪಾಠ ಕಲಿಸಬೇಕು ಎಂದು ಸಿಪಿಐ ಮುಖಂಡ ಸಿದ್ದನಗೌಡ ಪಾಟೀಲ ಕರೆ ನೀಡಿದರು.

ಜನರು ಆಯಾ ಪಕ್ಷಗಳಿಗೆ ನೀಡುವ ಶೇಕಡಾವಾರು ಮತಗಳಿಗೆ ಅನುಗುಣವಾಗಿ ಶಾಸಕರ ಸ್ಥಾನಗಳು ಸಿಗಬೇಕು. ಆಗ ಪಕ್ಷಾಂತರಕ್ಕೆ ಅವಕಾಶ ಇರುವುದಿಲ್ಲ. ಅಪಮೌಲ್ಯ ತಪ್ಪಿಸಲು ಸಾಧ್ಯವಾಗುತ್ತದೆ ಎಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ವಿ.ಜೆ.ಕೆ.ನಾಯರ್ ಮತ್ತು ಸದಸ್ಯ ಜಿ.ಎನ್.ನಾಗರಾಜ್ ಅಭಿಪ್ರಾಯಪಟ್ಟರು.

ಚುನಾಯಿಸಿದವರನ್ನು ವಾಪಸ್ ಕರೆಸಿಕೊಳ್ಳುವ ಅಧಿಕಾರವನ್ನು ಮತದಾರರಿಗೆ ನೀಡಬೇಕು. ರಾಜಕೀಯವು ಭೂ ದಂಧೆಯ ಮಟ್ಟಕ್ಕೆ ಇಳಿದಿದೆ. ಪ್ರಜಾಪ್ರಭುತ್ವದ ಬೇರುಗಳನ್ನು ಕತ್ತರಿಸುವ ಹುನ್ನಾರ ನಡೆದಿದೆ ಎಂದು ಟೀಕಿಸಿದರು.

ಲೋಕಸಭೆಯ 28 ಸ್ಥಾನಗಳನ್ನು ಗೆಲ್ಲಬೇಕು ಎಂಬ ದೃಷ್ಟಿಯಿಂದ ಸೋತವರು, ಗೆದ್ದವರನ್ನು ಸೆಳೆಯಲು ಬಿಜೆಪಿ ತಂತ್ರ ಹೂಡಿದೆ. ನೈತಿಕ ಅಧಃಪತನವಾಗಿದ್ದು, ಬೇರೆಯವರಿಗೂ ನಮಗೂ ವ್ಯತ್ಯಾಸವಿಲ್ಲ ಎಂಬುದನ್ನು ಬಿಜೆಪಿ ತೋರಿಸಿಕೊಟ್ಟಿದೆ ಎಂದು ಕರ್ನಾಟಕ ಪ್ರಾಂತ ರೈತ ಸಂಘದ ಅಧ್ಯಕ್ಷ ಮಾರುತಿ ಮಾನ್ಪಡೆ ಟೀಕಿಸಿದರು. ಫಾರ್ವರ್ಡ್ ಬ್ಲಾಕ್‌ನ ಸಂಘಟನಾ ಕಾರ್ಯದರ್ಶಿ ಕೆ.ಸಿ.ವೆಂಕಟೇಶ್ ಮಾತನಾಡಿದರು.



■ ನಾಕುಲ

ನಿರಾಸೆ ಮೂಡಿಸಿದ 'ಮಿಂಚಿನ ಓಟ'

ಟಿ.ವಿ. ಮಾಧ್ಯಮಗಳಲ್ಲಿ ಭಾರಿ ಪ್ರಚಾರದಿಂದ ಕುತೂಹಲ ಹುಟ್ಟಿಸಿದ್ದ 'ಮಿಂಚಿನ ಓಟ' ತೀವ್ರ ನಿರಾಸೆ ಮೂಡಿಸಿದೆ. ಶಂಕರ್‌ನಾಗ್ ನಿರ್ದೇಶನದ ಹಳೆಯ 'ಮಿಂಚಿನ ಓಟ' ವನ್ನು ನೆನಪಿಗೆ ತಂದರೂ ಆ ಚಿತ್ರಕ್ಕೂ, ಈ ಚಿತ್ರಕ್ಕೂ ಯಾವುದೇ ಸಾಮ್ಯತೆಯಿಲ್ಲ. ಅದರಲ್ಲಿ ಅನಂತನಾಗ್-ಶಂಕರನಾಗ್, ಇದರಲ್ಲಿ ವಿಜಯ್‌ರಾಘವೇಂದ್ರ-ಶ್ರೀಮುರುಳಿ ಸಹೋದರರಿಬ್ಬರೂ ಒಟ್ಟಾಗಿ ಅಭಿನಯಿಸಿದ್ದಾರೆಂಬುದಷ್ಟೇ ಸಾಮ್ಯತೆ.

ತಮ್ಮ ಮೊದಲ ಚಿತ್ರ 'ಸೈನಡ್'ನ ವಿಭಿನ್ನ ನಿರೂಪಣೆಯಿಂದ ಗಮನ ಸೆಳೆದಿದ್ದ ರಮೇಶ್ ಸಹಜವಾಗಿಯೇ ಕುತೂಹಲ ಕೆರಳಿಸಿದ್ದರು. ಜೊತೆಗೆ ಶಂಕರ್‌ನಾಗ್‌ರ 'ಮಿಂಚಿನ ಓಟ'ದ ಹೆಸರನ್ನೇ ಬಳಸಿಕೊಂಡಿದ್ದು, ಅದರೊಂದಿಗೆ ಈ ಚಿತ್ರವನ್ನು ತುಲನೆ ಮಾಡಿ ನೋಡುವ ಆಸಕ್ತಿಯನ್ನು ಪ್ರೇಕ್ಷಕರಲ್ಲಿ ಕೆರಳಿಸಿತ್ತು ಈ ಚಿತ್ರ.

ಸಾಮಾನ್ಯ ಪ್ರೇಮಕಥೆಯೊನ್ನೊಂದಿರುವ 'ಮಿಂಚಿನ ಓಟ' ತಾರ್ಕಿಕ ಆದಿ-ಅಂತ್ಯಗಳಿಲ್ಲದೆ ಪೇಲವವಾಗಿದೆ. ಕಥೆಯನ್ನು ಮುಂದುವರಿಸಲು ದಾರಿಕಾಣದೆ ಅಥವಾ ನಿರ್ದೇಶಕರು ತಮ್ಮ ತಾಂತ್ರಿಕ ಪರಿಣಿತಿಯ ಪ್ರದರ್ಶನಕ್ಕಾಗಿ ಚಿತ್ರದ ಮುಕ್ಕಾಲು ಭಾಗ ಅಳವಡಿಸಿಕೊಂಡಿರುವ 'ಚೇಸಿಂಗ್' ದೃಶ್ಯಗಳು ಚಿತ್ರಕ್ಕೆ ಪೂರಕವಾಗಿ ನಿಲ್ಲುವುದೇ ಇಲ್ಲ. ಅದೂ ಕೂಡಾ ನಿರ್ದೇಶಕ ರಮೇಶ್ ಮತ್ತು ನಿರ್ಮಾಪಕರಾದ ಸಾ.ರ.ಗೋವಿಂದು ಅವರು ಹೇಳಿಕೊಂಡಿರುವಷ್ಟು ಅದ್ಭುತವಾಗೇನೂ ಇಲ್ಲ.

ಭದ್ರ (ಶ್ರೀಮುರುಳಿ) ಸ್ಲಂನಲ್ಲಿ ವಾಸಿಸುವ ಒಬ್ಬ ಯುವಕ. ಅವನದೊಂದು ಪಟಾಲಂ. ವಿಜಯ್(ವಿಜಯ್ ರಾಘವೇಂದ್ರ) ಸ್ಲಂ ಎದುರಿನ ಅಪಾರ್ಟ್‌ಮೆಂಟ್ ವಾಸಿ. ಅವನದೊಂದು ಪಟಾಲಂ. ಎರಡೂ ತಂಡಗಳಿಗೂ ಬದ್ಧವೈರತ್ವ - ಇವರ ರಂಪಾಟಗಳೇ ಚಿತ್ರಕ್ಕೆ ಒಂದಿಷ್ಟು ಉಸಿರು. ನಂತರ ನಾಯಕಿಯ(ಲಕ್ಷ್ಮಿ ರೈ) ಆಗಮನ, ಅವಳೋ ಮಂಗಳೂರಿನ ಭೂಗತ ದೊರೆಯ (ಸುಮನ್) ತಂಗಿ. ವಿಜಯ್‌ಗೆ ಅವಳ ಮೇಲೆ ಆಸೆ, ಆಕೆಗೆ ಭದ್ರನ ಮೇಲೆ ಪ್ರೀತಿ. ಈ ಪ್ರೀತಿಯ ಹುಟ್ಟಿಗೆ ಯಾವ ಕಾರಣಗಳೂ ಇಲ್ಲ! ಎಲ್ಲಾ ಹಾಗೇ ಸುಮ್ಮನೆ!!

ವಿಜಯ್ ನಾಯಕಿಯ ಅಣ್ಣನಿಗೆ ಸುದ್ದಿ ಮುಟ್ಟಿಸುತ್ತಾನೆ. ಸರಿ ಭದ್ರ ಹಣ್ಣುಗಾಯಿ ನೀರುಗಾಯಿ, ನಾಯಕಿ ಬೆಂಗಳೂರಿನಿಂದ ಮಂಗಳೂರಿಗೆ ಶಿಫ್ಟ್. ಆದರೆ ಭದ್ರನಿಗೆ ಪಡೆದೇ ತೀರುವೆನೆಂಬ ನಂಬಿಕೆ. ಅಷ್ಟರಲ್ಲಿ ವಿಜಯ್‌ಗೂ ಪಶ್ಚಾತ್ತಾಪ! ಸರಿ ಇಬ್ಬರೂ ಕಾರಿನಲ್ಲಿ ಹೊರಡುತ್ತಾರೆ



ಮಂಗಳೂರಿಗೆ. ಭೂಗತ ದೊರೆಯ ಬಲಗೈ ಭಂಟ (ರಾಹುಲ್ ದೇವ್) ಯಮಧೂತನಾಗಿ ಟ್ರಕ್‌ನಲ್ಲಿ ಇವರ ಹಿಂದೆ ಬೀಳುತ್ತಾನೆ. ಬೆಂಗಳೂರು-ಮಂಗಳೂರು ಹೆದ್ದಾರಿಯಲ್ಲಿನ ಇವರ ಚೇಸಿಂಗ್ ದೃಶ್ಯಗಳಲ್ಲಿ ಕೆಲವು ನಿಜಕ್ಕೂ ರೋಮಾಂಚನಕಾರಿ!. ಆದರೆ ನಿರ್ದೇಶಕರು ಬಡಾಯಿ ಕೊಚ್ಚಿಕೊಂಡಷ್ಟು ಪರಮಾದ್ಭುತವೇನಲ್ಲ!

ಯಮಧೂತನನ್ನು ಯಮಲೋಕಕ್ಕೆ ಅಟ್ಟಿ ಭೂಗತ ದೊರೆಯ ಅಡ್ಡಗೆ ಅಡ್ಡ ಹಾಕಿದ ಗೆಳೆಯರಿಬ್ಬರನ್ನು ಕಂಡು ದೊರೆಗೆ ಶಾಕ್! ಯಾವ ದಾಂಧಲೆಗೂ ಆಸ್ಪದವಿಲ್ಲ! (ಸಾಹಸ ಪ್ರಿಯರಿಗೆ ಖಂಡಿತವಾಗಿಯೂ ಭಾರಿ ನಿರಾಸೆ) ಕಮಕ್‌ಕಿಮಕ್ ಎನ್ನದೆ, ತಂಗಿಯನ್ನಲ್ಲದೇ ತನ್ನ ಕಾರನ್ನೂ ಕೊಟ್ಟು ಬೆಂಗಳೂರಿಗೆ ಕಳುಹಿಸುವುದರೊಂದಿಗೆ ಚಿತ್ರದ ನೀರಸ ಅಂತ್ಯ!

ಇಷ್ಟರ ಮಧ್ಯೆ ಭದ್ರನ ತಂದೆ-ತಾಯಿಯಾಗಿ ರಂಗಾಯಣದ ರಘು ಮತ್ತು ಉಮಾಶ್ರೀಯವರ ಮಿತಿಮೀರಿದ ಅಭಿನಯ (Over Acting) ವನ್ನು ಸಹಿಸಿಕೊಳ್ಳುವುದು ಅನಿವಾರ್ಯ. ಮುಖ್ಯಮಂತ್ರಿ ಚಂದ್ರು ವಿಜಯ್‌ನ ತಂದೆಯಾಗಿ ಬಂದು ಮುಖ ತೋರಿಸಿ ಹೋಗುತ್ತಾರೆ.

ಇನ್ನುಳಿದಂತೆ ಸಾಹಸ ನಿರ್ದೇಶಕರಾಗಿ ಜಾಲಿ ಬಾಸ್ಟಿನ್, ಛಾಯಗ್ರಾಹಕ ಪಿ.ರಾಜನ್ ಗಮನ ಸೆಳೆಯುತ್ತಾರೆ. ವಿ.ಮನೋಹರ್ ಸಂಗಿತದಲ್ಲಿ ಒಂದು ಹಾಡು ಗುನುಗುವಂತಿದ್ದರೂ, ಅದನ್ನು ಈಗಾಗಲೇ ಎಲ್ಲೋ ಕೇಳಿದಂತಿದೆ.

ಈ ಚಿತ್ರ ಹಾಲಿವುಡ್‌ನ ಖ್ಯಾತ ನಿರ್ದೇಶಕ ಸ್ಟೀವನ್. ಸ್ಪಿಲ್‌ಬರ್ಗ್‌ರ ಖ್ಯಾತ ಟೆಲಿಚಿತ್ರ ಡ್ಯುಯಲ್ (Duel - 1971) ರಿಂದ ಪ್ರೇರಣೆ ಪಡೆದ ಚಿತ್ರವಂತೆ.

ಆದರೆ ಎಂ.ಆರ್. ರಮೇಶ್ ಸಾಕಷ್ಟು ಮನರಂಜನೆಯ ಹೆಸರಿನ ಸರಕುಗಳನ್ನು ಸೇರಿಸಿ ಚಿತ್ರವನ್ನು ಗಬ್ಬೆಬ್ಬಿಸಿದ್ದಾರೆ. ಅವರ ಬಗ್ಗೆ ಇದ್ದ ಸಾಕಷ್ಟು ನಿರೀಕ್ಷೆ ಹುಸಿಯಾಗಿದೆ. ○

ಕವನ

ಸಾವಿನ ಮನೆಯಂಗಳದಲ್ಲಿ...

ಮೊನ್ನೆ .... ಊರಿಗೆ ಊರೇ
ಮೌನಕೆ ಶರಣಾದ ವೇಳೆ
ಧೋ.......... ಎಂದು ಸುರಿದ ಮಳೆ
ಇನ್ನೇನು ಕನಸುಗಳು ಮೊಳಕೆಯೊಡೆಯಬೇಕು
ಊರ ಮುಂದಿನ ಕಪ್ಪು ನೆಲದಲ್ಲಿ
ಬೆಳೆದಂತೆ ಬೆಳ್ಳಂಬೆಳ್ಳ ಬೆಳಕು
ಕೆಂಪು ಮಸಾರಿಯ ಹೊಲದ ತುಂಬಾ
ತುಂಬಿ ತುಳುಕಿದಂತೆ ಸೂರ್ಯಕಾಂತಿ.

ಅಪ್ಪ ಬಿತ್ತಿದರೆ ಸಾಕು ಹೊಸ ಬೀಜ
ಮೊಳಕೆಯೊಡೆದೀತು ಹೊಸ ಬದುಕು!
ಖಾಲಿಯಾದರೆ ಸಾಕು ಗೊಬ್ಬರ ಚೀಲ
ಹೊಲಿಸಿದರಾಯಿತು ಪಾಟೀ ಚೀಲ!!
ಕಾತರಿಸಿ ಕುಳಿತ ಮಗನ
ಕಣ್ಣ ತುಂಬಾ ಅಕ್ಕರದ ಕನಸು.

ಮೊನ್ನೆ : ಹೀಗೆ ....
ಸುರಿದದ್ದು ಬರೀ ಮಳೆಯಲ್ಲವೆಂದು
ಬೇರೆ ಹೇಳಬೇಕಿಲ್ಲ ನಿಮಗೆ,

ನಿನ್ನೆ................
ಗಳಿ ಹೊಡೆದು ಸೋತು
ಕುಳಿತ ಅಪ್ಪನಂತೆ
ಮಳೆ....................
ಮೌನಕೆ ಶರಣಾದ ವೇಳೆ
ಭುವಿಗೆ
ಬಾನು 'ಥೂ' ಬಿಟ್ಟ ವೇಳೆ,
....
ಕನಸುಗಳ ಗಂಟುಕಟ್ಟಿ
ಯಾರೋ ಅಂಗಡಿಯಲಿ
ಮಾರುವರಂತೆ............
ಬೀಜ ಗೊಬ್ಬರದ ಕನಸಿನಲಿ
ಹೊಸ ಬದುಕಿನ ಸರತಿಯಲಿ....
ತೂರಿ ಬಂದು
ಎದೆ ಸೇರಿದ ಗುಂಡು

ಅನ್ನ ಉಂಡ ಕೈಗಳದ್ದು
ಅಲ್ಲವೆಂದು
ಹೇಗೆ ಹೇಳಲಿ ನಾನು......?
ಎಷ್ಟೊಂದು ಹೇಗೆ ಹೇಳಲಿ
ನೆಲಕಂಡ ಕನಸುಗಳು.....
ಎಣಿಸಲಾದೀತೆ.....
ಅಪ್ಪನೆದೆಯ ಮೂಳೆಗಳಂತೆ....?

ಇಂದು :
ನ್ಯಾಯ ಬೇಡಿ
ಎದ್ದೆದ್ದು ಕುಣಿದ ಬೀದಿ
ನಿದ್ದೆ ಹೋಗಿದೆ,
ಹಸುಗರುವಿಗೆ ಹಾಲುಣಿಸಲೊಲ್ಲದ ಗೌರಿ
ಕಂಬನಿ ಸುರಿಸುವ ಮೂಕಬಸವ
ಸಾವಿನ ಮನೆಯಂಗಳದಲ್ಲಿ
ಕಣ್ಣೀರು ರಂಗವಲ್ಲಿ....
ಮಗುವೊಂದು ಕರೆಯುತಿದೆ
ಬಾ ಗೆಳೆಯಾ....
ಆಡೋಣ ಬಾ.... ಗೋಲಿಬಾರಿನಾಟ!

ನಾನು ಅಪ್ಪನಂತೆ
ನೀನು ಪೋಲಿಸಂತೆ....
ಸತ್ತ ಅಪ್ಪ ಎದ್ದು ಬಂದಂತೆ
ನಾನು ಮತ್ತೆ ಎದ್ದು ಬಂದಂತೆ....
ಅವ್ವನ ಮೌನ ಕತ್ತರಿಸಿದಂತೆ
ಅಜ್ಜಿಯ ಕಣ್ಣೀರ ಒರಿಸದಂತೆ...
ಬಾ ಗೆಳೆಯಾ ...
ಆಡೋಣ ಬಾ... ಗೋಲಿಬಾರಿನಾಟ!

– ಬಿ.ಶ್ರೀನಿವಾಸ

JANASHAKTHI KANNADA VARA PATRIKE : Printed by G.N.NAGARAJ, No 12. 18th Cross, S.R.Nagar, BANGALORE-560027
Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12. 18th Cross, S.R.Nagar, BANGALORE - 560 027 Karnataka (State) and Published at BANGALORE No 12. 18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor : S.Y.GURUSHANTH